ಲಂಕೇಶ್


ಡಿಸೆಂಬರ್ 19, 2012 ಪುಟ 20 ರೂ. 14/-


ಬಾಬರಿ ಮಸೀದಿ ಧ್ವಂಸಕ್ಕೆ 20 ವರ್ಷ



ಮಂಕುದಿಣ್ಣೆಗಳ ಪ್ರಳಯ


ಅಟ್ಟಹಾಸ ಸಿನಿಮಾ





ರಾಜ್‌ಗೆ ಅವಮಾನ?

ಹಾವೇರಿ ಸಮಾವೇಶಕ್ಕೆ ಉದಾಸಿ ದುಡ್ಡು




BJP-KJP ಸೇಫ್ ಗೇಮ್

ಮಂಗಳೂರು: ರೌಡಿ ಬಿಜ್ಜೈ ರಾಜಾ ಮಟಾಷ್

ನಿಗಮ ಮಂಡಳಿಗಳಲ್ಲಿ ಬಿಜೆಪಿ ನಾಯಕರ ಲೂಟಿ

ಸ್ವಯಂನಾಶದಿಂದ ಪಾರಾದ ರಿಕಿ ಪಾಂಟಿಂಗ್



ಆಸ್ಟ್ರೇಲಿಯಾದ ಕ್ರಿಕೆಟರ್ ರಿಕಿ ಪಾಂಟಿಂಗ್ ಇನ್ನು ಮುಂದೆ ಕ್ರಿಕೆಟ್ ಆಡುವುದಿಲ್ಲ.

"ನೀನು ಆಡಿದ್ದು ಸಾಕು" ಎಂದು ಆಯ್ಕೆದಾರರು ಹೇಳುವ ಮೊದಲೇ ರಿಕಿ "ನಾನು ಆಡಿದ್ದು ಸಾಕು" ಎಂದು ತೀರ್ಮಾನಿಸಿ ಆಟದ ಮೈದಾನದಿಂದ ಹೊರನಡೆದಿದ್ದಾನೆ. ಕಳೆದ ಹದಿನೈದಿಪ್ಪತ್ತು ವರ್ಷದಲ್ಲಿ ರಿಕಿ ಆಡಿದ ಮ್ಯಾಚ್‌ಗಳು, ಬಾರಿಸಿದ ಸೆಂಚುರಿಗಳು, ಓಡಿ ಓಡಿ ರಾಶಿ ಹಾಕಿಕೊಂಡ ರನ್ನುಗಳ ಬಗ್ಗೆ ಕನ್ನಡ ದಿನಪತ್ರಿಕೆಗಳು ತಮ್ಮ ಎಂದಿನ ನೀರಸ ಶೈಲಿಯಲ್ಲಿ ಬರೆದು ತಮ್ಮ ಕರ್ತವ್ಯ ಪೂರೈಸಿವೆ.

ರಿಕಿ ಆಟ ಬಿಟ್ಟ ಸಮಯದಲ್ಲೇ ದೂರದ ಇಂಗ್ಲೆಂಡ್‌ನಲ್ಲಿ ಇನ್ನೊಬ್ಬ ಕ್ರಿಕೆಟರ್ ಜೆಫ್ರಿ ಬಾಯ್ಕಾಟ್‌ಗೆ ಕ್ಯಾನ್ಸರ್ ಕಾಯಿಲೆಯಾಗಿರುವ ಸುದ್ದಿ ಕೇಳಿಬಂದಿದೆ.

ಆ ಮಾತಿನ ರಾಜನಿಗೆ ಆಗಿರುವುದು ನಾಲಿಗೆಯ ಕ್ಯಾನ್ಸರ್!

ಮತ್ತೊಂದೆಡೆ-ಬೆಂಗಳೂರಿನಲ್ಲಿ ಇಂಡಿಯಾ ಟೀಂ ವಿರುದ್ಧ ಟೆಸ್ಟ್ ಮ್ಯಾಚ್ ಆಡಲು ಪಾಕಿಸ್ತಾನದವರಿಗೆ ಅವಕಾಶ ಕೊಡಲ್ಲ ಎಂದು ಶ್ರೀರಾಮ ಸೇನೆಯ ಮುತಾಲಿಕ್ ಹೇಳಿದ್ದಾನೆ. ತನ್ನೊಂದಿಗೆ ಮೂರುಮುಕ್ಕಾಲು ಜನರನ್ನು ಇಟ್ಟುಕೊಂಡಿರುವ ಈ ಮೇಲ್ಜಾತಿ ಪುರೋಹಿತನಿಗೆ ಮುಸ್ಲಿಮರ ವಿರುದ್ಧ ವಿಷ ಕಾರಲು ಇದು ಇನ್ನೊಂದು ನೆಪ ಅಷ್ಟೆ. ಇವನ ಗುಂಪು ನಮ್ಮ ಸಮಾಜಕ್ಕೆ ಅಂಟಿರುವ ಇನ್ನೊಂದು ಕ್ಯಾನ್ಸರ್.

ಕ್ರಿಕೆಟ್ ಅದೆಷ್ಟು ರಂಜನೀಯ ಆಟವೊ ಅಷ್ಟೇ ಗೌಜುಗದ್ದಲದ, ಅದರಲ್ಲಿ ಭಾಗಿಯಾಗುವ ಜನರ ಚಿಲ್ಲರೆ ವರ್ತನೆಗಳಿಂದ ರೇಜಿಗೆ ಹುಟ್ಟಿಸುವ ಆಟವೂ ಹೌದು. ಇದರ ಗದ್ದಲವು ಅನೇಕ ಸಾರಿ ಒಂದು ದೇಶದ ಬಹುಮುಖ್ಯ ವಿಚಾರಗಳನ್ನೆಲ್ಲ ಬದಿಗೆ ಸರಿಸುವ ಕೆಟ್ಟ ಶಕ್ತಿ ಹೊಂದಿದೆ. ಈ ಆಟದಲ್ಲಿ ಹರಿದಾಡುವ ಹಣ, ಖ್ಯಾತಿ, ಪ್ರಖ್ಯಾತಿಯ ಭ್ರಮೆಗಳನ್ನು ತಡೆದುಕೊಂಡು **Mental Balance** ಉಳಿಸಿಕೊಂಡವರ ಸಂಖ್ಯೆ ಕಮ್ಮಿ.

ರಿಕಿ ಪಾಂಟಿಂಗ್ ಕೂಡ ಇದಕ್ಕೆ ಹೊರತಾದವನೇನಲ್ಲ.

ಹದಿನೆಂಟು ವರ್ಷ ದಾಟುವ ಮುನ್ನವೇ ಇಂಟರ್‌ನ್ಯಾಷನಲ್ ಕ್ರಿಕೆಟ್‌ಗೆ ಬಂದ ಪಾಂಟಿಂಗ್ ದೊಡ್ಡ ಸಾಧನೆ ಮಾಡಿ ನಿವೃತ್ತಿಯಾಗುವ ಮುನ್ನ ನಾಲ್ಕಾರು ಬಾರಿ ಟೀಂನಿಂದ ಹೊರ ದಬ್ಬಿಸಿಕೊಂಡಿದ್ದ. ಕಳಪೆ ಆಟದ ಕಾರಣಕ್ಕಲ್ಲ...!

ಮಿತಿಮೀರಿದ ಕುಡಿತ ಹಾಗೂ ಜೂಜಿನ ಚಟಗಳಿಗಾಗಿ ರಿಕಿ ಪಡೆದಿದ್ದ ಶಿಕ್ಷೆ ಅದಾಗಿತ್ತು, ಅದೊಂದು ರೀತಿ ಸ್ವಯಂನಾಶದ ಹಾದಿ. ಆಸ್ಟ್ರೇಲಿಯಾದ ಮಧ್ಯಮ ವರ್ಗದ ಕುಟುಂಬದಿಂದ ಬಂದಿದ್ದ ರಿಕಿ ಪಾಂಟಿಂಗ್ ಯಾವಾಗ ಚಿಕ್ಕ ವಯಸ್ಸಿನಲ್ಲೇ ಭಾರಿ ದುಡ್ಡು ಕೀರ್ತಿ ಹೊಂದಲು ಶುರು ಮಾಡಿದನೋ ತಕ್ಷಣ ಅವನ ಚಿತ್ತ ಹಡಬೆ ಚಟುವಟಿಕೆಗಳತ್ತ ಹರಿಯಿತು. ಅವನ ಟೀಂನ ಜೊತೆಗಾರರಾಗಿದ್ದ ಶೇನ್ ವಾರ್ನ್ ಹಾಗೂ ಮಾರ್ಕ್ ವಾ ಕೂಡ ರಿಕಿಯಂತೆ ಡಾಗ್‌ರೇಸ್, ಕುಡಿತ ಹಾಗೂ ಹೆಂಗಸರ ಶಿಕಾರಿಯ ಗೀಳಿನವರು. ರಿಕಿ ಪಾಂಟಿಂಗ್ ಸುಲಭವಾಗಿ ಅವರೊಂದಿಗೆ ಸೇರಿಕೊಂಡ. ಈ ಚಿಲ್ಲರೆ ಚಟುವಟಿಕೆಗಳಲ್ಲೇ ರಿಕಿಯ ಚೈತನ್ಯವೆಲ್ಲಾ ಚದುರಿಹೋಗಿ ಆಟದ ಮೇಲಿರಬೇಕಿದ್ದ ಫೋಕಸ್ ಕಳೆದುಕೊಂಡ. ಅವನ ವ್ಯಕ್ತಿತ್ವದಲ್ಲಿರಬೇಕಿದ್ದ ಸಂಪನ್ನತೆ ಹುರಿಗಟ್ಟಲಿಲ್ಲ. ಹೀಗಿದ್ದಾಗೊಮ್ಮೆ ಸಿಡ್ನಿಯ ರೆಡ್‌ಲೈಟ್ ಏರಿಯಾದಲ್ಲಿದ್ದ ಬೀಫ್‌ಸ್ಟೀಕ್ ಬಾರ್ ಒಂದಕ್ಕೆ ಹೋದ ರಿಕಿ ಅಲ್ಲೊಬ್ಬಳನ್ನು ಕೆಣಕಿ ಸಮಾ ಒದೆ ತಿಂದ. ವಿಯಟ್ನಾಂನಲ್ಲಿ ನರಹತ್ಯೆ ನಡೆಸಲು ನಿಯೋಜನೆಗೊಂಡಿದ್ದ ಅಮೆರಿಕನ್ ಸೈನಿಕರ ಮೋಜು-ಮಸ್ತಿಗೆಂದೇ ಈ ಬಾರ್ ಅನ್ನು **1968** ರಲ್ಲಿ ಶುರು ಮಾಡಲಾಗಿತ್ತು. ಹಾಗಾಗಿ ಅಲ್ಲಿ ಸದಾ ಕುಡುಕರು, ತಲೆಹಿಡುಕರು, ವೇಶ್ಯೆಯರು ತುಂಬಿರುತ್ತಿದ್ದರು. ಅಂಹತ ಸ್ಥಳದಲ್ಲೂ ರಿಕಿ ಏಟು ತಿಂದನೆಂದರೆ ಅವನ ಉಡಾಳತೆ ಎಷ್ಟಿದ್ದಿರಬೇಕು. ಆ ನಂತರ ಕಲ್ಕತ್ತಾಗೆ ಆಡಲು ಬಂದಿದ್ದಾಗೊಮ್ಮೆ ಅಲ್ಲಿನ ಈಕ್ವಿನಾಕ್ಸ್ ಎಂಬ ನೈಟ್‌ಕ್ಲಬ್‌ಗೆ ಹೋದವನೆ ಎದುರಿಗೆ ಹೆಣ್ಣೊಬ್ಬಳ ಬಳಿ ನಿಂತು ತನ್ನ ಪ್ಯಾಂಟ್‌ಜಿಪ್ ಎಳೆದು ಹಾಕಿ ಏನೇನೊ ಚೀರಿಕೊಂಡಿದ್ದ. ಅವತ್ತಿನ ದಿನ ಇಂಡಿಯಾ ಟೀಂಗೆ ಆಸ್ಟ್ರೇಲಿಯಾ ಸೋತಿತ್ತು, ಅದರಿಂದ ಆಕ್ರೋಶಗೊಂಡಿದ್ದ ರಿಕಿ ಹೀಗೆ ಪ್ರತಿಕ್ರಿಯಿಸಿದ್ದ. ಆಶ್ಚರ್ಯ ಅಂದರೆ ಅಂತಹ ಕ್ಲಬ್‌ಗಳಲ್ಲಿ ಹೆಣ್ಣನ್ನು ಒಲಿಸಿಕೊಳ್ಳಲು ವಿಶೇಷ ಪ್ರತಿಭೆ, ಪರಿಶ್ರಮ ಅಥವಾ ವ್ಯಕ್ತಿತ್ವವೇನೂ ಬೇಕಿರಲಿಲ್ಲ. ಅಲ್ಲಿಗೆ ಬಂದುಹೋಗುವವರೆಲ್ಲಾ ಶಿಕಾರಿ ಮಾಡಲೊ ಇಲ್ಲಾ ಶಿಕಾರಿಗೊಳಗಾಗಲೋ ನಿರ್ಧರಿಸಿಕೊಂಡೇ ಬಂದಿರುತ್ತಾರೆ. ಆದರೆ ರಿಕಿ ಅಲ್ಲಿಂದಲೂ ಕುತ್ತಿಗೆ ಹಿಡಿದು ಹೊರದಬ್ಬಿಸಿಕೊಂಡಿದ್ದ.

ಇದೆಲ್ಲಾ ಘಟನೆಗಳಾದಾಗೆಲ್ಲಾ ಆಯ್ಕೆದಾರರು ರಿಕಿ ಪಾಂಟಿಂಗ್‌ಗೆ ಶಿಕ್ಷೆ ವಿಧಿಸಿ ಟೀಂನಿಂದ ಆಚೆ ಕಳುಹಿಸುತ್ತಿದ್ದರು.

ಆಗ ಆಸ್ಟ್ರೇಲಿಯಾ ಟೀಂನ ಕ್ಯಾಪ್ಟನ್ ಆಗಿದ್ದವನು ಸ್ಟೀವ್ ವಾ.

ವಾ ಒಮ್ಮೆ ರಿಕಿಯನ್ನು ಕೂರಿಸಿಕೊಂಡು ಅವನ ನಿಜವಾದ ಸಾಮರ್ಥ್ಯವೇನು, ವ್ಯಕ್ತಿತ್ವದ ದೌರ್ಬಲ್ಯಗಳೇನೆಂದು ತಣ್ಣಗೆ ವಿವರಿಸಿದ. ರಿಕಿ ತನ್ನ ಬದುಕಿನ ಆದ್ಯತೆಗಳೇನೆಂದು ತಕ್ಷಣ ನಿರ್ಧರಿಸಿ ದೃಢ ಮನಸ್ಸಿನಿಂದ ಹೊರಟರೆ ಕ್ರಿಕೆಟ್ ಬದುಕಿನಲ್ಲಿ ಅತ್ಯುನ್ನತ ಸಾಧನೆ ಮಾಡುವ ಅವಕಾಶಗಳ ಬಗ್ಗೆ ವಿವರಿಸಿದ.

ಅದೃಷ್ಟವಶಾತ್ ರಿಕಿಗೆ ಅದೆಲ್ಲಾ ಅರ್ಥವಾಯಿತು. ಅವನೊಂದು ಪತ್ರಿಕಾಗೋಷ್ಠಿ ಕರೆದು ತನ್ನ ತಪ್ಪುಗಳನ್ನು ಪ್ರಾಂಜಲ ಮನಸಿನಿಂದ ಒಪ್ಪಿಕೊಂಡ. ಆಟದತ್ತ ಗಮನ ಹರಿಸುವುದಾಗಿ ಹೇಳಿದ.

ಅವತ್ತಿನಿಂದಾಚೆಗೆ ರಿಕಿ ಪಾಂಟಿಂಗ್ ಬದಲಾದ. ಅವನಿಗಿದ್ದ 'ಪಂಟರ್' ಎಂಬ ಅಡ್ಡ ಹೆಸರು ಹಾಗೇ ಉಳಿಯಿತಾದರೂ ಅವನು ತನ್ನೆಲ್ಲ ಪ್ರತಿಭೆ-ಸಾಮರ್ಥ್ಯವನ್ನು ಪಣಕ್ಕಿಟ್ಟು ಹೋರಾಡುವ 'ಪಂಟರ್' ಎನಿಸಿಕೊಂಡ. ವೈಫಲ್ಯಗಳು




ಸಚಿನ್ ಸರ್ಪದೋಷ ಪೂಜೆ

ಎದುರಾದಾಗ ತನ್ನ ತಪ್ಪುಗಳೇನೆಂದು ಗ್ರಹಿಸಿದ. ಟೀಂ ಕ್ಯಾಪ್ಟನ್ ಆದಾಗ ತಾನೇ ಮುಂದೆ ನಿಂತು ಕೆಚ್ಚೆದೆಯ ಹೋರಾಟದ ಇನ್ನಿಂಗ್ಸ್‌ಗಳನ್ನು ಕಟ್ಟಿ ಗೆಲುವು ತಂದ.

ಸಾರಾಂಶದಲ್ಲಿ ಹೇಳಬೇಕೆಂದರೆ ರಿಕಿ ಪಾಂಟಿಂಗ್ ಸ್ವಯಂನಾಶದ ಹಾದಿಯಲ್ಲಿದ್ದವನು ತನ್ನನ್ನು ತಾನೇ ರಕ್ಷಿಸಿಕೊಂಡು ಯಶಸ್ಸಿನ ಹಾದಿ ಹಿಡಿದಿದ್ದ.

ನಿಮಗಿಲ್ಲಿ ಆಸ್ಟ್ರೇಲಿಯಾದ ಕ್ರಿಕೆಟ್ ಆಯ್ಕೆದಾರರ ಬಗ್ಗೆ ಹೇಳಬೇಕು. ಅಲ್ಲಿ ಇಂಡಿಯಾದಂತೆ ಪುಢಾರಿ ಹಣ, ಜಾತಿ ಲಾಬಿಗಳ ಕೈವಾಡ ಕಡಿಮೆ.




ರಿಕಿ-ಪತ್ನಿ ರಿಯ

ರಿಕಿ ಪಾಂಟಿಂಗ್‌ನ ನಿಜವಾದ ಸಾಮರ್ಥ್ಯ ತಿಳಿದಿದ್ದವರು ಅವನನ್ನು ವೈ... ಪತನದ ಹಾದಿಯಿಂದ ಬಿಡಿಸಿ ಎಳೆತಂದು ಬದುಕಿನ ದಾರಿ ತೋ... ವಿಶ್ವಖ್ಯಾತ ಬೌಲರ್ ಆಗಿದ್ದ ಗ್ಲೇನ್ ಮ್ಯಾಗ್ರಾತ್ ನ್ಯೂ ಸೌತ್ ... ಹಳ್ಳಿಗಾಡೊಂದರಲ್ಲಿ ಬೌಲರ್ ಆಗಿದ್ದಾಗ ಡೌಗ್ ವಾಲ್ಟರ್ಸ್ ಎಂಬ ... ಆಡಳಿತಾಧಿಕಾರಿಯ ಕಣ್ಣಿಗೆ ಬಿದ್ದು ವಿಶ್ವ ಕ್ರಿಕೆಟ್‌ನಲ್ಲಿ ವಿಜೃಂಭಿಸಿದಂತಾ... ತನ್ನ ಚೈತನ್ಯವನ್ನೆಲ್ಲ ಕ್ರಿಕೆಟ್‌ಗೆ ಬಸಿದು ಕೀರ್ತಿ ಪಡೆದ ಮ್ಯಾಗ್ರಾತ್ ತನ... ಮುಗಿಯಿತೆನಿಸಿದಾಗ ಗಂಭೀರವಾಗಿಯೇ ಆಟದ ಮೈದಾನ ಬಿಟ್ಟುಹ...

ನಮ್ಮಲ್ಲಿ ವಿಶ್ವ ಪ್ರಸಿದ್ಧ ಸಚಿನ್ ತೆಂಡೂಲ್ಕರ್ ರನ್ ಬರ ಎದುರಿ... ಒಮ್ಮೆ ಕುಕ್ಕೆ ಸುಬ್ರಮಣ್ಯಕ್ಕೆ ಬಂದು ವಿಶೇಷ ಪೂಜೆ ಮಾಡಿಸಿಹೊ... ಯಾರೋ ಮುಠ್ಠಾಳನೊಬ್ಬ ಸಚಿನ್‌ಗೆ "ನಿನಗೆ ಸರ್ಪದೋಷ ... ಅದಕ್ಕೆ ರನ್ ಹೊಡೆಯಲು ಆಗುತ್ತಿಲ್ಲ" ಎಂದಿದ್ದನ್ನು ನಂಬಿ ಸಚಿನ್ ... ನಿವಾರಣೆಗೆಂದು ಸುಬ್ರಮಣ್ಯಕ್ಕೆ ಬಂದಿದ್ದ. ನಮ್ಮ ಕ್ರಿಕೆಟ್ ಆಯ್ಕೆ ಸಮಿ... ಕೆ. ಶ್ರೀಕಾಂತ ಒಮ್ಮೆ ಬ್ರಾಹ್ಮಣ ಪುರೋಹಿತರನ್ನೆಲ್ಲಾ ಕರೆಸಿ ತುಲ... ಮಾಡಿಸಿಕೊಂಡು ವಿಶೇಷ ಪೂಜೆ ಮಾಡಿಸಿದ್ದ.

ನಾನು ಆಲ್‌ರೌಂಡರ್ ಪತ್ರಿಕೆಗೆ ಕ್ರೀಡೆ ಕುರಿತು ಬರೆಯುತ್ತಿದ್ದಾಗ ಕನ... ಅಂಡರ್ **14, 16, 19** ತಂಡಗಳ ಆಯ್ಕೆದಾರರಲ್ಲಿ ಕೆಲವರು ಹೊಸ ... ಆಟಗಾರರನ್ನು ಆಯ್ಕೆ ಮಾಡುವಾಗ ಕೆಲವು ಆಕಾಂಕ್ಷಿಗಳ ಜೊತೆಗಿ... ಕುಟುಂಬದ ಹೆಣ್ಣುಮಕ್ಕಳನ್ನು ಲೈಂಗಿಕ ಶೋಷಣೆಗೆ ಒಳಪಡಿಸಿದ್ದನ್ನು ... ಅವರ ಮಕ್ಕಳಿಗೆ ಛಾನ್ಸ್ ಕೊಡಿಸುವ ಆಮಿಷ ಒಡ್ಡಿ ಈ ಹಲ್ಕಟ್ ... ನಡೆಯುತ್ತಿದೆ. ಆಸ್ಟ್ರೇಲಿಯನ್ನರ ಪ್ರೊಫೆಶನ್‌ಲಿಸಂ ಹಾಗೂ ಇಲ್ಲಿ... ಚೋಭದ್ರಗೇಡಿತನಗಳನ್ನೊಮ್ಮೆ ಹೋಲಿಸಿ ನೋಡಿ.

ಕ್ರಿಕೆಟ್ ಜಗತ್ತಿನಲ್ಲಿ ವರ್ಣರಂಜಿತ ವ್ಯಕ್ತಿಗಳು ಬಂದುಹೋಗಿ... ಕ್ರಿಕೆಟ್‌ನಿಂದಾಚೆಗಿನ ಬದುಕಿನ ಸವಿಯನ್ನೂ ಬಲ್ಲವರಿದ್ದಾರೆ. ದಕ್ಷಿಣ ಆ... ಲಾನ್ಸ್ ಕ್ಲುಸನರ್‌ಗೆ ಕೃಷಿ ಹಾಗೂ ಫಿಶಿಂಗ್ ಇಷ್ಟವಾದರೆ ವೆಸ್ಟ್ ಇಂ... ಕರ್ಟ್ಲಿ ಆಂಬ್ರೋಸ್ ಹಾಗೂ ರಿಚಿ ರಿಚರ್ಡ್‌ಸನ್ ಕ್ರಿಕೆಟ್ ಬಿಟ್ಟ... ಬಾರ್ಬಡೋಸ್‌ನಲ್ಲಿ ಗಿಟಾರ್ ಬಾರಿಸುತ್ತಾ, ಹಾಡು ಹೇಳುತ್ತಾ ಹೊಸ ... ಕಂಡುಕೊಂಡಿದ್ದಾರೆ. ತಾವು ಸೆಲೆಬ್ರಿಟಿಗಳೆಂಬ ಹಮ್ಮು ಅವರಿಗಿಲ್ಲ. ಇಂಡಿ... ಕ್ರಿಕೆಟರ್‌ಗಳಲ್ಲಿ ಹೀಗೆ ಮುದ ನೀಡಬಲ್ಲ ವ್ಯಕ್ತಿತ್ವದ ಆಟಗಾರರು ...



ಕೆ. ಶ್ರೀಕಾಂತ್

ಇವರಿಗೆ ಇಡೀ ಜಗತ್ತೇ ತಮ್ಮ ಸುತ್ತ ಸುತ್ತುತ್ತಿದೆ ಎಂಬ ಭ್ರಮೆ ಯಾವಾ... ಇರುತ್ತದೆ. ಹಾಗಾಗಿ ಆಡುತ್ತಿದ್ದಾಗಲಿ ಅಥವಾ ರಿಟೈರ್ಡ್ ಆಗು... ಅವರಾಡುವ ಮಾತುಗಳಲ್ಲಿ ರಂಜನೆ, ಒಳನೋಟಗಳಿರುವುದಿಲ್ಲ. ಶುದ್ಧ ... ಇವರು.

ಯಾವುದೋ ಗಟಾರದಲ್ಲಿ ಕುಡಿದು ಬಿದ್ದು ನಾಶವಾಗಿ ಹೋಗಬಹು... ರಿಕಿ ಪಾಂಟಿಂಗ್ ಅಲ್ಲಿರಲು ಒಪ್ಪದೆ ತನ್ನನ್ನೇ ಕಾಪಾಡಿಕೊಂಡು ಒ... ಸಾಧಿಸಿ ಹೋಗಿದ್ದಾನೆ. ತನ್ನನ್ನು ಕಾಪಾಡಿದ ಪತ್ನಿ ರೆಯಾನ್ನಳ ಬಗ್ಗೆ ... ನನ್ನ ಜೀವನದಲ್ಲಿರೋದೆ ಚೆನ್ನ" ಎಂದು ಕೃತಜ್ಞತೆಯ ಮಾತನಾಡಿದ...

ನಮ್ಮನ್ನೆಲ್ಲ ಬಹಳ ಕಾಲ ರಂಜಿಸಿ ಆಟದ ಮೈದಾನದಿಂದ ನಿರ್ಗಮಿ... ರಿಕಿ ಪಾಂಟಿಂಗ್‌ಗೆ ಅಭಿನಂದನೆಗಳು.

ಅಂದಹಾಗೆ,

ಜೆಫ್ರಿ ಬಾಯ್ಕಾಟ್ ತನ್ನ ಕಾಯಿಲೆಯ ಕುರಿತು ಹೀಗೆ ಹೇಳಿಕೊಂ... "ಈ ಮ್ಯಾಚ್‌ನಲ್ಲಿ ನಾನು ಮತ್ತು ಕ್ಯಾನ್ಸರ್ ಇಬ್ಬರೆ ಇದೀವಿ. ನನಗೆ ಗೆಲ್ಲಬ... ಆಸೆ ಇದೆ."

ಬಾಯ್ಕಾಟ್‌ಗೆ ಜಯ ಸಿಗಲಿ.


■ ಪಾರ್ವ...



ಶೇರ್ ಆಲಿಖಾನ್

ಶೇರ್ ಆಲಿಖಾನ್ ಬಗ್ಗೆ ಓದಿದಾಗ

ನನ್ನ ಗೆಳೆಯ ಎಂ.ಸಿ.ನಾಗರಾಜನ 'ತೇಲುತೇಲುತಾ ಅಂಡಮಾನ್‌ಗೆ' ಪುಸ್ತಕ ಇತ್ತೀಚೆಗೆ ಬಿಡುಗಡೆಯಾಯಿತು. ಅದರಲ್ಲಿ ಎಂ.ಸಿ. ಅಂಡಮಾನಿನ ಸೆಲ್ಯೂಲಾರ್ ಜೈಲಿನ ಬಗ್ಗೆ ದಾಖಲಿಸುತ್ತಾ ಶೇರ್ ಖಾನ್ ಎಂಬ ಕೈದಿಯ ಕತೆ ಹೇಳಿದ್ದಾನೆ.



ಲಾರ್ಡ್ ಮೆಯೋ

1857 ರ ಸಿಪಾಯಿದಂಗೆಯಲ್ಲಿ ಬಂಡೆದ್ದವರನ್ನು ಕೊಂದು ಕೊನೆಯ ಮೊಗಲ್ ಚಕ್ರವರ್ತಿ ಬಹಾದೂರ್ ಷಾ ಜಫರ್‌ನನ್ನು ಬರ್ಮಾದಲ್ಲಿ ಸೆರೆಯಲ್ಲಿಟ್ಟ ಬ್ರಿಟಿಷರು ಸೆರೆಸಿಕ್ಕ ಉಳಿದ ಬಂಡುಕೋರರನ್ನು ಅಂಡಮಾನಿಗೆ ಸಾಗಿಸಿದರು. ಹಾಗೆ ಕರಾಚಿಯಿಂದ ಬಂದ ಮೊದಲ ಬ್ಯಾಚ್‌ನ ಕೈದಿಗಳ ಸಂಖ್ಯೆಯೇ 733 ರಷ್ಟಿತ್ತು. ಈ ಬಂಧಿಗಳ ಕೈಲೇ ಅವರಿರಬೇಕಾದ ಜೈಲುಗಳನ್ನು ಬ್ರಿಟಿಷರು ಕಟ್ಟಿಸಿದರು. ತಮ್ಮ ಜೈಲುಗಳನ್ನು ತಾವೇ ಕಟ್ಟುತ್ತಾ ಬದುಕಿದ್ದೂ ಸತ್ತಂತೆ ಅಥವಾ ಸಾಯುತ್ತಾ ಬದುಕಿದ ಆ ಸ್ವಾತಂತ್ರ ಹೋರಾಟಗಾರರನ್ನು ನೆನೆದರೆ ಸಂಕಟವಾಗದಿರದು. ಇಂಥ ಕ್ರೂರ ಸೆರೆಮನೆ ಕಟ್ಟಿದ ಬ್ರಿಟಿಷರಿಗೆ ಬೆಚ್ಚಿಬೀಳುವಂತಹ ಏಟು ಕೊಟ್ಟವನೇ ಈ ಶೇರ್ ಆಲಿ ಖಾನ್.

ಪೇಶಾವರ್‌ನವನಾಗಿದ್ದ ಖಾನ್ ಆಗಿನ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಮೆಯೋ **1872** ರಲ್ಲಿ ಜೈಲಿನ ನಿರ್ಮಾಣದ ಪರಿಶೀಲನೆಗೆ ಬಂದಿದ್ದಾಗ ಅವನ ಮೇಲೆ ದಾಳಿ ನಡೆಸಿ ಇರಿದು ಕೊಂದ. ಇನ್ನೂರೈವತ್ತು ವರ್ಷಗಳ ಬ್ರಿಟಿಷ್ ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಭಾರತೀಯನೊಬ್ಬನಿಂದ ಹತ್ಯೆಗೊಳಗಾದ ಒಬ್ಬನೇ ಅತ್ಯುನ್ನತ ಪದವಿಯ ಬ್ರಿಟಿಷ್‌ನೆಂದರೆ ಅದು ಲಾರ್ಡ್ ಮೆಯೋ ಮಾತ್ರ.

ನಂತರ ಶೇರ್ ಆಲಿ ಖಾನ್ ನೇಣಿಗೇರಿಸಲ್ಪಟ್ಟ.

ಅಂಡಮಾನಿನ ಸೆಲ್ಯೂಲಾರ್ ಜೈಲಿನ ಬಗ್ಗೆ ಮಾತನಾಡುವಾಗ ನಮ್ಮಲ್ಲಿ ಹಿಂದೂ ಕೋಮುವಾದಿ ವಿ.ಡಿ. ಸಾವರ್ಕರ್‌ನನ್ನು ಮಾತ್ರ ನೆನೆಯಲಾಗುತ್ತದೆ. ಆದರೆ ಈ ಶೇರ್ ಖಾನ್ ಬೇರೆಲ್ಲರಿಗಿಂತ ದೊಡ್ಡ ಸಾಹಸಿ ಹಾಗೂ ಗಟ್ಟಿಗನಾಗಿದ್ದ.

ಮಂಕುದಿಣ್ಣೆಗಳ ಪ್ರಳಯ


ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಈಗ ಎಲ್ಲೆಲ್ಲೂ ಪ್ರಳಯದ್ದೇ ಸುದ್ದಿ. ...ಭವಗೇಡಿ ಜ್ಯೋತಿಷಿಗಳು, ಧರ್ಮವನ್ನೇ ದಂಧೆ ...ದಿಕೊಂಡಿರುವ ಕಳ್ಳ ಸ್ವಾಮಿಗಳು ಮತ್ತು ತಲೆಕೆಟ್ಟ ...ವರು ನೀಡುವ ತರ್ಕಗಳನ್ನು ನಂಬುವ ನನ್ನಂತಹ ...ಸ್ತಿಕರು 'ಇದೇ ಡಿಸೆಂಬರ್ 12ರಂದು ...ಭವಿಸಲಿರುವ' ಪ್ರಳಯದ ಬಗ್ಗೆ ಕಿಂಚಿತ್ತೂ ಗಮನ ...ಸುತ್ತಿಲ್ಲ. ಆದರೆ ಜ್ಯೋತಿಷ್ಯ ಧಾರ್ಮಿಕ ಸ್ವಾಮಿ, ...ಟ್ಟವರು, ಟಿಆರ್‌ಪಿಯನ್ನು ಏರಿಸಿಕೊಳ್ಳಲು ...ತಹ ವಿಷಯಗಳನ್ನೇ ಎತ್ತಿಕೊಂಡು ಬ್ರೇಕಿಂಗ್ ...ನ್ಯೂಸ್ ಬಿತ್ತರಿಸುವ ಟಿವಿ ಚಾನೆಲ್‌ಗಳು ಮತ್ತು ...ವು ಪತ್ರಿಕೆಗಳನ್ನು ನಂಬುವ ಜನ ...ಭಯಾಕ್ರಾಂತರಾಗಿದ್ದಾರೆ.

...ಡಿಸೆಂಬರ್ 12, ಅಂದರೆ 12/12/2012 ರಂದು ...ಳಯ ಸಂಭವಿಸುತ್ತದೆ, ಅದಾಗದಿದ್ದರೆ ಡಿಸೆಂಬರ್ ...ರಿಂದ ಪ್ರಾರಂಭವಾಗುವ ಕರಾಳ ಕತ್ತಲು ಮೂರು ...ಗಳ ಕಾಲ ಇಡೀ ಭೂಮಿಯನ್ನು ...ಅಂಧಕಾರದಲ್ಲಿಡುತ್ತದೆ, ಆನಂತರ ಭೂಮಿಯೇ ...ನಾಶವಾಗಲಿದೆ ಎಂದೆಲ್ಲ ಸಾಕಷ್ಟು ಜನ ...ನಂಬಿರುವಂತಿದೆ. ಅಷ್ಟೇ ಅಲ್ಲ, ಮುಂದಿನ ವಾರ ...ರು ಎಂಬ ಗ್ರಹ ಎಷ್ಟು ಪ್ರಬಲವಾಗಿ ...ಭೂಮಿಯನ್ನು ಅಪ್ಪಳಿಸಲಿದೆ ಎಂದರೆ ಭೂಮಿಯೇ ...ಕೆಳಗಾಗುತ್ತದೆ; ಹೀಗೆ ಆಗುತ್ತದೆಂದು ಮಾಯನ್ ...ನಾಗರಿಕತೆ ನಾಲ್ಕು ಸಾವಿರ ವರ್ಷಗಳ ಹಿಂದೆಯೇ ...ಕರಾರುವಾಕ್ಕಾಗಿ ಲೆಕ್ಕ ಹಾಕಿತ್ತು; ಆಧುನಿಕ ವಿಜ್ಞಾನಿಗಳಿಗೆ



...ದರ ಬಗ್ಗೆ ಗೊತ್ತಿದ್ದರೂ ಅವರು ಬೇಕಂತಲೇ ...ವನ್ನು ಮುಚ್ಚಿಟ್ಟಿದ್ದಾರೆ ಎಂದೆಲ್ಲ ಹುಯಿಲೆಬ್ಬಿಸಿ ...ರನ್ನು ಭಯಗ್ರಸ್ತರನ್ನಾಗಿಸಿದ್ದಾರೆ. ಕನ್ನಡದ ಒಂದು ...ಚಾನೆಲ್ ಅಂತೂ ಡಿಸೆಂಬರ್ 12ಕ್ಕೆ ಕೌಂಟ್ ...ಡೌನ್ ಅನ್ನೇ ಪ್ರಾರಂಭಿಸುವ ಮಟ್ಟಕ್ಕೆ ಹೋಯಿತು. ...ಮಾತ್ರವಲ್ಲ, ಜಗತ್ತಿನ ಅತಿ ಶ್ರೇಷ್ಠ ವೈಜ್ಞಾನಿಕ ಸಂಸ್ಥೆ ...ಎಂದೇ ಹೆಸರುವಾಸಿಯಾಗಿರುವ ಅಮೆರಿಕದ ನಾಸಾ ...ಕೂಡ ಪ್ರಳಯ ಸಂಭವಿಸಲಿದೆ ಎಂದು ಹೇಳಿದೆ ...ಎಂಬ ಕಪೋಲಕಲ್ಪಿತ ವರದಿಗಳು ಹಲವು ...ಪತ್ರಿಕೆಗಳಲ್ಲಿ ಪ್ರಕಟಗೊಂಡವು. ವಾಸ್ತವವಾಗಿ ಯಾಕೆ ...ಸದ್ಯದಲ್ಲೇ ಪ್ರಳಯ ಸಂಭವಿಸುವುದಿಲ್ಲ ಎಂಬುದನ್ನು ...ಸಾಬೀತುಪಡಿಸಲು ಒಂದೆರಡು ದಿನ ಅಲ್ಲಲ್ಲಿ ಓದಿದನಂತರ ...ಸಂಗ್ರಹಮಾಡಿಕೊಂಡ ಹಲವು ವೈಜ್ಞಾನಿಕ ...ಮಾಹಿತಿಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಲು ...ಇಚ್ಛಿಸುತ್ತೇನೆ.

...ಮೊದಲಿಗೆ ನಾವೆಲ್ಲ ಇವತ್ತು ಈ ಭೂಮಿಯ ...ಮೇಲೆ ಇರುವುದಕ್ಕೆ ಕಾರಣ ಲಕ್ಷಾಂತರ ವರ್ಷಗಳ ...ಹಿಂದೆ ಸಂಭವಿಸಿದ ಒಂದು ದೊಡ್ಡ ಪ್ರಳಯವೇ ...ಎಂದರೆ ನಿಮಗೆ ಅಚ್ಚರಿಯಾಗಬಹುದು. ಆದರೆ ಅದು ...ನಿಜ. ಸುಮಾರು ಐದು ನೂರು ಕೋಟಿ ವರ್ಷಗಳ ...ಹಿಂದೆ ನಮ್ಮ ಭೂಮಿಯೂ ಇತರೆ ಗ್ರಹಗಳಂತೆ ...ಯಾವ ಜೀವ ಸಂಕುಲವನ್ನೂ ಹೊಂದದೆ ಸೂರ್ಯನ ...ನನ್ನು (ಕವಿ ಜಯಂತ್ ಕಾಯ್ಕಿಣಿ ಹೇಳುವಂತೆ) 'ಹಾಗೆ ಸುಮ್ಮನೆ' ಸುತ್ತುತ್ತಿತ್ತು, ಆದರೆ ಒಂದು ದಿನ ಬೃಹತ್ ...ಅಪಘಾತ ಸಂಭವಿಸಿತು. ಅದೇನೆಂದರೆ ದೊಡ್ಡದಾದ ...ಒಂದು ಆಸ್ಟರಾಯ್ಡ್ ಭೂಮಿಯ ಮೇಲೆ ರಭಸವಾಗಿ ...ಅಪ್ಪಳಿಸಿತು. ಅದರ ರಭಸ ಅದೆಷ್ಟು ತೀವ್ರವಾಗಿತ್ತೆಂದರೆ ...ಭೂಮಿಯ ಅಕ್ಷವೇ ಶೇ. 23.5ರಷ್ಟು ಬದಲಾಯಿತು. ...ಆ ಅಪ್ಪಳಿಕೆಯಿಂದಾಗಿ ಭೂಮಿಯ ಮೇಲೆ ...ಸಾವಿರಾರು ಅಡಿ ಆಳದ ಗುಂಡಿಗಳು ಮತ್ತು ...ಸಾವಿರಾರು ಅಡಿ ಎತ್ತರದ ಪ್ರದೇಶಗಳು ...ನಿರ್ಮಾಣಗೊಂಡವು. ಬದಲಾದ ಅಕ್ಷದಿಂದಾಗಿ ಇಲ್ಲಿ ...ವಿವಿಧ ಋತುಗಳು, ಅತಿಯಾದ ಬಿಸಿ ಮತ್ತು ಚಳಿ ...ಯ ಪ್ರದೇಶಗಳು ಸೃಷ್ಟಿಯಾದವು. ನಿಧಾನವಾಗಿ ಹಲವು ಪ್ರದೇಶಗಳಲ್ಲಿ ನೀರು ಸೃಷ್ಟಿಯಾಯಿತು. ಆ ನೀರಿನಲ್ಲಿ ಜೀವಸಂಕುಲಗಳು ನಿರ್ಮಾಣಗೊಂಡವು. ಕಾಲಕ್ರಮೇಣ ಮಾನವನೂ ಈ ಭೂಮಿಯ ಮೇಲೆ ರೂಪುತಳೆದ. ಹೀಗೆ ಒಂದು ಪವಾಡದಂತಹ ಆಕಸ್ಮಿಕ ಅಪಘಾತದಿಂದಾಗಿ ಇಲ್ಲಿ ಪ್ರಾರಂಭವಾದ ಜೀವಸಂಕುಲವು ಸೂರ್ಯನ ಶಕ್ತಿಯ ನೆರವಿನಿಂದ ಮುಂದುವರೆಯುತ್ತಾ ಬಂದಿವೆ. ಈ ಎಲ್ಲ ಕಾರಣಗಳಿಗೇ ಭೂಮಿಯನ್ನು ಅದೃಷ್ಟ ಪಡೆದ ಗ್ರಹ ಎಂದೇ ಪರಿಗಣಿಸಲಾಗಿದೆ. ಯಾಕೆಂದರೆ ಆ ಆಸ್ಟರಾಯ್ಡ್ ಸೂರ್ಯನಿಗೆ ಭೂಮಿಗಿಂತ ಅತಿ ಹತ್ತಿರದಲ್ಲಿರುವ ಅಥವಾ ತುಂಬಾ ದೂರದಲ್ಲಿರುವ ಗ್ರಹವನ್ನು ಅಪ್ಪಳಿಸಿದ್ದರೆ ಇಲ್ಲಾದಂತಹ ಪವಾಡ ಅಲ್ಲಾಗುತ್ತಿರಲಿಲ್ಲ. ನಮ್ಮೆಲ್ಲರ ಅದೃಷ್ಟಕ್ಕೆ ಸೂರ್ಯನಿಗೆ ಅತಿ ಹತ್ತಿರವೂ ಅಲ್ಲದ, ತುಂಬಾ ದೂರವೂ ಅಲ್ಲದ ಗ್ರಹವಾಗಿತ್ತು ನಮ್ಮೀ ಭೂಮಿ!

ವಾಸ್ತವ ಏನೆಂದರೆ ಬಿಲಿಯನ್ ವರ್ಷಗಳ ಹಿಂದೆ ಸಂಭವಿಸಿದ ಪ್ರಳಯದಿಂದಾಗಿ ಹೇಗೆ ಈ ಭೂಮಿಯ ಮೇಲೆ ಜೀವಸಂಕುಲಗಳು ಪ್ರಾರಂಭವಾದವೋ ಹಾಗೆಯೇ ಸಹಸ್ರಾರು ವರ್ಷಗಳ ನಂತರ ಈ ಭೂಮಿಯ ಮೇಲೆ ಮತ್ತೊಂದು ಪ್ರಳಯ ಸಂಭವಿಸಿ ಈ ಭೂಮಿಯ ಮೇಲಿರುವುದೆಲ್ಲ ನಾಶವಾಗುವ ಸಾಧ್ಯತೆಗಳೂ ಇದ್ದೇ ಇದೆ. ಅಂದಮಾತ್ರಕ್ಕೆ ಇದೇ ಡಿಸೆಂಬರ್ ತಿಂಗಳಲ್ಲಿ ಪ್ರಳಯ ಸಂಭವಿಸುತ್ತದೆ ಎಂದರ್ಥವಲ್ಲ.

ಈಗ ಚಾಲ್ತಿಗೆ ಬಂದಿರುವ ಹಲವಾರು 'ಮಾಹಿತಿ'ಗಳತ್ತ ಗಮನ ಹರಿಸೋಣ. ನಿಬಿರು ಎಂಬ ಬೃಹತ್ ಗ್ರಹ ಭೂಮಿಯತ್ತ ಧಾವಿಸುತ್ತಿದೆ ಎಂದೂ, ಕೆಲ ದಿನಗಳಲ್ಲೇ ಅದು ಭೂಮಿಯ ಮೇಲೆ ಅಪ್ಪಳಿಸಲಿದೆ ಎಂದೂ ಕೆಲವರು ಹೇಳುತ್ತಿದ್ದಾರೆ. ಆದರೆ ಯಾವುದು ಈ ನಿಬಿರು ಎಂಬ ಗ್ರಹ? ಕೆಲ ದಿನಗಳಲ್ಲೇ ಅಪ್ಪಳಿಸಲಿರುವ ಈ ಗ್ರಹದ ಬಗ್ಗೆ ಯಾಕೆ ವಿಜ್ಞಾನಿಗಳಿಗೆ ಗೊತ್ತಿಲ್ಲ? ಅದು ಯಾಕೆ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ? ಈ ಪ್ರಶ್ನೆಗಳಿಗೆಲ್ಲ ಉತ್ತರಗಳಿವೆ.

ನಿಬಿರು ಎಂಬ ಬೃಹತ್ ಗ್ರಹ ನಮ್ಮ ಭೂಮಿಯತ್ತ ಧಾವಿಸುತ್ತಿರುವುದು ನಿಜವಾಗಿದ್ದರೆ ಅದರ ಬೃಹತ್ ಗುರುತ್ವಾಕರ್ಷಣೆಗೆ ನಮ್ಮ ಸೌರವ್ಯೂಹದ ಅಂಚಿನಲ್ಲಿರುವ ಇತರೆ ಗ್ರಹಗಳು ಬಲಿಯಾಗಿ ಇಷ್ಟೊತ್ತಿಗಾಗಲೇ ಅವೆಲ್ಲ ಅಮಲೇರಿದ ಚೆಂಡುಗಳಂತೆ ತಮ್ಮ ಪಥದಿಂದ ದೂರದೂರ ಚಲಿಸಬೇಕಿತ್ತು, ಅದ್ಯಾವುದೂ ಆಗಿಲ್ಲ. ಮಾತ್ರವಲ್ಲ ಇವತ್ತಿನತನಕ ನಮ್ಮ ಸೌರವ್ಯೂಹದಲ್ಲಿರುವ ಒಂಭತ್ತೂ ಗ್ರಹಗಳು ನಿಬಿರು ಕುರಿತು ಕ್ಯಾರೆ ಅನ್ನದೆ ಈ ಹಿಂದೆ ತಾವು ಹೇಗೆ ಸೂರ್ಯನ ಸುತ್ತ ಹಾರಾಡುತ್ತಿದ್ದವೋ ಹಾಗೆಯೇ ಹಾರಾಡುತ್ತಿದ್ದಾವೆ.

ಅದಕ್ಕಿಂತ ಮುಖ್ಯವಾಗಿ ನಿಬಿರು ಎಂಬ ಗ್ರಹ ಭೂಮಿಯತ್ತ ಬರುತ್ತಿದ್ದರೆ ಅದು ಕೆಲವು ದಶಕಗಳ ಹಿಂದೆಯೇ- ನಾಸಾದಂತಹ ಸಂಸ್ಥೆಯ ಮಾತು ಬದಿಗಿರಲಿ- ನಮ್ಮ ಹವ್ಯಾಸಿ ಖಗೋಳಶಾಸ್ತ್ರಜ್ಞರ ಗಮನಕ್ಕೆ ಬಂದಿರುತ್ತಿತ್ತು, ಅದ್ಯಾವುದೂ ಆಗಿಲ್ಲ.

ಹಾಗೆಯೇ ಕೆಲವೇ ದಿನಗಳಲ್ಲಿ ಭೂಮಿಯ ಮೇಲೆ ಅಪ್ಪಳಿಸಲಿರುವ ನಿಬಿರು ಗ್ರಹ ನಮ್ಮೆಲ್ಲರ ಕಣ್ಣಿಗೆ ಇಷ್ಟು ಹೊತ್ತಿಗೆ ಕಾಣಿಸಬೇಕಿತ್ತು, ಯಾಕೆಂದರೆ ನಾವು ಇವತ್ತು ನಮ್ಮ ಬರಿಗಣ್ಣಿನಲ್ಲಿ ಸಹಸ್ರಾರು ಕಿಲೋಮೀಟರ್ ದೂರವಿರುವ ಗ್ರಹಗಳನ್ನೂ ವೀಕ್ಷಿಸಬಹುದಾಗಿದೆ. ಉದಾಹರಣೆಗೆ ನಮ್ಮ ಸೌರವ್ಯೂಹದ ಅತಿ ದೊಡ್ಡ ಗ್ರಹವಾದ ಗುರುವನ್ನೇ ತೆಗೆದುಕೊಳ್ಳಿ. ಅದು ಭೂಮಿಗಿಂತ ಹತ್ತು ಪಟ್ಟು ದೊಡ್ಡದಾಗಿದೆ. ಜೊತೆಗೆ ಸುಮಾರು 750 ಮಿಲಿಯನ್ ಕಿಲೋಮೀಟರ್‌ನಷ್ಟು ದೂರದಲ್ಲಿದೆ. ಆದರೂ ಗುರುಗಿಂತ ಪ್ರಕಾಶಮಾನವಾದ (ಮತ್ತು ನಮಗೆ ಹತ್ತಿರವಾದ) ಸೂರ್ಯ ಮುಳುಗಿದ ನಂತರ ರಾತ್ರಿಯ ಆಕಾಶದಲ್ಲಿ ಪ್ರಜ್ವಲಿಸುವ ಗುರು ಗ್ರಹ ನಮ್ಮ ಕಣ್ಣಿಗೆ ಕಾಣಿಸುತ್ತದೆ. ಪುಟ್ಟದಾದ ಪ್ಲೂಟೋ ಗ್ರಹ ಕೂಡ ನಮ್ಮ ಭೂಮಿಯಿಂದ ಐದು ಸಾವಿರ ಮಿಲಿಯನ್ ಕಿಲೋಮೀಟರ್‌ನಷ್ಟು ದೂರವಿದ್ದರೂ ಆಧುನಿಕ ತಂತ್ರಜ್ಞಾನದಿಂದಾಗಿ ಅದನ್ನು ಸುಮಾರು ಎಂಭತ್ತು ವರ್ಷಗಳ ಹಿಂದೆಯೇ ಪತ್ತೆ ಮಾಡಲಾಯಿತು. ಅಂದಹಾಗೆ ಈ ಪ್ಲೂಟೋ ಗ್ರಹವು ಕಪೋಲಕಲ್ಪಿತ ನಿಬಿರು ಗ್ರಹಕ್ಕಿಂತ ಬಹಳಷ್ಟು ಚಿಕ್ಕದಾಗಿರುವುದರಿಂದ ಪ್ಲೂಟೋನನ್ನೇ ಕಂಡುಹಿಡಿದ ತಂತ್ರಜ್ಞಾನಕ್ಕೆ ನಿಬಿರು ದೊಡ್ಡ ಸವಾಲಲ್ಲವೇ ಅಲ್ಲ.

ನಮಗೆ ಯಾವ ತಾಪತ್ರಯವನ್ನೂ ಕೊಡದ ಗುರು ಗ್ರಹವು ಅಷ್ಟು ಸುಲಭವಾಗಿ ನಮ್ಮ ಕಣ್ಣ ಮುಂದಿರುವಾಗ ನಮ್ಮನ್ನೆಲ್ಲ 'ನಾಶ ಮಾಡಲು ಸಜ್ಜಾಗಿರುವ ನಿಬಿರು ಗ್ರಹವು' ಇವತ್ತಿಗೂ ನಮಗೆ ಕಾಣಿಸದೇ ಇರುವುದು ವಿಚಿತ್ರವಲ್ಲವೇ?

ನಿಬಿರು ಅಲ್ಲದೆ ಎರಿಸ್ ಎಂಬ ಗ್ರಹವೂ ಭೂಮಿಯತ್ತ ಸಾಗುತ್ತಿದೆ ಎನ್ನಲಾಗುತ್ತಿದೆ. ವಾಸ್ತವವಾಗಿ ನಿಬಿರು ಎಂಬುದು ಕಪೋಲಕಲ್ಪಿತ ಗ್ರಹವಾಗಿದ್ದರೆ ಎರಿಸ್ ಎಂಬ ಗ್ರಹವು ಅಸ್ತಿತ್ವದಲ್ಲಿದೆ. ಆದರೆ ಎರಿಸ್ ಗ್ರಹವು ಪ್ಲೂಟೊನಂತೆ ಒಂದು ಕುಬ್ಜ ಗ್ರಹವಾಗಿದ್ದು ಅದು ಭೂಮಿಯನ್ನು ಅಪ್ಪಳಿಸುವುದಿರಲಿ ಅದು ಭೂಮಿಯ 'ಹತ್ತಿರಕ್ಕೆ' ಬರುವುದೂ ಸುಮಾರು ನಾಲ್ಕು ಬಿಲಿಯನ್ ಮೈಲಿಗಳ ದೂರದಲ್ಲಿ.

ಹಲವರು ಮಾಯನ್ ನಾಗರಿಕತೆಯ ಕ್ಯಾಲೆಂಡರ್‌ನಲ್ಲಿ ಸದ್ಯದಲ್ಲೇ ಸಂಭವಿಸಲಿರುವ ಪ್ರಳಯದ



ಬಗ್ಗೆ ಸೂಚನೆ ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದು ಕೂಡ ಅಪ್ಪಟ ಸುಳ್ಳು. ಮಾಯನ್ ನಾಗರಿಕತೆ ಜಗತ್ತಿನ ಅತಿ ಪ್ರಾಚೀನ ನಾಗರಿಕತೆ ಎಂಬುದೂ, ಆ ಸಮುದಾಯದವರು ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆಯೇ ಉನ್ನತವಾದ ಒಂದು ಕ್ಯಾಲೆಂಡರ್‌ಅನ್ನು ರೂಪಿಸಿದ್ದರು ಎಂಬುದೂ ನಿಜ. ಆದರೆ ಅವರ ಕ್ಯಾಲೆಂಡರ್‌ಗೂ, 12/12/2012ಗೂ ಯಾವುದೇ ಸಂಬಂಧವಿಲ್ಲ. ಮಾಯನ್ ನಾಗರಿಕತೆಯ ಕ್ಯಾಲೆಂಡರ್ ಅಥವಾ ಪಂಚಾಂಗದ ಲೆಕ್ಕಾಚಾರದ ಪ್ರಕಾರ ಡಿಸೆಂಬರ್ 12ಕ್ಕೆ ಅವರ ಒಂದು ಯುಗ ಅಂತ್ಯಗೊಳ್ಳುತ್ತದೆಯಷ್ಟೇ. ನಾವೆಲ್ಲರೂ ಈಗ ಸಾಮಾನ್ಯವಾಗಿ ಅನುಸರಿಸುವ ಗ್ರೆಗೋರಿಯನ್ ಕ್ಯಾಲೆಂಡರ್‌ಅನ್ನು ಹೇಗೆ ಏಸು ಕ್ರಿಸ್ತ ಜನಿಸಿದ ವರ್ಷ ಎಂದು ತರ್ಕಿಸಿ ಅದರ ಆಧಾರದ ಮೇಲೆ ರೂಪಿಸಲಾಗಿದೆಯೋ ಹಾಗೆಯೇ ಮಾಯನ್ ಸಮುದಾಯವೂ ತನ್ನ ಧಾರ್ಮಿಕ ನಂಬಿಕೆಗಳನ್ನು ಆಧರಿಸಿ ಯಾವುದೋ ಒಂದು ವರ್ಷದಲ್ಲಿ ಈ ಬ್ರಹ್ಮಾಂಡ ಸೃಷ್ಟಿಯಾಯಿತು ಎಂದು ತರ್ಕಿಸಿ ತನ್ನ ಕ್ಯಾಲೆಂಡರ್ ಅನ್ನು ರೂಪಿಸಿತ್ತು. ಮಾಯನ್ ನಾಗರಿಕತೆಯ ಇಂತಹ ತರ್ಕಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿರಲಿಲ್ಲ. ಆದ್ದರಿಂದ ಮಾಯನ್ ಕ್ಯಾಲೆಂಡರ್ ಪ್ರಕಾರ ಅಂತ್ಯಗೊಳ್ಳುವ ಒಂದು ಯುಗವು ಮತ್ತೊಂದು ಯುಗದ ಪ್ರಾರಂಭವೇ ಹೊರತು ನಮಗೆ ಗೊತ್ತಿರುವ ಈ ಜಗತ್ತಿನ ಅಂತ್ಯವಲ್ಲ.

ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳುವುದಾದರೆ ನಿಮ್ಮ ಮೋಟಾರ್‌ಬೈಕ್ ಅಥವಾ ಸ್ಕೂಟರ್‌ನಲ್ಲಿರುವ ಮೈಲಿಮಾಪಕವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ನಿಮ್ಮ ವಾಹನ 99,999 ಕಿಲೋಮೀಟರ್ ದೂರವನ್ನು ಕ್ರಮಿಸಿದ ನಂತರ ಅದರ ಮೈಲಿಮಾಪಕ ಹೇಗೆ ಮತ್ತೆ ಸೊನ್ನೆಗೆ ಬಂದು ಹೊಸ ಲೆಕ್ಕವನ್ನು ಪ್ರಾರಂಭಿಸುತ್ತದೆಯೋ ಹಾಗೆಯೇ ಮಾಯನ್ ಕ್ಯಾಲೆಂಡರ್ ಕೂಡ ಹೊಸ ಲೆಕ್ಕವನ್ನು ಪ್ರಾರಂಭಿಸುತ್ತದೆಯಷ್ಟೇ. ಅಂದಮಾತ್ರಕ್ಕೆ ಮಾಯನ್ ಕ್ಯಾಲೆಂಡರ್‌ನಲ್ಲಿ ಜಗತ್ತಿನ ಅಳಿವಿನ ಸುಳಿವು ಇದೆ ಎಂಬ ಮಾತು ಅಪ್ಪಟ ಸುಳ್ಳು.

ಇನ್ನು ಡಿಸೆಂಬರ್ 21ರಂದು ಭೂಮಿಯ ಅಕ್ಷ ಎಷ್ಟು ಬದಲಾಗುತ್ತದೆ ಎಂದರೆ ಭೂಮಿಯೇ ತಲೆಕೆಳಗಾಗುತ್ತದೆ ಎಂದು ಹೇಳುತ್ತಿದ್ದಾರೆ. ವಾಸ್ತವವಾಗಿ ಸಹಸ್ರಾರು ವರ್ಷಗಳ ಕಾಲ ನಡೆದು ಬಂದಿರುವಂತೆ ಈ ವರ್ಷವೂ ಡಿಸೆಂಬರ್ 21ರಂದು ಒಂದು ಪ್ರಕ್ರಿಯೆ ಸಂಭವಿಸಲಿದೆ. ಅದು ಮಕರ ಸಂಕ್ರಾಂತಿ. ಪ್ರತಿ ವರ್ಷ ಭೂಮಿಯ ಅಕ್ಷೆಯ ಬದಲಾವಣೆಯಿಂದಾಗಿ ಹೇಗೆ ಜೂನ್ 21ರಂದು ದಕ್ಷಿಣಾಯನ ಸಂಕ್ರಮಣವಾದ ಕರ್ಕಾಟಕ ಸಂಕ್ರಾಂತಿ ಸಂಭವಿಸುತ್ತದೆಯೋ ಹಾಗೆಯೇ ಡಿಸೆಂಬರ್ 21ರಂದು ಉತ್ತರಾಯಣ ಸಂಕ್ರಮಣವಾದ ಮಕರ ಸಂಕ್ರಾಂತಿ ಸಂಭವಿಸುತ್ತದೆ. ಅದಕ್ಕಿಂತ ಮಿಗಿಲಾದದ್ದು ನಡೆಯುವುದಿಲ್ಲ.

ಇಷ್ಟೆಲ್ಲಾ ಹೇಳಿದ ನಂತರವೂ ಸದ್ಯದಲ್ಲೇ ಪ್ರಳಯ ಸಂಭವಿಸಲಿದೆ ಎಂದು ನಂಬಿರುವವರಲ್ಲಿ ನನ್ನದೊಂದು ಚಿಕ್ಕ ಮನವಿ. ಅದೇನೆಂದರೆ ನಿಮ್ಮ ನಂಬಿಕೆಯ ಪ್ರಕಾರ ಇನ್ನು ಕೆಲವೇ ದಿನಗಳಲ್ಲಿ ನೀವು ಮಾತ್ರವಲ್ಲ ಈ ಜಗತ್ತೇ ಇಲ್ಲವಾಗುತ್ತದೆಯಾದ್ದರಿಂದ ನಿಮ್ಮ ಹೆಸರಲ್ಲಿರುವ ಮನೆ, ತೋಟ, ಹೊಲ, ಭೂಮಿ, ಚಿನ್ನಾಭರಣ ಇತ್ಯಾದಿ ಆಸ್ತಿಪಾಸ್ತಿಗಳನ್ನು ಆದಷ್ಟು ಬೇಗ ನನ್ನಂತಹ 'ನಾಸ್ತಿಕರ' ಹೆಸರುಗಳಿಗೆ ಬರೆದುಕೊಟ್ಟುಬಿಡಿ! ಹೇಗಿದ್ದರೂ ನೀವು ನಂಬಿರುವ ಈ ಪ್ರಳಯ ಸಿದ್ಧಾಂತವೇ ಸತ್ಯವಾದರೆ ನಿಮ್ಮ ಈ ಆಸ್ತಿಪಾಸ್ತಿಗಳನ್ನು ಅನುಭವಿಸಲು ನೀವಾಗಲಿ, ನನ್ನಂತಹ ನಾಸ್ತಿಕರಾಗಲಿ ಇಲ್ಲಿರುವುದಿಲ್ಲವಲ್ಲಾ?!

ಏನಂತೀರಿ? ■

ನುಡಿಸಿರಿಯ ನೆಪದಲ್ಲಿ: ಸಾಹಿತಿಗಳ ಬೌದ್ಧಿಕ ದಿವಾಳಿತನ

ಪ್ರತಿಸಲದಂತೆ ಈ ಬಾರಿಯೂ ನವೆಂಬರ್ ತಿಂಗಳಿನಲ್ಲಿ ಕನ್ನಡ ಮಹೋತ್ಸವಗಳು ಜರುಗಿವೆ. ಮೂಡಬಿದ್ರಿಯ 'ಫೈವ್‌ಸ್ಟಾರ್' ಕಾರ್ಯಕ್ರಮಕ್ಕೆ ಹೋಗಿಬಂದ ಕನ್ನಡ ಸಾಹಿತಿಗಳು ಕವಿತೆ ಓದಿ, ಕತೆ ಕೇಳಿಸಿ, ಸಂವಾದಿಸಿ ಅಲ್ಲಿನ ಶಿಸ್ತು ಅಚ್ಚುಕಟ್ಟುಗಳನ್ನು ಕಂಡು ದಂಗಾಗಿ ಹಿಂದಿರುಗಿದ್ದಾರೆ. ಗುಜರಾತನ್ನೂ, ನರೇಂದ್ರ ಮೋದಿಯನ್ನೂ ಕಾವ್ಯ-ಕತೆಗಳಲ್ಲಿ ಮುಖ್ಯವಾಗಿಸಿ, ರೂಪಕವಾಗಿಸಿ ಬರೆದ ಮನಸುಗಳು ಅದೇ ತಾತ್ವಿಕತೆಯ ಸಾಹಿತ್ಯಿಕ ಮತ್ತು ಸಿವಿಲೈಜ್ಡ್ ರೂಪವಾದ ಸಮ್ಮೇಳನದಲ್ಲಿ ಭಾಗಿಯಾಗಿ ಪುಳಕಗೊಂಡಿವೆ. ಕೋಮುವಾದ ವಿರೋಧಿ, ಪ್ರಗತಿಪರ ಎಂದೆಲ್ಲ ಹಣೆಪಟ್ಟಿ ಅಂಟಿಸಿಕೊಂಡ ಹಿರಿಕಿರಿ ಸಾಹಿತಿಗಳು ಕೋಮುಹಿಂಸೆಗೆ ಕಾರಣವಾದವರನ್ನು ಅವರ ವೇದಿಕೆಯಲ್ಲೇ ಹೊಗಳಿ ಅಟ್ಟಕ್ಕೇರಿಸಿರುವುದು ಸಾಹಿತ್ಯಿಕ ವಲಯದ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ.

ಇದು ಖಾಸಗೀಕರಣದ ಕಾಲ. ಆರ್ಥಿಕ-ಸಾಮಾಜಿಕ ಕ್ಷೇತ್ರಗಳಷ್ಟೆ ಅಲ್ಲ, ಕಲೆ-ಸಾಹಿತ್ಯ-ಭಾಷೆ-ಚಳವಳಿಗಳೂ ಖಾಸಗೀಕರಣಗೊಂಡಿವೆ. ಕೆಲ ಮಹಾಪೋಷಕ ವ್ಯಕ್ತಿಗಳು ಸೃಷ್ಟಿಯಾಗಿದ್ದಾರೆ. ಅವರು ಧಾರ್ಮಿಕ ಸ್ಥಳವೊಂದನ್ನು ನಡೆಸುತ್ತ ಜನರಿಗೆ ಆಧ್ಯಾತ್ಮ ಹಂಚುತ್ತಾರೆ. ಶಿಕ್ಷಣ ಸಂಸ್ಥೆಗಳನ್ನೂ ಹುಟ್ಟುಹಾಕುತ್ತಾರೆ. ಸಾಹಿತ್ಯ ಸಮ್ಮೇಳನ ನಡೆಸಿ ಪ್ರಶಸ್ತಿ ನೀಡುತ್ತಾರೆ. ನೃತ್ಯ-ಸಂಗೀತ ದಿಗ್ಗಜರನ್ನು ಕರೆಸಿ ಪ್ರದರ್ಶನ ಏರ್ಪಡಿಸುತ್ತಾರೆ. ಜನಪದ ಕಲಾತಂಡಗಳನ್ನು ಕರೆಸಿ ಸನ್ಮಾನ ಮಾಡುತ್ತಾರೆ. ಕ್ರೀಡಾಕೂಟ ನಡೆಸುತ್ತಾರೆ. ನಾಟಿ ವೈದ್ಯ ಸಮಾವೇಶವನ್ನೂ, ರೈತ ಸಮಾವೇಶಗಳನ್ನೂ ಸಂಘಟಿಸುತ್ತಾರೆ. ಎಲ್ಲದರಲ್ಲೂ ಅಚ್ಚುಕಟ್ಟು. ಬಂದವರಿಗೆ ಯೋಗ್ಯತೆಗೆ ತಕ್ಕ ಸತ್ಕಾರ. ಯಾವ ಲೋಪವೂ ಎದ್ದು ಕಾಣದಂತಹ ಸಂಘಟನಾ ಕೌಶಲ. ಅವರ ಜಗಲಿ, ಹಿತ್ತಲುಗಳು ಸಾಂಸ್ಕೃತಿಕ ಲೋಕದ ಮಾಲ್‌ಗಳಂತೆ ಝಗಮಗಿಸುತ್ತವೆ.

ಸರ್ಕಾರಿಯೋ, ಖಾಸಗಿಯೋ, ಕಲೆ-ಶಿಕ್ಷಣ-ಸಂಸ್ಕೃತಿಗಳು ಸಿರಿವಂತರಿಂದಲೂ ಪುನರುಜ್ಜೀವನಗೊಳ್ಳುತ್ತಿದ್ದರೆ ಅದಕ್ಕೇಕೆ ತಕರಾರು ಎನಿಸಬಹುದು. ತಕರಾರುಗಳು ಸಕಾರಣ; ಸಂಘಟಕರ ಕುರಿತಷ್ಟೇ ಅಲ್ಲ, ಭಾಗವಹಿಸಿದವರ ಕುರಿತೂ.

ಏಕೆಂದರೆ ಈ ಮಹಾಪೋಷಕರು ಕಲೆ-ಸಾಹಿತ್ಯ-ಸಂಸ್ಕೃತಿಗಷ್ಟೇ ಅಲ್ಲ, ಫ್ಯೂಡಲ್ ವ್ಯವಸ್ಥೆಯ ಮಹಾಪೋಷಕರೂ ಹೌದು. ಕಣ್ಣು ಕೋರೈಸುವ ಸಂಘಟನಾ ಕೌಶಲದ ಹೊರತಾಗಿಯೂ ಫ್ಯೂಡಲ್ ವ್ಯವಸ್ಥೆಯ ಕುರುಹುಗಳು ಅಲ್ಲಿ ಕಣ್ಣಿಗೆ ರಾಚುತ್ತವೆ. ಅವರು ಸಂಘಟಿಸುವ ಪಲ್ಲಕ್ಕಿ ಮೆರವಣಿಗೆಯಲ್ಲಿ ಛತ್ರ-ಚಾಮರ-ಧ್ವಜ ಹಿಡಿಯುವವರು, ಶಿಸ್ತಾಗಿ ಎರಡೂ ಸಾಲಿನಲ್ಲಿ ನಿಂತು ಸ್ವಾಗತಿಸುವ ತರುಣತರುಣಿಯರು, ಜನಸಮುದಾಯವೊಂದು ಒಟ್ಟಾಗಿ ನಡೆಸುವ ಸಂಭ್ರಮದ ಜಾತ್ರೆಯ ಭಾಗಿದಾರರಂತೆ ಕಾಣುವುದಿಲ್ಲ, ಬದಲಾಗಿ ಏಕಮಾತ್ರ ನಾಯಕನ ಆಜ್ಞೆಗನುಸಾರ ನಡೆವ ಸೇವಕರಂತೆ ಪಾಲ್ಗೊಂಡಿರುವುದು ಚಹರೆಗಳಿಂದ ತಿಳಿದುಬರುತ್ತದೆ.

ಆಳುವವರು ಯಾರಾದರಾಗಲಿ, ಈ ಮಹಾಪೋಷಕರು ಅವರ ಕೃಪಾಕಟಾಕ್ಷ ಬಯಸುತ್ತಾರೆ. ಎಂದೇ ಇಂಥ ಸಮ್ಮೇಳನಗಳು ಚಾಲಾಕು ಬಂಡವಾಳ ಹೂಡಿಕೆದಾರನ ಶುದ್ಧ ವ್ಯಾಪಾರೀ ಹಿತಾಸಕ್ತಿಯಿಂದ ಸ್ಫೂರ್ತಿ ಪಡೆದು ನಡೆಯುತ್ತವೆ. ಅವರ ಬಂಡವಾಳವನ್ನು ಪವಿತ್ರೀಕರಿಸುವ, ಬಂಡವಾಳಕ್ಕೆ ಮಾನ್ಯತೆ, ಮೌಲ್ಯ ತಂದುಕೊಡುವ ಪ್ರಯತ್ನ ಅದು. ಈ ಮಾನ್ಯತೆ, ಮೌಲ್ಯಗಳು ಆಳುವವರನ್ನು, ವ್ಯವಸ್ಥೆಯನ್ನು ಆ ಬಂಡವಾಳಿಗನ ಕುರಿತು ಮಿದುಗೊಳಿಸಿ ನ್ಯಾಯನಿಷ್ಠುರತೆಯನ್ನು ಮಬ್ಬುಗೊಳಿಸುತ್ತವೆ. ಅಂಥ ವ್ಯಕ್ತಿಯ ವಿರುದ್ಧ ಮಾತಾಡುವುದು ಅಥವಾ ಕ್ರಮ ಕೈಗೊಳ್ಳುವುದು ಕಾನೂನು ಪ್ರಕಾರವೂ ಕಷ್ಟವಾಗುತ್ತದೆ. ಏಕೆಂದರೆ ಗಣ್ಯ ಬೆಂಬಲ ಅದಕ್ಕೆ ದಕ್ಕಿರುತ್ತದೆ. ಯಥಾಸ್ಥಿತಿ ಕಾಯ್ದುಕೊಳ್ಳ ಬಯಸುವುದೇ ತಾತ್ವಿಕತೆಯಾದ ರಾಜಕಾರಣವೂ ಇವರ ಬೆಂಬಲಕ್ಕೆ ಸದಾ ನಿಲ್ಲುತ್ತದೆ. ಇದೊಂದು ಮ್ಯೂಚುವಲ್ ಅಂಡರ್‌ಸ್ಟ್ಯಾಂಡಿಂಗ್. ಬಂಡವಾಳ ಮತ್ತು ರಾಜಕಾರಣ ವಿವಿಧ ಸ್ತರಗಳಲ್ಲಿ ಮಾಡಿಕೊಂಡ ಅಪವಿತ್ರ ಮೈತ್ರಿಯ ಕುರುಹು.

ಇಂಥವರು ಸಾಹಿತ್ಯ ಜಗತ್ತಿನ ವಾರಸುದಾರರಾಗಿ ಅದಕ್ಕೆ ಸಾಹಿತಿಗಳ ಮುದ್ರೆಯೂ ದೊರೆತರೆ? ಅದು ಸಾಹಿತ್ಯ ಲೋಕದ, ಸಮಾಜದ ದುರಂತ. ಇದು ಅತಿಸೂಕ್ಷ್ಮ ಮನಸ್ಸುಗಳೆನಿಸಿರುವ ಸಾಹಿತಿಗಳಿಗೆ ಅರ್ಥವಾಗುವುದಿಲ್ಲವೆ?

ಗುಂಪಾಗಿ ಹೋಗಿ ಸನ್ಮಾನಗೊಂಡು ಬರುವವರಲ್ಲಿ ಅತಿ ಹಿರಿಯ ಸಾಹಿತಿಗಳ ಬಗ್ಗೆ ತಕರಾರು ಎತ್ತಿ ಉಪಯೋಗವಿಲ್ಲ, ಏಕೆಂದರೆ ಅವರು ಗಣಿಕಳ್ಳರ ಲೂಟಿ ವಿರುದ್ಧ ನಡೆದ ಜಾಥಾದಲ್ಲಿ ಪಾಲ್ಗೊಂಡ ಮರುದಿನವೇ ಮತ್ತೊಬ್ಬ ಭೂಗಳ್ಳನ ಉಪವಾಸಕ್ಕೆ ಮನನೊಂದು ಮಾನವೀಯತೆಯ ಕಿತ್ತಳೆ ರಸ ಕುಡಿಸಿ ಬರುತ್ತಾರೆ. ಕೋಮುವಾದಿ ಎಂದು ಸರ್ಕಾರವನ್ನು ಟೀಕಿಸುತ್ತಲೇ ಅದು ನಡೆಸುವ ಸಮ್ಮೇಳನದ ಅಧ್ಯಕ್ಷಗಿರಿಯನ್ನು ಒಪ್ಪಿಕೊಳ್ಳುತ್ತಾರೆ.



ತಮ್ಮ ಸಮಾಜವಾದಿ ಕ್ರಾಂತಿಯ ಕನಸಿನ ಕಡೆಯ ದಿನಗಳಲ್ಲಿ ಇಂಥ ವೈಭವಕ್ಕೆ ಅವರು ಸಾಕ್ಷಿಯಾಗಲಿ. ಅದರಿಂದ ಏನೂ ನಷ್ಟವಿಲ್ಲ.

ಆದರೆ ನಮ್ಮ ಸಮಕಾಲೀನರಾಗಿರುವ, ಪ್ರಸ್ತುತ ಸಾಮಾಜಿಕ-ರಾಜಕೀಯ ತಲ್ಲಣಗಳ ನಡುವೆ ಮಿದುಳು-ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಂಡಿರುವ ಕೆಲವು ಸಂವೇದನಾಶೀಲ ಮಿತ್ರರೂ ಭಾವುಕವಾಗಿ ಅಲ್ಲಿ ಭಾಗವಹಿಸುವುದಷ್ಟೇ ಅಲ್ಲ, ಅದಕ್ಕೆ ಸಮಜಾಯಿಷಿ ನೀಡುತ್ತಿರುವುದು ವರ್ತಮಾನದ ವಿಪರ್ಯಾಸಗಳನ್ನು ಸಂಕೀರ್ಣಗೊಳಿಸಿದೆ. ವಿರಾಟ್ ಹಿಂದೂ ಸಮಾವೇಶಕ್ಕೆ ತನುಮನಧನ ಧಾರೆಯೆರೆಯುವವರನ್ನು ಕೋಮುವಾದ ನಿಲ್ಲಿಸಿ ಎಂದು ಭಾವದುಂಬಿ ಕೇಳುವುದೇನೋ ಸರಿಯೆ, ಆದರೆ ಅಂಥ ಉತ್ಸವದಲ್ಲಿ ಪಾಲ್ಗೊಳ್ಳುವಿಕೆ ಹಲವಾರು ಪ್ರಶ್ನೆಗಳನ್ನೆತ್ತಿದೆ.

ಜನರ ಸಂಪನ್ಮೂಲ, ಜನರ ತೆರಿಗೆಯಿಂದ ಬ... ಬೊಕ್ಕಸದ ಹಣವನ್ನು ನೆರೆಬರದ ಕಾಲದಲ್ಲಿ ಸಾ... ಸಮ್ಮೇಳನಕ್ಕೆ ಖರ್ಚು ಮಾಡುವುದು ಸರಿಯಲ್ಲ ಎ... ತಕರಾರು ತೆಗೆಯುವ ನಾವು; ಹೆಚ್ಚುಕಡಿಮೆ ಅಷ್ಟೇ ಖ... ಮಾಡಿ ವ್ಯಕ್ತಿಯೊಬ್ಬ ಸಂಘಟಿಸುವ ಕಾರ್ಯಕ್ರ... ಬಂಡವಾಳ ಮೂಲದ ಕುರಿತು, ನಡೆಸುವವರ ಆದ್ಯ... ಕುರಿತು ಯೋಚಿಸದೆ ಪಾಲ್ಗೊಳ್ಳಬಹುದೇ?

ಕೇವಲ ರಾಜಕೀಯ ಪಕ್ಷಗಳ ವ... ರಾಜಕಾರಣಿಗಳನ್ನು ಟೀಕಿಸುವುದರಿಂದ ನಮ್ಮ ರಾಜಕ... ನಿಲುವುಗಳು ವ್ಯಕ್ತವಾಗುವುದೇ? ಸಾಹಿತ್ಯಿಕ, ಸಾಂಸ್ಕೃತಿ... ಹಾಗೂ ದ್ವಂದ್ವ-ಬಿಕ್ಕಟ್ಟುಗಳ ಸಂದರ್ಭದಲ್ಲಿ ನಾವು ... ಜೊತೆಗಿದ್ದೇವೆ ಎನ್ನುವುದು ಕೂಡಾ ರಾಜಕೀ... ನಿಲುವುಗಳನ್ನು ರೂಪಿಸುವುದಿಲ್ಲವೆ?

ಸಾಹಿತಿಗಳು ಬೀದಿಗಿಳಿದು ಹೋರಾಡುವ ... ದೂರವಾಗಿದೆ. ನನ್ನನ್ನೂ ಸೇರಿಸಿ ಹೇಳುವುದಾದರೆ ... ಹೋರಾಡುವವರು ಮತ್ತು ಹೋರಾಟ ಸಾ... ರಚಿಸುವವರು ಬೇರೆಬೇರೆಯಾಗಿರುವ ಕಾಲ. ಹೀಗಿರ... ಅಂತರಾಳದಲ್ಲಿ ಒಂದು ಉರಿವ ಕಿಡಿಯಾದರೂ ಇ... ಎಲ್ಲದರೊಂದಿಗೂ ರಾಜಿಯಾಗಬಹುದಾದರೆ ... ಹೋರಾಟದ ಅರ್ಥ ಏನಾಯಿತು?

ಪಲ್ಲಕ್ಕಿಯಲ್ಲಿ ಸಾಗಿದ ಸಮ್ಮೇಳನಾಧ್ಯಕ್ಷರ ಚಿತ್ರ ಕಣ್ಣೆ... ಬರುವಾಗ ಐನ್‌ಸ್ಟೀನ್ ನೆನಪಾದರು. ನೊಬೆಲ್ ... ಬಂದ ಗೌರವಕ್ಕೆ ಅವರಿಗೆ ನ್ಯೂಯಾರ್ಕಿನ ಬೀದಿ... ಪಲ್ಲಕ್ಕಿ ಮೆರವಣಿಗೆ ಆಯೋಜಿಸಲಾಗಿತ್ತು. ಆದರೆ ... ಜನರ ಹೆಗಲ ಮೇಲೆ ಕುಳಿತು ಹೋಗಲು ಸ್ಪಷ್ಟ... ನಿರಾಕರಿಸಿದ ಐನ್‌ಸ್ಟೀನ್ ಮೆರವಣಿಗೆಯಿಡೀ ನ... ಪಾಲ್ಗೊಂಡರು. ಭೌತವಿಜ್ಞಾನಿಗೆ ಹೊಳೆದ ಈ ಸರಳ... ಮಾನವೀಯತೆಯನ್ನೇ ಬಂಡವಾಳವಾಗಿಸಿಕೊಂಡಿ... ಬರಹಗಾರರಿಗೆ ಏಕೆ ಹೊಳೆಯುವುದಿಲ್ಲ?


******

ಹಾಗಾದರೆ ಸಾಹಿತ್ಯ, ಕಲೆಗಳ ಸಮಾವೇಶವನ್ನು ... ಸಂಘಟಿಸಬೇಕು? ಎಂಬ ಪ್ರಶ್ನೆಯೇಳುತ್ತದೆ. ಹಣ... ಜನಬಲವಷ್ಟೇ ಸಂಘಟಕನ ಪಟ್ಟ ಗಳಿಸಿಕೊಡುವ... ಅಧಿಕಾರ-ಆಮಿಷಗಳಿಂದ ಮುಕ್ತವಾದ; ಸುತ್ತ... ನಡೆಯುತ್ತಿರುವುದಕ್ಕೆ ಜನಪರವಾಗಿ ಸ್ಪಂದಿಸುವಷ್ಟಾ... ಬದ್ಧತೆಯಿರುವ; ಜಾತಿ-ಧರ್ಮ-ವರ್ಗ-ಭಾಷೆಯ ಹೊ... ಮಾನವಪರ ಕಾಳಜಿಯಿರುವ ವ್ಯಕ್ತಿ-ಸಂಘಟನೆಗಳು ಸಾ... ಲೋಕದ ಸಂಚಾಲಕ ಶಕ್ತಿಗಳಾಗಬಲ್ಲರು.

ಈ ಸಮ್ಮೇಳನ ಸಾಹಿತ್ಯವನ್ನೊಂದು ಆನಂದ ಕೊ...

ಬಾಳ್ ಠಾಕ್ರೆ ದಲಿತ ವಿರೋಧಿಯೂ ಆಗಿದ್ದ

ಇತ್ತೀಚೆಗೆ ಮುಂಬೈಯಲ್ಲಿ ತೀರಿಕೊಂಡ ಬಾಳ್ ಠಾಕ್ರೆಯನ್ನು ಎಲ್ಲರೂ ಮುಸ್ಲಿಂ ವಿರೋಧಿ, ಬಿಹಾರಿಗಳ ವಿರೋಧಿ, ಕನ್ನಡಿಗರ ವಿರೋಧಿ ಎಂದೆಲ್ಲ ಬಿಂಬಿಸುತ್ತಿದ್ದಾರೆ. ಆದರೆ ಆತ ದಲಿತ ವಿರೋಧಿಯೂ ಆಗಿದ್ದ. ಠಾಕ್ರೆಯ ಬೇಟೆಯ ಪ್ರಮುಖ ಬಲಿಪಶುಗಳು ದಲಿತರು. ವಾಸ್ತವವಾಗಿ ದಲಿತರನ್ನು ಹಿಂಸಾತ್ಮಕವಾಗಿ ವಿರೋಧಿಸಲೆಂದೇ ಆತ ತನ್ನ ಶಿವ 'ಸೇನೆ'ಯ ಕಟ್ಟಿದ್ದು!



ಠಾಕ್ರೆಯ ಶಿವಸೇನೆಯ ಚಿಹ್ನೆ 'ಹುಲಿ'. ಈ ಚಿಹ್ನೆಯನ್ನು ಠಾಕ್ರೆ ಆರಿಸಿದ್ದು ಕೂಡ ದಲಿತ ಪ್ಯಾಂಥರ್ಸ್‌ನ ಚಿರತೆ ಚಿಹ್ನೆಗೆ ವಿರುದ್ಧವಾಗಿ! "ದಲಿತರು ಚಿರತೆಗಳಾದರೆ ನಾವು ಹುಲಿಗಳು" ಎಂದು ಆತ ಅಬ್ಬರಿಸಿದ್ದ.

70ರ ದಶಕದಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ (ದಲಿತ ಚಿರತೆಗಳು) ಕಾರ್ಯಕರ್ತರು ಮತ್ತು ಶಿವಸೇನೆಯ ಕಾರ್ಯಕರ್ತರ ನಡುವೆ ನಡೆದ ಭೀಕರ ಗ್ಯಾಂಗ್‌ವಾರ್‌ಗಳು ಠಾಕ್ರೆಯ ರಕ್ತಸಿಕ್ತ ರಾಜಕಾರಣದ ಪ್ರಾರಂಭವಷ್ಟೆ. 1974ರಲ್ಲಿ ದಲಿತ ನಾಯಕ ಭಾಗವತ್ ಜಾಧವ್‌ರನ್ನು ಕ್ರೂರವಾಗಿ ಕೊಲ್ಲಲಾಯಿತು. ಆನಂತರ ದಲಿತ ಪ್ಯಾಂಥರ್ಸ್ ಮತ್ತು ಶಿವಸೇನೆಯ ಕಾರ್ಯಕರ್ತರು ಮುಂಬೈಯ ಬೀದಿಬೀದಿಗಳಲ್ಲಿ ಚಾಕು, ಕಲ್ಲುಗಳನ್ನು ಹಿಡಿದು ಪರಸ್ಪರ ಹಿಂಸಾತ್ಮಕವಾಗಿ ಕಾದಾಡುವ ಮಟ್ಟಕ್ಕೆ ಹೋಗಿದ್ದರು.

ಅದೇ ಸಮಯದಲ್ಲಿ ಮಹಾರಾಷ್ಟ್ರ ಸರ್ಕಾರ ಬಾಬಾಸಾಹೇಬ್ ಅಂಬೇಡ್ಕರರ 'ಹಿಂದೂ ಧರ್ಮದ ಒಗಟುಗಳು' ಕೃತಿಯನ್ನು ಪ್ರಕಟಿಸಲು ಮುಂದಾಯಿತು. ಆಗ ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಠಾಕ್ರೆ ಅದರ ವಿರುದ್ಧ ದನಿ ಎತ್ತಿದ! ರೊಚ್ಚಿಗೆದ್ದ ಪ್ಯಾಂಥರ್ಸ್ ಹುಡುಗರು ಠಾಕ್ರೆಯ ವಿರುದ್ಧ ಬುಸುಗುಡಲಾರಂಭಿಸಿದರು. ಖಂಡಿತ, ಆ ಸಂದರ್ಭದಲ್ಲಿ ಹೆಚ್ಚು ಕಮ್ಮಿಯಾಗಿದ್ದರೆ ಪರಸ್ಪರ ಬಣದ ಸಾವಿರಾರು ಕಾರ್ಯಕರ್ತರು, ನಾಗರಿಕರು ಪ್ರಾಣ ಕಳೆದುಕೊಳ್ಳುತ್ತಿದ್ದರು. ಈ ಸಮಯದಲ್ಲಿ "ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಇಂತಹದಕ್ಕೆ ಅವಕಾಶ ಕೊಡಬಾರದು" ಎಂದು ದಲಿತ ಮುಖಂಡರು ಠಾಕ್ರೆಯನ್ನು ಖುದ್ದು ಭೇಟಿ ಮಾಡಿ ಹೇಳಿದ ನಂತರವೇ ಪರಿಸ್ಥಿತಿ ತಿಳಿಯಾದದ್ದು.

ದಲಿತ ಚಳವಳಿಯ ಕಾರ್ಯಕರ್ತರ ಮೇಲೆ, ಬಾಬಾಸಾಹೇಬ್ ಅಂಬೇಡ್ಕರರ ಮೇಲೆ ಠಾಕ್ರೆಯ ಸಿಟ್ಟು ಅಲ್ಲಿಗೆ ಕಮ್ಮಿಯಾಗಲಿಲ್ಲ, 1980ರ ದಶಕದಲ್ಲಂತೂ ದಲಿತರ ಮನೆಗಳ ಮೇಲೆ ದಾಳಿ ಮಾಡುವಂತೆ, ಕಂಡಕಂಡಲ್ಲಿ ಸುಡುವಂತೆ ಠಾಕ್ರೆ ತನ್ನ ಕಾರ್ಯಕರ್ತರಿಗೆ ಆಜ್ಞಾಪಿಸಿದ. ದುರಂತವೆಂದರೆ ಅಂದಿನ ಆಡಳಿತಾರೂಢ ಕಾಂಗ್ರೆಸ್ ಠಾಕ್ರೆಯ ಇಂತಹ ಹೀನಕೃತ್ಯಗಳಿಗೆಲ್ಲ ಬೆಂಗಾವಲಾಗಿತ್ತು!

ಇನ್ನು ಮರಾಠವಾಡ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರರ ಹೆಸರಿಡಬೇಕೆಂದು ಹೋರಾಟ ನಡೆದಾಗಲೂ ಠಾಕ್ರೆ ಹೀಗೆಯೇ ವರ್ತಿಸಿದ್ದ. ದಲಿತರ ಇಂತಹ ಆತ್ಮಗೌರವದ ಬೇಡಿಕೆಯ ವಿರುದ್ಧವೂ ಠಾಕ್ರೆ ಯುದ್ಧ ಸಾರಿದ. ಆ ಅಂಬೇಡ್ಕರ್ ವಿಶ್ವವಿದ್ಯಾಲಯ ಎಂದು ಹೆಸರಿಡ ಬಾರದೆಂದು ಠಾಕ್ರೆ ಖಂಡತುಂಡವಾಗಿ ವಿರೋಧಿಸಿದ್ದ. 1984ರಲ್ಲಿ ವಿದರ್ಭ ಪ್ರಾಂತ್ಯದ ಸಾವಿರಾರು ದಲಿತರ ಗುಡಿಸಲುಗಳ ಮೇಲೆ ಠಾಕ್ರೆಯ ಗೂಂಡಾಗಳು ದಾಳಿ ಮಾಡಿ ಸುಟ್ಟು ಹಾಕಿದ್ದರು. ಮರಾಠಿಗರೇ ಆಗಿದ್ದ ಲಕ್ಷಾಂತರ ದಲಿತ ರೈತರ ಬೆಳೆಗಳು ಕ್ಷಣದಲ್ಲೇ ನಾಶವಾಗಿದ್ದವು. ಠಾಕ್ರೆಯ ದಲಿತ ವಿರೋಧಿ, ದೌರ್ಜನ್ಯದ ಆದೇಶಗಳನ್ನು ಅವನ ಕಾರ್ಯಕರ್ತರು ಚಾಚೂತಪ್ಪದೆ ಪಾಲಿಸುತ್ತಿದ್ದರು!

ಒಂದು ಪತ್ರ

ತನ್ನ ಕೊನೆಯ ದಿನಗಳಲ್ಲೂ ಠಾಕ್ರೆ ತನ್ನ ದಲಿತ ವಿರೋಧಿ ನಿಲುವನ್ನು ತೊರೆದಿರಲಿಲ್ಲ. ಮುಂಬೈನ ದಾದರ್‌ನ ರೈಲು ನಿಲ್ದಾಣಕ್ಕೆ 'ಚೈತ್ರಭೂಮಿ ನಿಲ್ದಾಣ' ಎಂದು ಹೆಸರಿಡಬೇಕೆಂದು ದಲಿತರು ಒತ್ತಾಯಿಸಿದಾಗ ಠಾಕ್ರೆ ಹೇಳಿದ್ದೇನು ಗೊತ್ತೇ? "ದಾದರ್ ರೈಲು ನಿಲ್ದಾಣದ ಹೆಸರು ದಾದರ್ ಆಗಿಯೇ ಮುಂದುವರಿಯಲಿದೆ. ಹೆಸರು ಬದಲಾಯಿಸುವುದರಿಂದ ನಿಮ್ಮ (ದಲಿತ) ಜೀವನದ ಮೇಲೆ ಏನು ಪರಿಣಾಮ ಉಂಟಾಗುತ್ತದೆ?" ಎಂದು ಪ್ರಶ್ನಿಸಿದ್ದ. ಅದಕ್ಕೆ ಆರ್.ಪಿ.ಐ. ನಾಯಕ ಜೋಗೇಂದ್ರ ಕಾವಡೆ ಅವರು ಅಷ್ಟೆ ಖಾರವಾಗಿ "ಹಾಗಿದ್ದರೆ ನೀವು ಔರಂಗಾಬಾದ... ಸಾಂಬಾಜಿನಗರ ಎಂತಲೂ, ಮುಂಬೈನ ವಿಕ್ಟೋ... ಟರ್ಮಿನಸ್ (ರೈಲು ನಿಲ್ದಾಣ) ಅನ್ನು ಛತ್ರಪತಿ ಶಿ... ಟರ್ಮಿನಸ್ ಎಂದೂ ಬದಲಾಯಿಸಬೇಕೆ... ಒತ್ತಾಯಿಸುತ್ತಿದ್ದೀರಿ. ಅದರಿಂದ ನಿಮ್ಮ ಜೀವನದಲ್ಲೇನಾ... ಬದಲಾವಣೆಯಾಗುತ್ತದಾ?" ಎಂದು ಮರುಪ್ರಶ್ನೆ ಹಾ...

ಅಂದಹಾಗೆ, ಠಾಕ್ರೆಯ ಇಂತಹ 'ಸಾಧನೆ'ಗಳನ್ನು ... ಪತ್ರಿಕೆಯಾಗಲಿ, ಟಿವಿಯಾಗಲಿ, ಅಂತರ್ಜಾಲದ ಫೇಸ್... ಆಗಲಿ ಮುಚ್ಚಿಡಲು ಸಾಧ್ಯವಿಲ್ಲ. ಯಾಕೆಂದರೆ ... ಮಹಾರಾಷ್ಟ್ರದ ಪ್ರತಿಯೊಬ್ಬ ದಲಿತನಿಗೂ ತಿಳಿದ ಬ... ಸತ್ಯ. ಸ್ವತಃ ಅಂಬೇಡ್ಕರರ ಮೊಮ್ಮಗ ... ಅಂಬೇಡ್ಕರರ ಮಾತುಗ... ಹೇಳುವುದಾದರೆ: "1970-8... ಸಮಯದಲ್ಲಿ ನಡೆದ ದಲಿತ ಪ್ಯಾ... ಶಿವಸೇನೆಯ ನಡುವಿನ ಯುದ್ಧ ... ಕ್ರೂರವಾದದ್ದು. ಸಹಸ್ರಾರು ... ದಲಿತರು ಈ ಸಂದರ್ಭ... ಮಾರಣಹೋಮವಾಗಬೇಕಾಯಿತು...

ಹೀಗೆ ದಲಿತರ ವಿರುದ್ಧ ಅಬ್ಬರಿಸು... ಕೈಗೆ 1995 ರಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಅ... ಕೂಡ ಬಂತು. ಸಾಮಾಜಿಕ ಪೊಲೀಸರಿಗೆ ... ಪೊಲೀಸ್ ಅಧಿಕಾರ ಕೂಡ ಸಿಕ್ಕರೆ ಏನಾಗುತ್ತದೋ ... ಆಯಿತು. 1997ರಲ್ಲಿ ಶಿವಸೇನೆ - ಬಿಜೆಪಿ ನೇ... ಸರ್ಕಾರ ಮುಂಬೈಯ ರಮಾಬಾಯಿ ಅಂಬೇಡ್ಕರ್ ನ... ಶಸ್ತ್ರಾಸ್ತ್ರರಹಿತ ಅಮಾಯಕ 10 ಜನ ದಲಿತರನ್ನು ಗ... ಕೊಲ್ಲಿಸಿತು. 30 ಜನರು ತೀವ್ರವಾಗಿ ಗಾಯಗೊ... ಅವರಲ್ಲಿ ಮಕ್ಕಳು, ಮಹಿಳೆಯರೂ ಇದ್ದರೆಂದರೆ ... ಪಾತಕತನವನ್ನು ಯಾರಾದರೂ ಊಹಿಸಬಹುದು! ... ಆ ಸಮಯದಲ್ಲಿ ಠಾಕ್ರೆ ಮಹಾರಾಷ್ಟ್ರದ ವಿವಿಧ ಠಾ... ಸವರ್ಣೀಯರ ವಿರುದ್ಧ ದಾಖಲಾಗಿದ್ದ 1,100... ಹೆಚ್ಚು "ದಲಿತ ದೌರ್ಜನ್ಯದ ಪ್ರಕರಣ"ಗಳನ್ನು ...

...ಚಿತ್ರವನ್ನಾಗಿ ಬಿಂಬಿಸುವುದೇ ಹೊರತು ಸಾಮಾಜಿಕ ...ಸಮಸ್ಯೆಗಳ ಕುರಿತು ಚಕಾರವೆತ್ತುವುದಿಲ್ಲ. ಸಾಹಿತಿ ...ಲಾವಿದರನ್ನು ಅಷ್ಟು ಸಂಖ್ಯೆಯಲ್ಲಿ ಸೇರಿಸಿದರೂ ಕರಾವಳಿಯ ...ಕ್ಕಟ್ಟುಗಳ ಕುರಿತು ಚರ್ಚಾಗೋಷ್ಠಿ ನಡೆಯುವುದಿಲ್ಲ. ...ಯೋಜಕರು ತಮ್ಮ ಪಂಚೇಂದ್ರಿಯಗಳನ್ನು ...ರೆದುಕೊಂಡಿದ್ದರೆ ಆ ಸಮ್ಮೇಳನದಲ್ಲಿ ಶೈಕ್ಷಣಿಕ ಸಂಸ್ಥೆಗಳ ...ಬುರ್ಖಾ ನಿಷೇಧದ ಗಲಾಟೆ, ಲವ್ ಜಿಹಾದ್ ಎಂಬ ...ಮಯಿಲು, ಹೋಂ ಸ್ಟೇ ಪ್ರಕರಣ ಮತ್ತದನ್ನು ವರದಿ ...ಮಾಡಿದ್ದಕ್ಕೆ ಬಂಧಿಸಲ್ಪಟ್ಟ ನವೀನ್ ಸೂರಿಂಜೆ, ...ಸ್‌ಇಝಡ್‌ಗಾಗಿ ಭೂಮಿ ಕಳೆಕೊಂಡವರು, ವಿಠ್ಠಲ ...ಮಲೆಕುಡಿಯ ಬಂಧನ, ಮಂಗಳೂರು ವಿಶ್ವವಿದ್ಯಾಲಯದ ...ಗಾಂಧಿ ಬಂದ' ಕೃತಿ ನಿಷೇಧದ ಪ್ರಯತ್ನ, ಮಡೆಸ್ನಾನ ...ವಾದ - ಇಂಥ ಎಲ್ಲ ಸಾಮಾಜಿಕ ಬಿಕ್ಕಟ್ಟುಗಳ ಕುರಿತು ...ರ್ಚೆ ನಡೆಯುತ್ತಿತ್ತು, ಸಂಘಟಕರ ನಿಲುವು-ಪ್ರತಿಕ್ರಿಯೆ ...ನೆಂದು ಗೊತ್ತಾಗುತ್ತಿತ್ತು. ಆದರೆ ಬಂಡವಾಳಿಗರಿಗೆ ಕಲೆ, ...ಹಿತ್ಯವೆಂದರೆ ಕಾವ್ಯ-ಗಾಯನ-ನರ್ತನವಷ್ಟೇ. ...ಬಂಡವಾಳವೆಂಬ ಮಾಯೆ ಸ್ಪರ್ಧೆ, ಮೇಲಾಟ, ...ಉನ್ಮಾದಗಳನ್ನೇ ಮುನ್ನೆಲೆಗೆ ತರುತ್ತದೆ. ಪ್ರತಿಯೊಂದು ...ಯು, ಚಿಂತನೆಯಲ್ಲೂ ಸ್ವಹಿತಾಸಕ್ತಿಯನ್ನು ತುರುಕುತ್ತದೆ. ...ಇದೇ ಅಲ್ಲಿ ಸಾಮಾಜಿಕ ಕಾಳಜಿಯನ್ನು ನಿರೀಕ್ಷಿಸುವುದು ...ಮೂರ್ಖತನವಾಗುತ್ತದೆ.

ಬಹುಶಃ ಇವತ್ತಿನ ಲೇಖಕರಿಗಿರುವ ದೊಡ್ಡ ...ವಾಲೆಂದರೆ ವ್ಯವಸ್ಥೆಯು ಇಂಥ ಆಮಿಷಗಳಿಂದ ...ಪ್ಪಿಸಿಕೊಳ್ಳುವುದು. ಏಕೆಂದರೆ ಹಿಂದೆಂದಿಗಿಂತ ಹೆಚ್ಚು ...ಖ್ಯೆಯ ಪ್ರಶಸ್ತಿ, ಪುರಸ್ಕಾರ ಸಮ್ಮಾನಗಳು ಆಯಕಟ್ಟಿನ ...ಗದಲ್ಲಿ ಕಾದು ಕುಳಿತು ಬಂಡೇಳುವ ಮನಸುಗಳನ್ನು ...ಷ್ಟಗೊಳಿಸಲು ಹೊಂಚುಹಾಕುತ್ತಿವೆ. ಹೌದು, ಇದು ...ಜಿಯ ಕಾಲ. ನಾವೆಲ್ಲ ಒಂದಲ್ಲ ಒಂದು ಕಾರಣಕ್ಕೆ ...ಜಿ ಮಾಡಿಕೊಂಡೇ ಬದುಕುತ್ತಿದ್ದೇವೆ. ಸಾಮಾಜಿಕ ...ಮುಖ, ಜೀವನಶೈಲಿ, ರಾಜಕೀಯದ ನಡೆಗಳು, ಆದ್ಯತೆಗಳು ...ಲ್ಲವೂ ರಾಜಿಯಾಗುವಿಕೆಗೆ ಪೂರಕ ನೆಪಗಳಾಗಿವೆ. ವ್ಯಕ್ತಿತ್ವ ...ಜಿನುಡಿಗಳಲ್ಲಿಯೂ ಅದು ನುಸುಳಿದೆ.

ಆದರೆ ಆಂತರಿಕ ಒತ್ತಡದಿಂದ ಹುಟ್ಟುವ ಸೃಜನಶೀಲ ...ಮೆಯೂ, ಬರಹಗಾರನೂ ರಾಜಿಗೊಳಗಾಗಿ ಅವನ ...ಸದನಿ ಸಮಾಧಿಯಲ್ಲೇ ಹೊರಳಿದರೆ ಜನಪರವಾದದ್ದು ...ವುದೂ ಉಳಿಯುವುದಿಲ್ಲ. ಈ ದುರಂತ ತಡೆಯಲು ...ಮ್ಮ ನಡೆ, ಬರಹ, ವಿಚಾರಗಳಲ್ಲಿ ಒಳಹೊಕ್ಕ ವಿಕಾರಗಳನ್ನು ...ವೇ ಗಮನಿಸಿ ಕಿತ್ತುಹಾಕಬೇಕು. ವಿಮರ್ಶೆಯ ಎಚ್ಚರ ...ಜಾಗೃತವಾಗಿರಬೇಕು. ಇಲ್ಲವಾದಲ್ಲಿ ತರಳಬಾಳು, ...ಜಾವರ, ಸುತ್ತೂರು ಮಠ, ಆರ್ಟ್ ಆಫ್ ಲಿವಿಂಗ್, ...ನ್ಫೋಸಿಸ್-ಟಾಟಾ ಕವಿಗೋಷ್ಠಿಗಳಲ್ಲಿ ಪ್ರತಿಭಟನಾ ...ವ್ಯವಾಚನ ಮಾಡಲು ಸಾಲಾಗಿ ನಿಂತ ಪ್ರಗತಿಪರ ...ಗಳನ್ನು ನೋಡುವ ದಿನಗಳು ದೂರವಿಲ್ಲ!

■ ಡಾ. ಎಚ್.ಎಸ್.ಅನುಪಮಾ

...ಗೆಸಿದ. ಆ ಮೂಲಕ ದೌರ್ಜನ್ಯಕೋರರಿಗೆ ...ಬಹಿರಂಗವಾಗಿಯೇ ಬೆಂಬಲ ಘೋಷಿಸಿದ! ಠಾಕ್ರೆಯ ...ಇಂತಹ ದಲಿತ ವಿರೋಧಿ ಕೃತ್ಯಗಳನ್ನು ಹೇಳುತ್ತಾಹೋದರೆ ...ದೇ ಹತ್ತಾರು ಪುಟಗಳನ್ನು ತುಂಬುತ್ತದೆ.


ದಲಿತರ ವಿರುದ್ಧ ಇಂತಹ ಹಿಂಸಾತ್ಮಕ ದಂಗೆ ...ಡೆಸಿದ, ಜೊತೆಗೆ ಮುಸ್ಲಿಮರು, ಬಿಹಾರಿಗಳು ಮತ್ತು ...ನ್ನಡಿಗರು ಸೇರಿದಂತೆ ಇತರರನ್ನು ಕಾಡಿದ, ಸ್ವತಃ ...ಮಹಾರಾಷ್ಟ್ರದ ಪ್ರತಿಯೊಬ್ಬರಲ್ಲೂ ಬೇಸರ ಮೂಡಿಸಿದ್ದ ...ಬಾಳ್ ಠಾಕ್ರೆ ಯಾವುದೇ ನಿಟ್ಟಿನಲ್ಲೂ ಖಂಡಿತ ಕ್ಷಮೆಗೆ ...ಅರ್ಹನಲ್ಲ.

ಠಾಕ್ರೆ ಸತ್ತನಂತರವೂ ಆತನ ಹಿಂಬಾಲಕರು ...ದಲಿತರನ್ನು ಕೆಣಕುವ ಬುದ್ಧಿಯನ್ನು ಬಿಟ್ಟಿಲ್ಲ! ಬಹುತೇಕ ...ದಲಿತರೇ ವಾಸಿಸುವ, ಬಾಬಾಸಾಹೇಬ್ ಅಂಬೇಡ್ಕರರ ...ಸ್ಮಾರಕ ಸ್ಥಳ ಇರುವ ಪ್ರದೇಶದಲ್ಲಿಯೇ ಠಾಕ್ರೆ ಸ್ಮಾರಕ ...ನಿರ್ಮಿಸುವುದಾಗಿ ಆತನ ಅನುಯಾಯಿಗಳು ...ಘೋಷಿಸಿದ್ದಾರೆ. ಆ ಮೂಲಕ ಠಾಕ್ರೆಯ ಆ ಹೀನಕೃತ್ಯವನ್ನು ...ಮುಂದುವರಿಸುವ ಸ್ಪಷ್ಟ ಸೂಚನೆಯನ್ನು ಅವರು ...ನೀಡಿದ್ದಾರೆ.

ಅದೇನೇ ಇರಲಿ, ಠಾಕ್ರೆ ಪರಮ ಹಿಂದೂತ್ವವಾದಿ. ...ಹಿಂದೂತ್ವವಾದದ ಪ್ರಮುಖ ಲಕ್ಷಣ ಮುಸ್ಲಿಂ ...ವಿರೋಧವಾದರೂ ಅದರ ಮೂಲಲಕ್ಷಣ ದಲಿತ ...ವಿರೋಧಿ ನೀತಿ. ಠಾಕ್ರೆ ಹೇಳಿದ್ದು, ಹೇಳದಿದ್ದದ್ದು, ...ಮಾಡಿದ್ದು, ಎಲ್ಲವೂ ದಲಿತರ ಹೆಣಗಳ ಮೇಲೆ. ಸದ್ಯದ ...ಸಮಾಧಾನದ ವಿಷಯವೇನೆಂದರೆ ಠಾಕ್ರೆ ಇನ್ನಿಲ್ಲ ಎಂಬುದು. ...ಆರಂಭದಿಂದಲೇ ಮಹಾರಾಷ್ಟ್ರದಲ್ಲಿ ದಲಿತರ ಮೇಲೆ, ...ಬಾಬಾಸಾಹೇಬ್ ಅಂಬೇಡ್ಕರರ ಸಿದ್ಧಾಂತದ ಮೇಲೆ ...ನಡೆಸುತ್ತಿದ್ದ ದೌರ್ಜನ್ಯಗಳನ್ನು, ದಬ್ಬಾಳಿಕೆಯನ್ನು ...ಸಹಿಸಿಕೊಂಡು ಸೋತುಹೋಗಿದ್ದ ನಮ್ಮಂಥವರಿಗೆ ಈಗ ...ಸ್ವಲ್ಪವಾದರೂ ನೆಮ್ಮದಿಯಾಗಿದೆ. ಇತಿಹಾಸದಲ್ಲಿ ಇಂತಹ ...ಜನಗಳು ಇನ್ನೆಂದೂ ಹುಟ್ಟದಿರಲಿ.

- ರಘೋತ್ತಮ ಹೊ.ಬ, ಚಾಮರಾಜನಗರ





ಬಾಬರಿ ಮಸೀದಿ ಧ್ವಂಸ:

ಹಿಂಸೆ ಮತ್ತು ವಿಶ್ವಾಸದ್ರೋಹದ 20 ವರ್ಷಗಳು

ಸರಿಯಾಗಿ 20 ವರ್ಷಗಳ ಹಿಂದೆ, 1992 ಡಿಸೆಂಬರ್ 6ರ ನಡುಹಗಲು, ಉತ್ತರ ಪ್ರದೇಶದ ಫೈಜಾಬಾದ್ ನಗರದ ಹೊರವಲಯದಲ್ಲಿರುವ ಅಯೋಧ್ಯೆಯ 400 ವರ್ಷಗಳಷ್ಟು ಪುರಾತನ ಬಾಬರಿ ಮಸೀದಿಯನ್ನು ಧ್ವಂಸಗೊಳಿಸಲಾಯಿತು. ಅಂದಿನಿಂದ ಆ ನೆನಪು ಮರುಕಳಿಸುತ್ತಲೇ ಇದೆ. ಈಗ ಮತ್ತೊಮ್ಮೆ ಆ ದುರ್ದಿನವನ್ನು ನೆನಪಿಸಿಕೊಳ್ಳಬೇಕಾಗಿದೆ.

ಬಾಬರಿ ಮಸೀದಿ ಧ್ವಂಸಕ್ಕೆ ಕಾರಣರಾದವರಿಗೆ ಇದುವರೆಗೆ ಶಿಕ್ಷೆ ಆಗಿಲ್ಲ; ಆ ಸಂದರ್ಭದಲ್ಲಿ ದೇಶಾದ್ಯಂತ ಸಂಭವಿಸಿದ ಹಿಂಸೆಗೆ ಬಲಿಯಾದ ಮುಸ್ಲಿಮರಿಗೆ ನ್ಯಾಯ ಸಿಕ್ಕಿಲ್ಲ; ಬಾಬರಿ ಮಸೀದಿ ಧ್ವಂಸದ ಬೆನ್ನಿಗೇ ಮುಂಬಯಿ ನಗರದಲ್ಲಿ ಬಿಜೆಪಿ ಮತ್ತು ಶಿವಸೇನೆ ಒಟ್ಟಾಗಿ ಮುಸ್ಲಿಮರ ಮೇಲೆ ನಡೆಸಿದ ಹಿಂಸೆಯ ಸಂತ್ರಸ್ತರಿಗೂ ಪರಿಹಾರ ದೊರೆತಿಲ್ಲ. ಗುಜರಾತ್-2002ಕ್ಕೆ ಕೂಡ ಬಾಬರಿ ಮಸೀದಿ ಧ್ವಂಸವೇ ಹಿನ್ನೆಲೆ ಮತ್ತು ಸ್ಫೂರ್ತಿಗಳನ್ನು ಒದಗಿಸಿದ್ದು ಆ ನರಮೇಧದ ಬಹುತೇಕ ಪ್ರಕರಣಗಳಲ್ಲಿಯೂ ಇದುವರೆಗೆ ನ್ಯಾಯ ದೊರೆತಿಲ್ಲ. ಹಿಂಸೆಯಲ್ಲಿ ನಲುಗಿದವರಿಗೆ ನ್ಯಾಯ ಮತ್ತು ಪರಿಹಾರ ದೊರಕುವವರೆಗೆ ಶಾಂತಿ, ಸೌಹಾರ್ದಗಳು ನೆಲೆಸಲು ಸಾಧ್ಯವಿಲ್ಲ. 1984ರಲ್ಲಿ ದೆಹಲಿಯಲ್ಲಿ ನಡೆದ ಸಿಖ್ ಜನಾಂಗ ಹತ್ಯೆ, ಬಾಬರಿ ಮಸೀದಿ ಧ್ವಂಸ, 1992-93ರ ಮುಂಬಯಿ ಹಿಂಸಾಕಾಂಡ ಮತ್ತು ಗುಜರಾತ್ 2002-ಇವೆಲ್ಲವೂ ನಮ್ಮನ್ನು ಕುಬ್ಜಗೊಳಿಸಿವೆ. ಈ ಘೋರ ದುರಂತಗಳ ಸಂತ್ರಸ್ತರಿಗೆ ನ್ಯಾಯ ಮತ್ತು ಪರಿಹಾರ ದೊರೆಯುವವರೆಗೆ ಇವುಗಳ ನೆನಪಿನಿಂದ ನಮಗೆ ಬಿಡುಗಡೆ ಇಲ್ಲ.

1992, ಡಿಸೆಂಬರ್ 6ರ ಘಟನೆಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ. ಆ ದಿನ, ಮಧ್ಯಾಹ್ನದ ಹೊತ್ತಿಗೆ ಬಾಬರಿ ಮಸೀದಿಯ ಗುಮ್ಮಟಗಳು ಉರುಳುತ್ತಿದ್ದಾಗ ಸ್ಥಳದಲ್ಲಿ ಲಕ್ಷಾಂತರ ಜನ (ಒಂದು ಅಂದಾಜಿನ ಪ್ರಕಾರ ಎರಡು ಲಕ್ಷ) ಸೇರಿದ್ದರು. ಮಸೀದಿ ಧ್ವಂಸ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ದೇಶಾದ್ಯಂತ ನಡೆದ ರಾಮಜನ್ಮಭೂಮಿ ಚಳವಳಿಯನ್ನು ಸಂಘಟಿಸಿದ್ದ ಬಿಜೆಪಿ ಅದರ ನಾಯಕರುಗಳಾದ ಎಲ್.ಕೆ.ಅಡ್ವಾಣಿ, ಮುರಳಿಮನೋಹರ ಜೋಷಿ, ಉಮಾಭಾರತಿ ಹಾಗೂ ವಿಶ್ವ ಹಿಂದೂ ಪರಿಷತ್‌ನ ಅಶೋಕ್ ಸಿಂಘಾಲ್ ಮತ್ತು ಪೇಜಾವರ ಮಠಾಧೀಶರು ಬಾಬರಿ ಮಸೀದಿ ಎದುರು ಅಂದು ಹಾಜರಿದ್ದರು. ಉತ್ತರ ಪ್ರದೇಶದ ಬಿಜೆಪಿ ಸರಕಾರದ ಆಗಿನ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಬಾಬರಿ ಮಸೀದಿಯನ್ನು ರಕ್ಷಿಸಲು ತನ್ನ ಸರಕಾರ ಬದ್ಧವಾಗಿದೆ ಎಂದು ಸುಪ್ರೀಂಕೋರ್ಟಿಗೆ ಭರವಸೆ ನೀಡಿದ್ದರು. ಅದನ್ನು ಕಾರ್ಯಗತಗೊಳಿಸಲು ಅಯೋಧ್ಯೆಯಲ್ಲಿ ಆ ದಿನ ಸಾವಿರಾರು ಪೊಲೀಸರು ಮತ್ತು ಅರೆ ಸೈನಿಕ ಪಡೆಯ ಸಿಬ್ಬಂದಿ 'ಡ್ಯೂಟಿ' ಮೇಲಿದ್ದರು. ಆದರೆ ಅವರು ತಮ್ಮ ಡ್ಯೂಟಿ ಮಾಡಲಿಲ್ಲ; ರಾಜ್ಯದ ಮುಖ್ಯಮಂತ್ರಿ ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲ.

ಬಾಬರಿ ಮಸೀದಿ ಧ್ವಂಸ ತನ್ನ ಬದುಕಿನ ಅತ್ಯಂತ ವಿಷಾದದ ಘಟನೆಗಳಲ್ಲಿ ಒಂದು ಎಂದು ಅಡ್ವಾಣಿ ಆನಂತರ ಹೇಳಿದರು. ಆದರೆ ಆ ಕಾರ್ಯಕ್ರಮಕ್ಕೆ ಜನರನ್ನು ಒಗ್ಗೂಡಿಸಲು ಅಡ್ವಾಣಿ, ಗುಜರಾತ್‌ನ ಸೋಮನಾಥದಿಂದ ಹೊರಟು ದೇಶದ ಬಹುಭಾಗ ಸಂಚರಿಸಿ, ಅಯೋಧ್ಯೆ ತಲುಪುವ 'ರಥಯಾತ್ರೆ' ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕರ್ನಾಟಕದ ಹಲವು ಊರುಗಳು ಸೇರಿದಂತೆ ಈ 'ರಥಯಾತ್ರೆ'ಯ ಹಾದಿ ಉದ್ದಕ್ಕೂ ಮುಸ್ಲಿಮರ ಮೇಲೆ ಸಂಘಟಿತ ಹಿಂಸಾಚಾರ ನಡೆಯಿತು. ಅದರ ನೈತಿಕ ಜವಾಬ್ದಾರಿಯನ್ನು ಹೊರಲು ಅವರು ಈಗಲೂ ಸಿದ್ಧರಿಲ್ಲ; ಅಷ್ಟೇ ಯಾಕೆ ಅಡ್ವಾನಿ ಮತ್ತು ಅವರ ಪಕ್ಷ ಆ ಹಿಂಸೆ ನಡೆದಿದೆ ಎಂಬುದನ್ನು ಸಹ ಒಪ್ಪಿಕೊಳ್ಳುವುದಿಲ್ಲ. ರಾಮಜನ್ಮಭೂಮಿ ಚಳವಳಿಯ ಇನ್ನೊಬ್ಬ ನೇತಾರರಾದ ಪೇಜಾವರ ಮಠಾಧೀಶರು ಸಹ ಬಾಬರಿ ಮಸೀದಿ ಧ್ವಂಸವಾದದ್ದರ ಬಗ್ಗೆ ವಿಷಾದಿಸಿದ್ದಾರೆ. ಆದರೆ ಆನಂತರವೂ ಅವರು ಬಿಜೆಪಿ ಮತ್ತು ಸಂಘಪರಿವಾರಗಳ ಜೊತೆ ತಮ್ಮ ಒಡನಾಟವನ್ನು ಮುಂದುವರೆಸಿದರು. ಅಷ್ಟೇ ಯಾಕೆ ಗುಜರಾತ್ 2002ರ ನಂತರವೂ ಪೇಜಾವರ ಶ್ರೀಗಳು ಸಂಘಪರಿವಾರದ ಕ್ಯಾಂಪ್‌ನಲ್ಲೇ ಉಳಿದಿದ್ದಾರೆ. 2004ರಲ್ಲಿ ಉಡುಪಿಯಲ್ಲಿ ನಡೆದ ಹಿಂದೂ ಸಮಾಜೋತ್ಸವದ ಭಾರೀ ಸಭೆಯಲ್ಲಿ ಪ್ರವೀಣ ತೊಗಾಡಿಯಾನಂತಹ ಅಪ್ಪಟ ಫ್ಯಾಸಿಸ್ಟನ ಜೊತೆ ವೇದಿಕೆಯಲ್ಲಿ ಆಸೀನರಾಗಲು ಶ್ರೀಗಳಿಗೆ ಚೂರೂ ಮುಜುಗರವಾಗಲಿಲ್ಲ. ಹಿಂಸೆಗೆ ವಿಷಾದ ಪಟ್ಟುಕೊಳ್ಳುವವರು ವರ್ತಿಸುವ ರೀತಿಯೆ ಇದು?

ರಾಮಜನ್ಮಭೂಮಿ ಚಳವಳಿಯ ದಿನಗಳಲ್ಲಿ ನಡೆದ ಹಿಂಸಾಚಾರ ಮತ್ತು ಬಾಬರಿ ಮಸೀದಿ ಧ್ವಂಸ ಕುರಿತು ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರಕಾರವೂ ನಿಷ್ಕ್ರಿಯವಾಗಿತ್ತು. ಮಸೀದಿ ಧ್ವಂಸವಾದ ಬಹಳ ದಿನಗಳ ನಂತರ ಆ ಕುರಿತು ನ್ಯಾಯಾಂಗ ತನಿಖೆಗೆ ಸರಕಾರ ನಿವೃತ್ತ ನ್ಯಾಯಾಧೀಶ ಲಿಬರ್‌ಹಾನ್ಸ್ ನೇತೃತ್ವದಲ್ಲಿ ಒಂದು ಆಯೋಗ ರಚಿಸಿತು. ಈ ಆಯೋಗ 17 ವರ್ಷಗಳ ಕಾಲ ವಿಚಾರಣೆ ನಡೆಸಿ 2009ರಲ್ಲಿ ಸರಕಾರಕ್ಕೆ ತನ್ನ ವರದಿ ಸಲ್ಲಿಸಿತು. ಲಕ್ಷಾಂತರ ಜನರ ಕಣ್ಣೆದುರು ನಡೆದ ಆ ದುರ್ಘಟನೆಯ ಅಪರಾಧಿಗಳನ್ನು ಲಿಬರ್‌ಹಾನ್ಸ್ ಆಯೋಗದ ವರದಿ ಹೆಸರಿಸಲಿಲ್ಲ; ಯಾವ ಕಾನೂನು ಕ್ರಮಕ್ಕೂ ಶಿಫಾರಸು ಮಾಡಲಿಲ್ಲ. ಅದಕ್ಕೆ ಪ್ರತಿಯಾಗಿ 1992-93ರ ಮುಂಬಯಿ ಹಿಂಸಾಚಾರದ ಬಗ್ಗೆ ವಿಚಾರಣೆ ನಡೆಸಲು ನೇಮಕಗೊಂಡ ಶ್ರೀಕೃಷ್ಣ ಆಯೋಗ ತನ್ನ ವರದಿಯಲ್ಲಿ ಹಿಂಸೆಗೆ ಕಾರಣಕರ್ತರಾದ ರಾಜಕಾರಣಿಗಳು ಮಾತ್ರವಲ್ಲ ಹಿಂಸೆಯಲ್ಲಿ ಶಾಮೀಲಾದ ಪೊಲೀಸು ಅಧಿಕಾರಿಗಳನ್ನು ಸಹ ಹೆಸರಿಸಿ ಅವರ ವಿರುದ್ಧ ಕ್ರಮತೆಗೆದುಕೊಳ್ಳಲು ಸೂಚಿಸಿತು. ಆದರೆ ಸರಕಾರವೇ ಆ ವರದಿಯನ್ನು ನಿರ್ಲಕ್ಷಿಸಿಬಿಟ್ಟಿತು. ಹೀಗೆ ಕರ್ತವ್ಯಚ್ಯುತಿ, ವಿಶ್ವಾಸದ್ರೋಹ ಮತ್ತು ಸೋಗಲಾಡಿತನಗಳು 1992ರ ನಂತರ - ಇನ್ನೂ ನಿಖರವಾಗಿ ಹೇಳಬೇಕು ಎಂದರೆ 1984ರ ಸಿಖ್ ನರಮೇಧದ ನಂತರ - ಆಳುವವರ ಅಧಿಕಾರ ನಿರ್ವಹಣೆಯ ವಿಧಾನವೇ ಆಗಿಬಿಟ್ಟಿತು. ದೇಶದಲ್ಲಿ ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಮೌಲ್ಯ ಕುಸಿದುಬಿದ್ದಿತ್ತು.

ಬಾಬರಿ ಮಸೀದಿಯನ್ನು ಯಾಕೆ ಕೆಡವಲಾಯಿತು? ಮಸೀದಿ ಇದ್ದ ಆ ಸ್ಥಳವೇ ರಾಮಜನ್ಮಭೂಮಿ ಮತ್ತು ಬಾಬರನ ಮಂತ್ರಿ ಮಸೀದಿ ಕಟ್ಟುವುದಕ್ಕೆ ಮೊದಲು ಅಲ್ಲಿ ದೇವಸ್ಥಾನವಿತ್ತು ಎಂಬುದು ಬಿಜೆಪಿ ಮತ್ತು ಸಂಘಪರಿವಾರ ಬಾಬರಿ ಮಸೀದಿ ಧ್ವಂಸಕ್ಕೆ ಕೊಡುವ ಕಾರಣ. ಇವತ್ತಿನ ಫೈಜಾಬಾದ್ ನಗರದ ಅಯೋಧ್ಯೆಯೇ ರಾಮಾಯಣದಲ್ಲಿ ಉಲ್ಲೇಖಿತವಾದ ಅಯೋಧ್ಯೆ ಎಂಬುದು ಅವರು ಕೊಡುವ ಇನ್ನೊಂದು ಕಾರಣ. ಇವೆಲ್ಲವೂ ಚರ್ಚಾಸ್ಪದ ವಿಚಾರಗಳು. ಅದು ಹೇಗೂ ಇರಲಿ, ಬಾಬರಿ ಮಸೀದಿ ಧ್ವಂಸಕ್ಕೆ ಕೊಡಲಾಗುವ ಕಾರಣಗಳೆಲ್ಲವೂ ನಿಜವೆಂದೇ ಭಾವಿಸಿದರೂ 1992ರ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ನಡೆದದ್ದು ಒಂದು ಕಾನೂನುಬಾಹಿರ ಕೃತ್ಯ. ಚರಿತ್ರೆಯಲ್ಲಿ ಹಿಂದೆ ನಡೆದಿರಬಹುದಾದ ಪ್ರಮಾದಗಳನ್ನು ಈ ರೀತಿ ಸರಿಪಡಿಸುವುದು ನ್ಯಾಯವೂ ಅಲ್ಲ; ಧರ್ಮವೂ ಅಲ್ಲ. ಅದು ಬರ್ಬರತೆ. ನಮ್ಮೊಡನೆ ಈಗ ಸಹಬಾಳ್ವೆ ನಡೆಸುತ್ತಿರುವ ಮುಸ್ಲಿಮ್ ಸಮುದಾಯವನ್ನು ಹಿಂಸೆ ಮತ್ತು ಅವಮಾನಕ್ಕೆ ಒಳಪಡಿಸದೆ ಚರಿತ್ರೆಯ ತಪ್ಪುಗಳನ್ನು ಹೀಗೆ ಸರಿಪಡಿಸಲಾಗುವುದಿಲ್ಲ.

1992 ಡಿಸೆಂಬರ್ 6 ರಂದು ಬಾಬರಿ ಮಸೀದಿ ಧ್ವಂಸದ ಜೊತೆಗೆ ಅಯೋಧ್ಯೆಯ ಬೀದಿಗಳಲ್ಲಿ ಮತ್ತು ಮುಸ್ಲಿಮ್ ಮೊಹಲ್ಲಾಗಳಲ್ಲಿ ಏನೇನು ನಡೆಯಿತು ಎಂಬುದನ್ನೂ ನಾವು ಗಮನಿಸಬೇಕು. ಆ ದಿನ ಇಳಿಸಂಜೆಯ ಹೊತ್ತಿಗೆ ಬಾಬರಿ ಮಸೀದಿಯನ್ನು ಸಂಪೂರ್ಣವಾಗಿ ಕೆಡವಿದ ನಂತರ ದೇಶದ ಎಲ್ಲೆಡೆಯಿಂದ ಬಂದಿದ್ದ ಕರಸೇವಕರು ಹಿಂಡುಹಿಂಡಾಗಿ ಊರಿನ ಬೀದಿಗಳ ಒಳಗೆ ನುಗ್ಗಿದರು. ಫೈಜಾಬಾದ್ ನಗರದಲ್ಲಿ ಮಾತ್ರವಲ್ಲ, ಅಯೋಧ್ಯೆಯಲ್ಲಿ ಕೂಡ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ನೆಲೆಸಿದ್ದು, ಅವರಲ್ಲಿ ಹೆಚ್ಚಿನವರು ಡಿಸೆಂಬರ್ 6ಕ್ಕೆ ಮೂರು ನಾಲ್ಕು ದಿನ ಮೊದಲೇ ಜೀವಭಯದಲ್ಲಿ ಮನೆಮಾರು ತೊರೆದುಹೋಗಿದ್ದರು. ಬೇರೆ ಎಲ್ಲಿಯೂ ನೆಂಟರು ಇಷ್ಟರು ಇಲ್ಲದವರು, ಅನಾಥರು, ವೃದ್ಧರು, ಅಂಗವಿಕಲರು, ರೋಗಿಗಳು- ಹೀಗೆ ಅಯೋಧ್ಯೆಯ ಅಸಹಾಯಕ ಮುಸ್ಲಿಮರು ಮಾತ್ರ ಆ ದಿನ ತಮ್ಮ ಮನೆಗಳಲ್ಲೇ ಉಳಿದುಕೊಂಡಿದ್ದರು. ಸ್ಥಳೀಯ ಆರೆಸ್ಸೆಸ್ ಚಡ್ಡಿಗಳು ಮತ್ತು ಪೊಲೀಸರ ನೆರವಿನಿಂದ ಕರಸೇವಕರು ಊರಿನ ಮುಸ್ಲಿಮ್ ಮನೆಗಳನ್ನು ಗುರುತಿಸಿ ಬಾಗಿಲು ಮುರಿದು, ಒಳಗೆ ಇದ್ದುದೆಲ್ಲವನ್ನೂ ಲೂಟಿಮಾಡಿ ಬೆಂಕಿ ಕೊಟ್ಟರು. ಈ ಮನೆಗಳು ಹೊತ್ತಿ ಉರಿಯುತ್ತಿದ್ದುದು ಬಹು ದೂರಕ್ಕೂ ಕಾಣಿಸುತ್ತಿತ್ತು. ಧ್ವಂಸಗೊಂಡ ಬಾಬರಿ ಮಸೀದಿಯ ಆವರಣದಲ್ಲಿದ್ದ ವಿಹಿಂಪದ ಸಾಧ್ವಿ ಋತುಂಭರ "ನೋಡಿ ನೋಡಿ, ಮುಸ್ಲಿಮರು ತಮ್ಮ ಮನೆಗಳಿಗೆ ತಾವೇ ಬೆಂಕಿ ಹಚ್ಚಿ ನಮಗೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ" ಎಂದು ಕಿರುಚಿಕೊಂಡರು; ಸ್ಥಳದಲ್ಲಿದ್ದ ಸಂಘಪರಿವಾರದ ಒಬ್ಬ ದೊಣ್ಣೆ ನಾಯಕ ಧರ್ಮೇಂದ್ರ ಎಂಬಾತ ನೆರೆದಿದ್ದ ಪತ್ರಕರ್ತರಿಗೆ ಆ ಬೆಂಕಿಯ ಕುರಿತು ಬೇರೆಯದೇ ಪ್ಲೇಟ್ ಹಾಕಿದ. "ಅಯೋಧ್ಯೆಯನ್ನು ಹಿಂದೂಗಳ ವ್ಯಾಟಿಕನ್ (ಕೆಥೋಲಿಕ್ ಪಂಥದ ಕ್ರೈಸ್ತರ ಪವಿತ್ರ ಕ್ಷೇತ್ರ) ಆಗಿ ಪರಿವರ್ತಿಸಲು ಇದೊಂದೇ ಮಾರ್ಗ" ಎಂಬುದು ಅವನ ವಿವರಣೆಯಾಗಿತ್ತು!

ಆ ದಿನ ಅಯೋಧ್ಯೆಯಲ್ಲಿ ಕರಸೇವಕರು 134 ಮುಸ್ಲಿಮ್ ಮನೆಗಳನ್ನು ಸುಟ್ಟು ಹಾಕಿದರು. ಹಿಂದೂಗಳ ಮನೆಗಳಿಗೆ ಒತ್ತಿಕೊಂಡೇ ಕಟ್ಟಲಾಗಿದ್ದ ಕೆಲವು ಮುಸ್ಲಿಮ್ ಕಟ್ಟಡಗಳನ್ನು ಮಾತ್ರ ಹಾಗೇ ಬಿಡಲಾಯಿತು. ಕರಸೇವಕರು ಹಚ್ಚಿದ ಬೆಂಕಿಯಲ್ಲಿ ಆ ದಿನ ಮುಸ್ಲಿಮ್ ಮನೆಗಳ ಜೊತೆಗೆ ಬಾಬರಿ ಮಸೀದಿಯ ಕಟ್ಟಕಡೆಯ ಇಮಾಮ್ ಅವರ ಇಬ್ಬರು ಗಂಡುಮಕ್ಕಳೂ ಸೇರಿದಂತೆ 13 ಜನ ಮುಸ್ಲಿಮರು ಸಹ ಬೆಂದುಹೋದರು. ಬಾಬರಿ ಮಸೀದಿಯಲ್ಲದೆ ಊರಿನ ಇತರ 23 ಮಸೀದಿ, 11 ಮಜಾರ್, ಮೂರು ಈದ್ಗಾ, ಎರಡು ಮದ್ರಸ ಮತ್ತು ಒಂದು ದೇವಸ್ಥಾನ (!) ಗಳು ಸಹ ಅಂದು ಧ್ವಂಸಗೊಂಡವು (ವಿವರಗಳಿಗೆ ನೋಡಿ: ಕ್ರಿಯೇಟಿಂಗ್ ಎ ನ್ಯಾಶನ್ಯಾಲಿಟಿ- ದ ರಾಮಜನ್ಮಭೂಮಿ ಮೂವ್‌ಮೆಂಟ್ ಎಂಡ ದ ಫಿಯರ್ ಆಫ್ ದ ಸೆಲ್ಫ್- ಆಶೀಶ್‌ನಂದಿ, ಶಿಖಾ ತ್ರಿವೇದಿ, ಶೈಲ್ ಮಯರಂ, ಅಚ್ಯುತ್‌ಯಾಜ್ಞಿಕ್-ಪುಟ 181-206. ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್-1995).


ಬಾಬರಿ ಮಸೀದಿ ನಿರ್ಮಾಣದ ಚಾರಿತ್ರಿಕ ಪ್ರಮಾದವನ್ನು ಸರಿಪಡಿಸುವುದೇ ಕರಸೇವಕರ ಉದ್ದೇಶವಾಗಿದ್ದರೆ ಈ ಜೀವ ಹಿಂಸೆ ಯಾಕೆ ನಡೆಯಿತು? ಮುಸ್ಲಿಮರ ಮಸೀದಿ ಮತ್ತು ಸಂತರ ಗೋರಿಗಳನ್ನು ನಾಶಪಡಿಸಿದ್ದು ಏಕೆ? ಬಾಬರಿ ಮಸೀದಿ/ ರಾಮಜನ್ಮ ಭೂಮಿ ವಿವಾದ ದೇಶದ ಹಲವೆಡೆ ಥೇಟು ಅಂತಹದ್ದೇ ವಿವಾದಗಳು ತಲೆದೋರಲು ಕಾರಣವಾಗಿದೆ. ಉದಾಹರಣೆಗೆ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಘ ಪರಿವಾರ ಕೈಗೆತ್ತಿಕೊಂಡಿರುವ ಬಾಬಾಬುಡನ್‌ಗಿರಿ-ದತ್ತಪೀಠ ವಿವಾದ. ಬಿಜೆಪಿ ನಾಯಕ ಅನಂತಕುಮಾರ್ "ಬಾಬಾಬುಡನ್‌ಗಿರಿಯನ್ನು ಕರ್ನಾಟಕದ ಅಯೋಧ್ಯೆಯನ್ನಾಗಿ ಪರಿವರ್ತಿಸುವೆವು" ಎಂದು ಆ ವಿವಾದ ಒಂದು ಚಳವಳಿಯಾಗಿ ಬೆಳೆಯುತ್ತಿದ್ದಾಗಲೇ ಹೇಳಿದ್ದರು. ಬಿಜೆಪಿ ಮತ್ತು ಸಂಘಪರಿವಾರ ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೋಮುದ್ವೇಷ ಹರಡುವ ತಮ್ಮ ಉದ್ದೇಶದಲ್ಲಿ ಸಾಕಷ್ಟು ಯಶಸ್ವಿಯಾಗಿವೆ.

ಬಾಬರಿ ಮಸೀದಿ ಧ್ವಂಸವನ್ನು ಮುಸ್ಲಿಮ್ ಅರಸರ ಆಳ್ವಿಕೆಯ ದಿನಗಳಲ್ಲಿ ತಾವು (ಅಂದರೆ ತಮ್ಮ ಪೂರ್ವಜರು) ಅನುಭವಿಸಿದ ಹಿಂಸೆ ಮತ್ತು ಅವಮಾನಗಳಿಗೆ ಈಗ ಹಿಂದೂಗಳು ತೋರುತ್ತಿರುವ ಪ್ರತಿಕ್ರಿಯೆ ಎಂದು ವಿವರಿಸುತ್ತಿರುವವರು ಈ ಮಸೀದಿ ಧ್ವಂಸಕ್ಕೆ ಪೂರ್ವಭಾವಿಯಾಗಿ ಸಂಘಪರಿವಾರ ನಡೆಸಿದ ಹಲವು ದಶಕಗಳ ತಯಾರಿಯನ್ನು ಕಡೆಗಣಿಸುತ್ತಿದ್ದಾರೆ. ಸಿದ್ಧಾಂತ ಮತ್ತು ಜನಸಂಘಟನೆಯ ತಂತ್ರಗಳು-ಎರಡರಲ್ಲೂ ಬಿಜೆಪಿ ಮತ್ತು ಫ್ಯಾಸಿಸಂ ನಡುವೆ ಇರುವ ನಿಕಟ ಹೋಲಿಕೆಯನ್ನೂ ಅವರು ಅಲಕ್ಷಿಸುತ್ತಿದ್ದಾರೆ. ಬಿಜೆಪಿ ದೇಶದ ಇತರ ರಾಜಕೀಯ ಪಕ್ಷಗಳಂತೆಯೇ ಒಂದು ಪಕ್ಷ ಎಂದು ಭಾವಿಸುವ ಕಾಲ ಎಂದೋ ಮುಗಿದು ಹೋಗಿದೆ. ಬಿಜೆಪಿಯ ಫ್ಯಾಸಿಸ್ಟ್ ಸ್ವರೂಪವನ್ನು ಗುರುತಿಸದೆ ಅದರ ದ್ವೇಷ ಮತ್ತು ಹಿಂಸೆಯ ರಾಜಕೀಯವನ್ನು ಎದುರಿಸಲಾಗುವುದಿಲ್ಲ. ಆ ಕಾರಣಕ್ಕಾದರೂ ನಾವು ಮತ್ತೊಮ್ಮೆ ಬಾಬರಿ ಮಸೀದಿ ಧ್ವಂಸವನ್ನು ನೆನಪು ಮಾಡಿಕೊಳ್ಳಬೇಕು.

■ ಜಿ. ರಾಜಶೇಖರ

ರವಿ ಪೂಜಾರಿ V/s ವಿಕ್ಕಿ ಶೆಟ್ಟಿ

ಮಂಗಳೂರು ಬೀದಿಯಲ್ಲಿ ರೌಡಿ ಬಿಜ್ಜೈ ರಾಜಾ ಮಟಾಷ್!!



ರವಿ ಪೂಜಾರಿ

ಮಂಗಳೂರಿನ ಪಾತಕ ಪ್ರಪಂಚದಲ್ಲಿ ಮತ್ತೆ ಮಚ್ಚುಗಳ ಮೊರೆತ ಕೇಳಿಸಿದೆ! ಕೊಂದವನು ಕೊಲೆಯಾಗಲೇಬೇಕೆಂಬ ಅಂಡರ್‌ವರ್ಲ್ಡ್‌ನ ಅಲಿಖಿತ ಕಾನೂನು ಈ ರಕ್ತದೋಕುಳಿಗೂ ಕರಾರುವಾಕ್ಕಾಗಿ ಲಾಗೂ ಆಗಿದೆ. ಕರಾವಳಿ ಮೂಲದ ವಿದೇಶ ನಿವಾಸಿ ವೈರಿ ಡಾನ್‌ಗಳಾದ ರವಿ ಪೂಜಾರಿ ಮತ್ತು ವಿಜಯ್ ಶೆಟ್ಟಿ ಯಾನೆ ವಿಕ್ಕಿ ಶೆಟ್ಟಿ ನಡುವಿನ ದುಷ್ಮನಿಗೆ ಮಂಗಳೂರಿನ ಸಣ್ಣ ಸೈಜಿನ ರೌಡಿ ಬಿಜ್ಜೈ ರಾಜಾ ಹತನಾಗಿ ಹೋಗಿದ್ದಾನೆ!!

ಈ ಬಿಜ್ಜೈ ರಾಜಾ ಮೂರೂವರೆ ವರ್ಷಗಳ ಹಿಂದೆ ಅಂದು ಮಂಗಳೂರು ಭೂಗತಲೋಕವನ್ನು ಆಳುತ್ತಿದ್ದ ನಟೋರಿಯಸ್ ಪಾಂಡು ಪೈಯನ್ನು ಕೊಂದು ಹಾಕಿದ್ದ ಪಾತಕಿ. ಪಾಂಡು ಭೂಗತ ದೊರೆ ರವಿ ಪೂಜಾರಿಯ ಪಂಟರ್ ಆಗಿದ್ದರೆ, ಬಿಜ್ಜೈ ರಾಜಾನಿಗೆ ಬಾಸ್ ಆಗಿದ್ದವನು ಬ್ಯಾಂಕಾಕ್‌ನಲ್ಲಿರುವ ಡ್ರಗ್ ಮಾಫಿಯಾದ ಕಿಂಗ್‌ಪಿನ್ ವಿಕ್ಕಿ ಶೆಟ್ಟಿ. ಪಾಂಡುನನ್ನು ವಿಕ್ಕಿ ಶೆಟ್ಟಿಯ ಆಣತಿಯಂತೆ ರಾಜಾ ಫಿನಿಷ್ ಮಾಡಿದ್ದ. ಅಂದು ಕೆರಳಿದ್ದ ರವಿ ಪೂಜಾರಿ ಬಿಜ್ಜೈ ರಾಜಾನ ನೆತ್ತರಿಗಾಗಿ ಹಪಹಪಿಸುತ್ತಲೇ ಇದ್ದ! ಇದಕ್ಕೆ ಮೊನ್ನೆ ಡಿಸೆಂಬರ್‌ನ ಮೊದಲ ದಿನವೇ ಮುಹೂರ್ತ ಕೂಡಿಬಂದಿದೆ. ಜೀವಭಯದಿಂದ ತಲೆ ಮರೆಸಿಕೊಂಡು ಓಡಾಡುತ್ತಿದ್ದ ರಾಜಾನನ್ನು ಮುಗಿಸಲು ನಿಖರ ಸ್ಕೆಚ್ ಹಾಕಿಕೊಂಡಿದ್ದ ರವಿ ಪೂಜಾರಿಯ ಗ್ಯಾಂಗ್‌ಸ್ಟರ್‌ಗಳು ಮೊನ್ನೆ ಮಂಗಳೂರಿನ ಪಳ್ನೀರ್‌ನ ಡ್ಯಾನಿಶ್ ಹೋಟೆಲ್ ಮುಂದೆ ಮಚ್ಚಿನಿಂದ ಕೊಚ್ಚಿ ಕೊಂದೆಸೆದು ಹೋಗಿದ್ದಾರೆ....

ಟ್ರಿಕ್ಕೀ ವಿಕ್ಕಿ

ವಿಜಯ ಶೆಟ್ಟಿ ಯಾನೆ ವಿಕ್ಕಿ ಶೆಟ್ಟಿ ಯಾನೆ ವಿಜಯ ಚೆಕ್ಕಾ ಎಂಬ ಸ್ಫುರದ್ರೂಪಿ ರೌಡಿಯ ಮೂಲ ಬಂಟ್ವಾಳದ ವಿಟ್ಲ. ತುಂಬ ಹಿಂದೆಯೇ ಮುಂಬೈ ಸೇರಿ ಛೋಟಾ ರಾಜನ್‌ನ ಪಾತಕ ಪಡೆಯಲ್ಲಿ ಪಳಗಿಕೊಂಡಿದ್ದ ಈ ವಿಕ್ಕಿ, ಆಗ ರವಿ ಪೂಜಾರಿಯೂ ಛೋಟಾ ರಾಜಾನ ಗ್ಯಾಂಗ್‌ನಲ್ಲಿದ್ದ. ರವಿ ಮತ್ತು ವಿಕ್ಕಿ ನಡುವೆ ಮಂಗಳೂರು ಕಡೆಯವರೆಂಬ ಹೊಕ್ಕಳುಬಳ್ಳಿ ಸಂಬಂಧ ಬೆಸೆದುಕೊಂಡಿತ್ತು. ಆದರೆ ಮೊದಲು ಛೋಟಾ ರಾಜನ್ ಪಡೆಯಿಂದ ಹೊರನಡೆದವನು ರವಿ ಪೂಜಾರಿ. ಆನಂತರ ವಿಕ್ಕಿ ಶೆಟ್ಟಿ ಪ್ರತ್ಯೇಕ ಡಿ-ಕಂಪನಿ ಕಟ್ಟುತ್ತಾನೆ. ಭರತ್ ನೇಪಾಳಿ, ಸಂತೋಷ್ ಶೆಟ್ಟಿಯಂಥ ಅಪಾಯಕಾರಿ ಪಾತಕಿಗಳು ಆತನಿಗೆ ಸಾಥ್ ಕೊಡುತ್ತಾರೆ.

ಛೋಟಾ ರಾಜನ್ ಗ್ಯಾಂಗಲ್ಲಿ ನಾಲ್ಕನೇ ರ್‍ಯಾಂಕಲ್ಲಿ ಇದ್ದ ವಿಕ್ಕಿ ಶೆಟ್ಟಿ ತುಂಬ ಟ್ರಿಕ್ಕೀ ಪಾತಕಿಯೆಂದೇ ಕುಖ್ಯಾತನಾಗಿದ್ದ. ಮುಂಬೈನ ತಿಲಕನಗರದ ಹಫ್ತಾಕ್ಕಾಗಿ ಗುರು ಛೋಟಾ ರಾಜನ್‌ನೊಂದಿಗೆ ವಿಕ್ಕಿ ಶೆಟ್ಟಿಗೆ ಅದೊಂದು ದಿನ ಭರ್ಜರಿ ಜಗಳವಾಗುತ್ತದೆ. ಗುರುವಿಗೇ ತಿರುಗಿಬಿದ್ದ ವಿಕ್ಕಿ ಆತನ ಬಲಗೈ ಬಂಟನಾಗಿದ್ದ ಪರಿತನಾಶ್‌ನನ್ನು ತುಂಬ ಚಾಣಾಕ್ಷತೆಯಿಂದ ಕೊಂದುಹಾಕುತ್ತಾನೆ. ಏಳೇಳು ಬಾಡಿಗಾರ್ಡ್‌ಗಳು, ಏಳೆಂಟು ಬೇಟೆ ನಾಯಿಗಳ ರಕ್ಷಣೆಯಲ್ಲಿ ಸದಾ ಇರುತ್ತಿದ್ದ ಪರಿತನಾಶ್‌ನನ್ನು ಆತನ ಬೆಡ್‌ರೂಮಲ್ಲೇ ವಿಕ್ಕಿ ಫಿನಿಷ್ ಮಾಡಿದಾಗ ಇಡೀ ಮುಂಬೈ ಭೂಗತ ಲೋಕವೇ ಬೆಚ್ಚಿಬೀಳುತ್ತದೆ. ಆಗ ದಶದಿಕ್ಕಿಗೆ ವಿಕ್ಕಿ ಶೆಟ್ಟಿಯ ನಟೋರಿಯಸ್ ಮಹಿಮೆ ಪಸರಿಸಿ ಆತನಿಗೆ ಭಯಂಕರ ಮಾರ್ಕೆಟ್ ಬರುತ್ತದೆ!

ರವಿ ಪೂಜಾರಿ ಮತ್ತು ವಿಕ್ಕಿ ಶೆಟ್ಟಿ ಪ್ರತ್ಯೇಕ ಡಿ-ಕಂಪನಿಗಳನ್ನು ಕಟ್ಟಿಕೊಂಡರೂ ಅವರ ನಡುವೆ ಅಂಥ ವೈರತ್ವವೇನೂ ಇರುವುದಿಲ್ಲ. ಆದರೆ ಛೋಟಾ ರಾಜನ್ ಪಡೆ ಮಾತ್ರ ವಿಕ್ಕಿಯನ್ನು ಅಟ್ಟಾಡಿಸುತ್ತಲೇ ಇರುತ್ತದೆ. ಆಗ ಕಂಗಾಲಾಗುತ್ತಾನೆ ವಿಕ್ಕಿ ಶೆಟ್ಟಿ. 2008 ರಲ್ಲಿ ತಲೆ ತಪ್ಪಿಸಿಕೊಂಡು ಮಂಗಳೂರಿಗೆ ಬರುತ್ತಾನೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ 'ದಿನರಾಜ್' ಹೋಟೆಲ್‌ನಲ್ಲಿ ಇಸ್ಪೀಟು ಅಡ್ಡೆ ನಡೆಸುತ್ತಾನೆ. ಹಾಗಂತ ಆತ ರವಿ ಪೂಜಾರಿಯಷ್ಟು ಹಾವಳಿ ಊರಲ್ಲಿ ಇಟ್ಟವನಲ್ಲ. ಮಂಗಳೂರಲ್ಲಿ ತನ್ನಿಂದ ಭಾನ್ಗಡಿ ಆಗಬಾರದು ಎಂಬ ಸೆಂಟಿಮೆಂಟ್ ವಿಕ್ಕಿಯಲ್ಲಿತ್ತು. ಹಾಗಾಗಿ ಯಾರದೇ ಉಸಾಬರಿಗೆ ಹೋಗದೇ ಇರುತ್ತಿದ್ದ ವಿಕ್ಕಿಯೆಂದರೆ ಮಂಗಳೂರಿನ ಹಿರಿಯ ಪೊಲೀಸ್ ಅಧಿಕಾರಿಗಳಿಗೆ, ದೊಡ್ಡ ಕಪ್ಪುಹಣದ ವ್ಯಾಪಾರಸ್ಥರಿಗೆಲ್ಲ ಪ್ರೀತಿಯ ಪಾತಕಿಯಾಗಿದ್ದ. ಈ ಖಾಕಿಗಳಿಗೆ-ದೋನಂಬರ್ ವಹಿವಾಟುದಾರರಿಗೆ ಆತ ಸಹಾಯವೂ ಮಾಡುತ್ತಿದ್ದ.

ವಿಕ್ಕಿ-ಪಾಂಡು ವಿರಸ

ವಿಕ್ಕಿ ಮಂಗಳೂರಲ್ಲಿ ತಳವೂರಿ ತನ್ನ ಅಂತಾರಾಷ್ಟ್ರೀಯ ಡ್ರಗ್ ಮಾಫಿಯಾ ನಿಭಾಯಿಸುತ್ತಿದ್ದ. ಆತನ ಖದರಿಗೆ ಮಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಒಂಥರಾ ನಿಗೂಢ ಭಯ-ಹೆಗ್ಗಳಿಕೆ ಪ್ರತೀತಿ ಹಬ್ಬುತ್ತದೆ. ಇದು ಅದ್ಯಾಕೋ ಸ್ಥಳೀಯ ರೌಡಿ ಲೋಕದ ಮೇಲೆ ಹಿಡಿತ ಸಾಧಿಸಿದ್ದ ಪಾಂಡು ಪೈ ಎಂಬ ನಟೋರಿಯಸ್ ಪಾತಕಿಯ ಪಿತ್ಥ ಕೆರಳಿಸುತ್ತದೆ. ವಿಕ್ಕಿಯಿಂದ ತನ್ನ ಇಮೇಜಿಗೆ ಧಕ್ಕೆ ಬರುತ್ತಿದೆ ಎಂಬ ಆತಂಕ ಶುರುವಾಗುತ್ತದೆ. ತನ್ನ "ದೊಡ್ಡಸ್ಥನ" ತೋರಿಸಲು ಆತ ಸುಖಾಸುಮ್ಮನೆ ವಿಕ್ಕಿ ಶೆಟ್ಟಿಯನ್ನು ಕೆಣಕಲು ಶುರು ಮಾಡುತ್ತಾನೆ. ಕುಡಿದ ಮತ್ತಿನಲ್ಲಿ "ಅವನ್ಯಾವ ಸೀಮೆ ಡಾನ್... ನನಗವನು ಯಾವ ಲೆಕ್ಕವೂ ಅಲ್ಲ..." ಎಂದು ಮೂದಲಿಸುವುದು-ಚುಡಾಯಿಸುವುದು ಮಾಡುತ್ತಾನೆ ಪಾಂಡು ಪೈ. ಇದು ಛೋಟಾ ರಾಜನ್‌ನಂಥ ಡಾನ್‌ಗೇ ತಿರುಮಂತ್ರ ಹಾಕಿದ್ದ ವಿಕ್ಕಿ ಶೆಟ್ಟಿಯ "ಈಗೋ" ಕೆರಳಿಸುತ್ತದೆ. ದುಷ್ಮನಿ ಒಳಗೊಳಗೇ ಹೊಗೆಯಾಡಲಾರಂಭಿಸುತ್ತದೆ!



ಹತ್ಯೆಯಾದ ಬಿಜ್ಜೈ ರಾಜಾ

ಈ ಪಾಂಡು ಸಣ್ಣ-ಸಾಮಾನ್ಯ ಕ್ರಿಮಿನಲ್ ಅಲ್ಲ. ಪಾಂಡುಗೆ ಭೂಗತ ಲೋಕದ ದೀಕ್ಷೆ ಕೊಟ್ಟವನು ಘಣಿಯೂರು ಸಾಧುಶೆಟ್ಟಿ. ಆನಂತರ ಆತ ಛೋಟಾ ರಾಜನ್, ರವಿ ಪೂಜಾರಿಗಳಂಥ ವಿದೇಶವಾಸಿ ಡಾನ್-ದಾಕೂಗಳ ಗರಡಿಯಲ್ಲಿ ಪಳಗಿದ್ದ. ಪಾಂಡುನ ಕ್ರಿಮಿನಲ್ ಅಕೌಂಟ್‌ನಲ್ಲಿ ಬರೋಬ್ಬರಿ ಇಪ್ಪತ್ತೊಂದು ಕೇಸುಗಳಿದ್ದವು. ಮೂರು ಕೊಲೆ, ಆರು ಕೊಲೆ ಯತ್ನ, ಆರು ಶಸ್ತ್ರಾಸ್ತ್ರ ಕಾಯ್ದೆ ಕೇಸು ಮತ್ತು ಕೋಮು ಹಿಂಸೆ-ದೊಂಬಿ ಪ್ರಕರಣಗಳು ಪಾಂಡು ಮೇಲಿದ್ದವು. ಕಾರ್ಕಳ ಮೂಲದ ಈ ಕೊಂಕಣಿ ಪೋರ ಮಂಗಳೂರಿನ ರಥ ಬೀದಿಯ ವೆಂಕಟರಮಣ ದೇವಳದ ಹಿಂದೆ ಹೆತ್ತವರೊಂದಿಗೆ ವಾಸವಾಗಿದ್ದ. ಎಲೆಕ್ಟ್ರೀಷಿಯನ್ ಆಗಿದ್ದ ಈತನ ಮೇಲೆ ಮೊದಲು ಕೇಸು ಬಿದ್ದಿದ್ದು 1988 ರಲ್ಲಿ. ಮಂಗಳೂರು ಕೋಮು ಗಲಭೆಗೆ ಸಂಬಂಧಿಸಿದ ಪ್ರಕರಣಗಳವು. ಚೆಡ್ಡಿ ಚತುರರೊಂದಿಗೆ ಸಖ್ಯವಿದ್ದ ಪಾಂಡುಗೆ ರಕ್ತಪಿಪಾಸು ಗೆಟಪ್ಪು ಬಂದಿದ್ದು ಮಾತ್ರ ದೇಜು ಶೆಟ್ಟಿ ಕೊಲೆ ನಂತರ.


ಡಾನ್ ಛೋಟಾ ರಾಜನ್, ರವಿ ಪೂಜಾರಿ ಮತ್ತು ಪಾತಕಿ ಸಾಧು ಶೆಟ್ಟಿಯ ನಂಬಿಗಸ್ಥ ಪಂಟರನಾಗಿ ಫೀಲ್ಡ್ ಮಾಡುತ್ತಿದ್ದ ಪಾಪಿ ಪಾಂಡುನ ಭೂಗತ ಕಾರ್ಯಾಚರಣೆ ಮಂಗಳೂರಿನಿಂದ ಸೂರತ್, ಹೈದ್ರಾಬಾದ್, ಕಾರ್ಕಳ, ಮಹಾರಾಷ್ಟ್ರ, ಗುಜರಾತ್‌ವರೆಗೆ ವ್ಯಾಪಿಸಿತ್ತು. 1997 ರಲ್ಲಿ ಸುರತ್ಕಲ್ ಬಳಿಯ ಚೇಳಾರಿನಲ್ಲಿ ದೇಜು ಶೆಟ್ಟಿಯನ್ನು ಕೊಂದು ಹಾಕುವ ಪಾಂಡುಗೆ ಮಾನವರಕ್ತದ ರುಚಿ ಹತ್ತುತ್ತದೆ. ಆಗಾತನಿಗೆ ಮಂಗಳೂರಿನ ಪಾತಕ ಪ್ರಪಂಚದಲ್ಲಿ ಡಾನ್‌ಗಿರಿಯೂ ಸಿಗುತ್ತದೆ. ಎಮ್ಮೆಕೆರೆ ಸಲಾಮನ ಕೊಂದಿದ್ದ ಪಾಂಡುನ ಪಾತಕ ಪುರಾಣದಲ್ಲಿ ದಾವೂದ್ ಇಬ್ರಾಹಿಂನ ಖಾಸಾ ಸಹೋದರ ರೈಸ್ ಬ್ಹಾಟಾನ ಕತ್ತರಿಸಿ ಹಾಕಿದ್ದ "ಕೀರ್ತಿ"ಯೂ ದಾಖಲಾಗಿತ್ತು. ಅಲ್ಲಿಂದಾಚೆ ಪಾಂಡುನ ಭಯಾನಕ ರೌಡಿಗಿರಿಗೆ ಹೊಸ ಭೀಭತ್ಸತೆ ಬಂದುಬಿಟ್ಟಿತ್ತು. ಛೋಟಾ ರಾಜನ್, ರವಿ ಪೂಜಾರಿಗಳ ನೇರಾನೇರ ಸಂಪರ್ಕ ಹೊಂದಿದ್ದ ಪಾಂಡು ಮಂಗಳೂರು ಪಾತಕಲೋಕ ನಿಭಾಯಿಸುತ್ತಿದ್ದ. ವಾಮಂಜೂರು ರೋಹಿ ಎಂಬ ಲೋಕಲ್ ರೌಡಿಯಿಂದ ಬಚಾವಾಗಲು ಉದ್ದುದ್ದ ಕೂದಲು ಗಡ್ಡ ಬೆಳೆಸಿ, ಆಗಾಗ ಬೋಳಿಸಿ ಓಡಾಡುತ್ತಿದ್ದ.

ಛೋಟಾ ರಾಜನ್‌ನ ಸ್ಕೆಚ್‌ಗಳನ್ನು ಈತ ಕರಾರುವಾಕ್ಕಾಗಿ ಕಾರ್ಯಗತಗೊಳಿಸುತ್ತಿದ್ದ. ಛೋಟಾನ ಆದೇಶದಂತೆ ಪಾಂಡು ದಾವೂದ್‌ನ 'ಡಿ' ಗ್ರೂಪ್‌ನ ಅಕ್ಬರ್‌ಲಾಲ್ ಎಂಬಾತನನ್ನು ಜೆಜೆನಗರ ಪೊಲೀಸ್ ಸ್ಟೇಷನ್ ಏರಿಯಾದಲ್ಲಿ ಬರ್ಬರವಾಗಿ ಕೊಂದೆಸೆಯುತ್ತಾನೆ. ಛೋಟಾನಿಗೆ ತಲೆ ನೋವಾಗಿದ್ದ ದಾವೂದ್‌ನ ತಮ್ಮ ಬಶೀರ್ ಶೇಖ್ ಯಾನೆ ರೈಸ್ ಬಾಟ್ಲಾನನ್ನು ಹತ್ಯೆ ಮಾಡಿ ಬಾಸ್‌ನಿಂದ ಶಹಬ್ಬಾಸ್‌ಗಿರಿ ಗಿಟ್ಟಿಸುತ್ತಾನೆ. ಅರವಿಂದ ದೇವಾಡಿಗ, ಬಾಬು ಶೆಟ್ಟಿ, ಮು[...] ಮತ್ತು ಆನಂದ ಪುತ್ರನ್‌ರ ಜೊತೆ ಸೇರಿಕೊಂಡು ಪಾಂ[...] ಈ ಪಾತಕ ಮಾಡಿರುತ್ತಾನೆ. ತನ್ನ ಸಹೋದ[...] ಕೊಂದವರನ್ನೆಲ್ಲ ದಾವೂದ್ ಒಬ್ಬೊಬ್ಬರನ್ನಾಗಿ ಮುಗಿಸುತ[...] ಅಥವಾ ಪೊಲೀಸರಿಂದ ಎನ್‌ಕೌಂಟರ್ ಮಾಡಿಸುತ[...] ಆದರೆ ಪಾಂಡು ಮಾತ್ರ ಯಾರಿಗೂ ಸಿಗುವುದಿಲ್ಲ. [...] ದಾವೂದ್‌ನ ಹೊಂಚುಹಾಕಿ ಕುಳಿತಿರುವ ಹಂತಕ [...] ಇತ್ತ ಎನ್‌ಕೌಂಟರ್ ನೆಪದಲ್ಲಿ ಹೊಡೆದುರುಳಿಸಲು [...] ಹಿಡಿದು ನಿಂತಿರುವ ಪೊಲೀಸರು. ಮುಂಬೈನ[...] ಬಚಾವಾಗೋದು ಸಾಧ್ಯವಿಲ್ಲ ಎಂದು ಖಾತ್ರಿಯಾದ[...] ಪಾಂಡು ಸೀದಾ ಮಡಿಕೇರಿಯ ಶುಂಠಿಕೊಪ್ಪಕ್ಕೆ ಬರುತ[...] ಅಲ್ಲಿ "ಹಂಝು" ಎಂದು ಹೆಸರು ಬದಲಿಸಿಕೊಂಡು [...] ಎಸ್ಟೇಟಲ್ಲಿ ಕೆಲಸಕ್ಕೆ ಸೇರುತ್ತಾನೆ.


ಇಲ್ಲೂ ಪಾಂಡು ಸುಮ್ಮನುಳಿಯುವುದಿಲ್ಲ. ಪಾ[...] ಕಾರ್ಯಾಚರಣೆ ಭೂಗತನಾಗೇ ಮಾಡುತ್ತಾನೆ. ಉಡುಪಿ[...] ರೌಡಿ ಸಂಪಾದಕ ಹಿತೇಂದ್ರ ಪ್ರಸಾದನ ಕೊಲೆ ಆರೋ[...] ಪಿಟ್ಟಿ ನಾಗೇಶ್‌ನನ್ನು ಮುಗಿಸಲು ಆತನ ವೈರಿಗಳಿಗೆ [...] ಮಾಡುತ್ತಾನೆ. ಅವರಿಗೆ ರಿವಾಲ್ವರ್ ಪೂರೈಸುತ[...] ಮಂಗಳೂರು ಸುತ್ತಮುತ್ತ ಪಾಂಡೂನ ಪುಂಡ[...] ಮಿತಿಮೀರಿ ಹೋಗುತ್ತದೆ. ಧಮಕಿ-ದರೋಡೆ, ಮಡ[...] ಅಟೆಂಪ್ಟ್, ಕಳ್ಳಭಟ್ಟಿ ದಂಧೆ, ಹಫ್ತಾ ವಸೂಲಿ, ಲ್ಯಾ[...] ಲಫಡಾ... ಹೀಗೆ ಹಲವು ಪಾತಕದಲ್ಲಿ ತೊಡಗಿಕೊ[...] ಪಾಂಡುನಿಂದ ಪೊಲೀಸರ ನಿದ್ದೆ ಹಾರಿಹೋಗು[...]



ಛೋಟಾ ರಾಜನ್



ಪಾಂಡು ಪೈ



ಆದೊಂದು ರಾತ್ರಿ ಶುಂಠಿಕೊಪ್ಪದಲ್ಲಿ ನಿದ್ದೆ ಮಾಡು[...] ಆತನನ್ನು ಸಿಸಿಬಿ ಪೊಲೀಸರು ಎತ್ತಾಕ್ಕೊಂಡು ಮಂಗ[...] ಬರುತ್ತಾರೆ. ಆದರೆ ಮಂಗಳೂರು ಪೊಲೀಸರು ಪಾಂಡು[...] ಸೂರತ್ ಪೊಲೀಸರಿಗೆ ಒಪ್ಪಿಸಬೇಕಾಗುತ್ತದೆ. ಗುಜರಾ[...] ಜೈಲಿಂದ ಬಂದಬಳಿಕ ಪಾಂಡು ಕ್ರಿಮಿನಲ್ ಕೆ[...] ಬಿಟ್ಟು ಲ್ಯಾಂಡ್ ಡೀಲ್, ಕಳ್ಳಭಟ್ಟಿ ಡೀಲ್[...] ತೊಡಗಿಕೊಳ್ಳುತ್ತಾನೆ. ಆದರೆ ಇದ್ದಕ್ಕಿದ್ದಂತೆ 12.5.20[...] ರ ಮುಂಜಾನೆ ಕಂಕನಾಡಿಯ ರೈಲು ನಿಲ್ದಾಣದ ಎದು[...] ನಿರ್ಜನ ಬಯಲಿನ ಪೊದೆಯೊಂದರಲ್ಲಿ ಹೆಣ[...] ಕಾಣಿಸುತ್ತಾನೆ!

ಪಾಂಡು ಫಿನಿಷ್ ಮಾಡಿದ ಬಿಜ್ಜೈ ರಾ[...]

ಪಾಂಡುನ ತಲೆ ತೆಗೆಯಲು ಸ್ಥಳೀಯ [...] ವಾಮಂಜೂರು ರೋಹಿ, ಡಾನ್ ದಾವೂದ್ ಇಬ್ರಾ[...] ಹೊಂಚು ಹಾಕಿ ಕುಳಿತಿದ್ದರೇನೋ ನಿಜ. ಆ[...] ಇವರ್ಯಾರಿಗೂ ಈ ಪಾಂಡು ಸಿಗದೆ ಓಡಾಡುತ್ತಿದ್ದ. [...] ತನ್ನನ್ನು ಕಂಡ-ಕಂಡವರ ಮುಂದೆ ನಿಕೃಷ್ಟ[...] ಮೂದಲಿಸುತ್ತಿದ್ದ ಪಾಂಡುನನ್ನು ಮುಗಿಸಲು ವಿಕ್ಕಿ [...] ವ್ಯವಸ್ಥಿತ ಸ್ಕೆಚ್ ಹಾಕಿಕೊಂಡಿದ್ದ. ಹತ್ಯಾಕಾರ್ಯಾಚರ[...] ಪಕ್ಕಾ ಪ್ಲಾನ್ ಹಾಕುವುದರಲ್ಲಿ ನಿಸ್ಸೀಮನಾದ [...] ಪಡೆಯಿಂದ ಮಾತ್ರ ಪಾಂಡುಗೆ ತಪ್ಪಿಸಿಕೊಳ್ಳಲಾಗಲಿ[...]

ಸುಪಾರಿ ಕೊಲೆಗಡುಕ!

ನಟೋರಿಯಸ್ ಪಾತಕಿ ರವಿ ಪೂಜಾರಿಯ ಹಂತಕ ಪಡೆಗೆ ನಡುಬೀದಿಯಲ್ಲೇ ಆಹುತಿಯಾಗಿ ಈಗ 'ಸುದ್ದಿ'ಯಾಗಿರುವ ಪಾಪಿ ಬಿಜ್ಜೈ ರಾಜಾ ಪಾತಕಲೋಕಕ್ಕೆ ಎಂಟ್ರಿ ಕೊಟ್ಟಿದ್ದು 1990 ರ ದಶಕದಾರಂಭದಲ್ಲಿ. ಈತನಿಗೆ ರೌಡಿಸಂ ದೀಕ್ಷೆ ಕೊಟ್ಟವನು ಒಂದು ಕಾಲದಲ್ಲಿ ಮಂಗಳೂರು ಭೂಗತ ಲೋಕದ ಕಿಂಗ್‌ಪಿನ್ ಆಗಿದ್ದ ಪಾಂಡು ಪೈ. ಪಾಂಡು ಮತ್ತು ಬಿಜ್ಜೈ ರಾಜಾ ಅನ್ಯೋನ್ಯ ಗುರು-ಶಿಷ್ಯರಂತಿದ್ದರು. ಪಾಂಡುನ ಸ್ಕೆಚ್ ನಿರ್ದೇಶನದಲ್ಲಿ ರಾಜಾ ಅನೇಕ ಸುಲಿಗೆ-ಧಮಕಿ-ಹಫ್ತಾ-ಲ್ಯಾಂಡ್ ಡೀಲ್- ಬಡ್ಡಿ ಡೀಲ್-ಕಳ್ಳ ಭಟ್ಟಿ ದಂಧೆ ನಿರಾತಂಕ-ನಿರಂತರವಾಗಿ ನಡೆಸಿದ್ದ.

ರಾಜಾನ ಹೆಸರು ಮಂಗಳೂರಿನ ಪಾತಕ ಪ್ರಪಂಚದಲ್ಲಿ ಮೊಟ್ಟ ಮೊದಲು ಗುರುತಿಸಲ್ಪಟ್ಟಿದ್ದು 2007 ರಲ್ಲಿ. ಆಗಾತ ಅನಿಲ್ ಎಂಬ ಕಳ್ಳ ಭಟ್ಟಿ ದಂಧೆದಾರನಿಂದ ಸುಪಾರಿ ಪಡೆದು ಕ್ರಿಶ್ಚಿಯನ್ ಸಮುದಾಯದ ರಾಜೇಶ್‌ನನ್ನು ಮರ್ಡರ್ ಮಾಡಿದ್ದ. ದುಬೈನಲ್ಲಿದ್ದ ರಾಜೇಶ್ ಮತ್ತು ಅನಿಲ್ ಅಲ್ಲಿ ಕಳ್ಳಭಟ್ಟಿ ವ್ಯಾಪಾರ ಮಾಡುತ್ತಿದ್ದರು. ಕುಕ್ಕರಿನಲ್ಲಿ ಹೆಂಡ ಭಟ್ಟಿ ಇಳಿಸಿ ಮಾರ್ಕೆಟ್ ಮಾಡುವ ರಿಸ್ಕಿ ವ್ಯಾಪಾರ ಇವರು ಅಲ್ಲಿ ನಡೆಸಿದ್ದರು. ಇದು ದೊಡ್ಡ ಮೊತ್ತದ ದುಡ್ಡು ತಂದು ಕೊಡುತ್ತಿತ್ತು. ಪಾಲುದಾರಿಕೆಯಲ್ಲಿ ವೈಮನಸ್ಸು ಮೂಡಿ ಅನಿಲ್ ಮತ್ತು ರಾಜೇಶ್ ಪ್ರತ್ಯೇಕ ದಂಧೆ ಶುರು ಮಾಡಿದ್ದರು.

ಈ ಜಗಳದಲ್ಲಿ ರಾಜೇಶನ ತಲೆ ತೆಗೆಯುವ ಮಟ್ಟಕ್ಕೆ ಸಿಟ್ಟು ರಾಜೇಶನಿಗೆ ಬಂದಿತ್ತು. ಮಂಗಳೂರಿಗೆ ಬಂದಿದ್ದ ರಾಜೇಶನ ಕೊಲೆಗೆ ಆತ ಬಿಜ್ಜೈ ರಾಜಾನಿಗೆ ಸುಪಾರಿ ಕೊಟ್ಟಿದ್ದ. ರಾಜಾ ವಾಹನ ಆಕ್ಸಿಡೆಂಟ್‌ನಲ್ಲಿ ರಾಜೇಶ್ ಸತ್ತಂತೆ ಬಿಂಬಿಸುವ ಕೊಲೆಗೆ ಸ್ಕೆಚ್ ಹಾಕಿದ್ದ. ನ್ಯೂಬಿಜ್ಜೈ ರೋಡಿನಲ್ಲಿ ರಾಜಾ, ಮದನ್, ಸಚಿನ್ ಮತ್ತಿತರ ಗುಂಪು ರಾಜೇಶನ ಮೇಲೆ ವಾಹನ ಹರಿಸಿ ನಂತರ ಮರದ ತುಂಡಿನಿಂದ ಬಡಿದು ಕೊಂದಿದ್ದರು. ಆನಂತರ 2009 ರಲ್ಲಿ ತನ್ನ ಗುರುವನ್ನೇ ಈತ ಹಣದ ಆಸೆಯಿಂದ ಕೊಂದು ಹಾಕಿದ್ದ. ಈ ಎರಡೂ ಕೇಸಲ್ಲಿ ಕಾನೂನಿನ ಕುಣಿಕೆಯಿಂದ ಬಚಾವಾಗಿದ್ದ ಬಿಜ್ಜೈ ರಾಜಾ ಡ್ರಗ್ ದೊರೆ ವಿಕ್ಕಿ ಶೆಟ್ಟಿಯ ಕೃಪಾಶ್ರಯದಲ್ಲಿದ್ದ. ಈಚೆಗೆ ಭೂಗತ ಲೋಕದಿಂದ ಹೊರಬಂದಿದ್ದರೂ ಹಿಂದಿನ ಪಾಪ ಈಗಾತನನ್ನು ನುಂಗಿಹಾಕಿದೆ!

ವಿಕ್ಕಿ ಶೆಟ್ಟಿ ವೈರಿ ಪಾಂಡುನ ಫಿನಿಶ್‌ಗೆ ಆತನ ಶಿಷ್ಯನೆನಿಸಿದ್ದ ಬಿಜೈ ರಾಜಾನನ್ನೇ ಅಸ್ತ್ರವಾಗಿಸಿಕೊಂಡಿದ್ದ. ...ನ್ನ ವಿನರಾಜ್ ಕ್ಲಬ್‌ಗೆ ಆಗಾಗ ಬರುತ್ತಿದ್ದ ಬಿಜೈ ರಾಜಾಗೇ ...ತನ ಗುರುವಿನ ಕೊಲೆಗೆ ಸುಪಾರಿ ವಿಕ್ಕಿ ಶೆಟ್ಟಿ ಕೊಡುತ್ತಾನೆ. ...ರಪ್ಪನ ಅಗ್ರಹಾರ ಜೈಲಲ್ಲಿದ್ದ ಮಂಗಳೂರು ಪಾಪಂ ...ಧ್ಯಕ್ಷನಾಗಿದ್ದ ಜಬ್ಬಾರನ ಹಂತಕರ ಭೇಟಿ ಮಾಡಿಸುವ ...ಪದಲ್ಲಿ ಬಿಜೈ ರಾಜಾ ಪಾಂಡುನನ್ನು ತವೇರಾ ಕಾರಲ್ಲಿ ...ಕರೆದೊಯ್ಯುತ್ತಾನೆ. ರಾಜಾನ ಸಂಗಡ ರೋಹಿತ್ ಪೂಜಾರಿ, ...ಜೇಶ್ ಶೆಟ್ಟಿ, ಉಡುಪಿಯ ಯುವರಾಜ್, ಯಶೋಧರ ...ಬ ಪಾತಕಿಗಳಿರುತ್ತಾರೆ. ವಿಪರೀತ ಹೆಂಡ ಕುಡಿಯುವ ...ಟವಿದ್ದ ಪಾಂಡುಗೆ ರಾಜಾ ಗ್ಯಾಂಗ್ ಸಕಲೇಶಪುರದಲ್ಲಿ ...ಕಂಠಮಟ್ಟ ಕುಡಿಸುತ್ತಾರೆ. ಕುಡಿಕುಡಿದು ಚಿತ್ತಾದ ಪಾಂಡುವನ್ನೂ ತವೇರಾದಲ್ಲೇ ಕುತ್ತಿಗೆ ಬಿಗಿದು ಮಟಾಷ್ ಮಾಡುತ್ತಾರೆ. ಹೆಣ ತಂದು ಮಂಗಳೂರಿನ ರೈಲು ...ಲ್ದಾಣದ ಎದುರಿನ ಮೈದಾನದ ಪೊದೆಯೊಂದರಲ್ಲಿ ...ಸೆಯುತ್ತಾರೆ.

ರವಿ ಪೂಜಾರಿ ಬೇಟೆ

ಪಾಂಡು ಫಿನಿಶ್‌ನಿಂದ ಆತನಿಂದ ಅವಮಾನಿತನಾಗಿ ...ಸುಗುಡುತ್ತಿದ್ದ ಡ್ರಗ್ ಡಾನ್ ವಿಕ್ಕಿ ಶೆಟ್ಟಿಯ ಮುಯ್ಯಿ ...ರುತ್ತದೆ; ಆದರೆ ಮತ್ತೊಬ್ಬ ರೌಡಿ ದೊರೆ ರವಿ ...ಜಾರಿಯ ಸೇಡು ಹೆಡೆಯೆತ್ತುತ್ತದೆ! ಮಂಗಳೂರಲ್ಲಿ ...ನ್ನ ಹೆಸರು ಬಳಸಿ ಭೂಗತ ವಸೂಲಿ-ಹಫ್ತಾ ...ಮೂಚಾನವಾಗಿ ನಡೆಸುತ್ತಿದ್ದ ನಂಬಿಗಸ್ಥ ಬಂಟ ಪಾಂಡು ಕೊಲೆಯಿಂದ ರವಿ ಪೂಜಾರಿ ಕನಲಿ ಹೋಗುತ್ತಾನೆ. ...ಗಂತ ರವಿ ಪೂಜಾರಿ ಮತ್ತು ವಿಕ್ಕಿ ಶೆಟ್ಟಿ ನಡುವೆ ...ರತ್ವವೇನೂ ಇಲ್ಲ. ಆದರೆ ಪಾಂಡುನನ್ನು ಕೊಂದವ ...ಉರುಳಿಸುವ ಹಠಕ್ಕೆ ಬೀಳುತ್ತಾನೆ ರವಿ ಪೂಜಾರಿ.

ರವಿ ಪೂಜಾರಿ ಗ್ಯಾಂಗಿನ ಗುರಿ ಪಾಂಡುನನ್ನು ಕೊಂದ ...ಜೈ ರಾಜ ಒಬ್ಬನೇ ಆಗಿತ್ತು! ಸ್ಥಳೀಯ ರೌಡಿ ಕಲಿ ...ಯೋಗೀಶ್‌ನನ್ನು ರಾಜಾನ ಹತ್ಯೆಗೆ ರವಿ ಪೂಜಾರಿ ...ಯೋಜಿಸಿದ್ದ. ಆತನಿಗೆ ಸುಪಾರಿ ಕೊಟ್ಟಿದ್ದ ರವಿ ಪೂಜಾರಿ ...ಬಂಟ ಪಾಂಡುವನ್ನು ಕೊಂದಂತೆಯೇ ರಾಜಾನನ್ನು ...ಚ್ಚಿನಿಂದಲೇ ಕೊಚ್ಚಿ-ಕೊಚ್ಚಿ ಕೊಲ್ಲುವಂತೆ ನಿರ್ದೇಶನ ...ಡಿದ್ದ. ಕಳೆದ ಡಿಸೆಂಬರ್ 1 ರ ರಾತ್ರಿ 10 ಗಂಟೆ ...ಮಾರು ಪಳ್ನೀರ್‌ನ ಡ್ಯಾನಿಶ್ ಹೊಟೇಲ್ ಬಳಿ ರಾಜಾ ...ರುವುದು ಕಲಿ ಯೋಗೀಶ್ ಪಡೆ ಗೊತ್ತು ...ಮಾಡಿಕೊಂಡಿತ್ತು. ರಾಜಾ ಕಾಯಿನ್ ಬಾಕ್ಸ್‌ನಿಂದ ...ರಿಗೋ ಫೋನಾಯಿಸಲು ರಿಸೀವರ್ ಹಿಡಿದುಕೊಂಡು ...ನಿಲ್ಲುತ್ತಿದ್ದಂತೆಯೇ ವ್ಯಾಗನ್ ಆರ್‌ನಲ್ಲಿ ಬಂದ ನಾಲ್ವರು ...ಆಗಂತುಕರು ರಾಜಾನ ಮೇಲೆ ಮುಗಿಬೀಳುತ್ತಾರೆ. ...ರಿವಾಲ್ವರ್ ಬಳಸದೆ ಪಾಂಡುನ ಕೊಂದಂತೆಯೇ ...ಮಚ್ಚಿನಿಂದಲೇ ರಾಜಾನನ್ನು ಹೊಡೆದುರುಳಿಸುತ್ತಾರೆ. ರಕ್ತದ ...ಮಡುವಿನಲ್ಲಿ ಬಿದ್ದ ಸೈಂಧವನಂಥ ರಾಜಾ ಒದ್ದಾಡಿ ...ಸಾಯುತ್ತಾನೆ. ಅಲ್ಲಿಗೆ ಡಾನ್ ರವಿ ಪೂಜಾರಿಯ ಅತೃಪ್ತ ...ಆತ್ಮಕ್ಕೆ ಶಾಂತಿ ಸಿಗುತ್ತದೆ!!

...ತೀಕಾರದ ಹೊಣೆ ಹೆಬ್ಬೆಟ್ಟು ಮಂಜನಿಗೆ

ತೊಕ್ಕೊಟ್ಟು ರಾಜೇಶ್ ಮತ್ತು ಪಾಂಡು ಪೈನ ಹತ್ಯೆ ...ಮಾಡಿದನಂತರ ಬಿಜೈ ರಾಜಾ ಪಾಪ ಪ್ರಜ್ಞೆಯಿಂದ ...ಕುಗ್ಗಿಹೋಗಿದ್ದ. ಆತ ಪಾತಕಲೋಕದ ಸಹವಾಸ ಬಿಟ್ಟು ...ಸ್ಟಿ ವ್ಯವಹಾರದಲ್ಲಿ ನಿರತನಾಗಿದ್ದ. ಆದರೂ ಆತನಿಗೆ ...ನನ್ನು ಮುಗಿಸಲು ರವಿ ಪೂಜಾರಿ ಪಡೆ ಸಮಯ ...ಕಾಯುತ್ತಿದೆ ಎಂಬುದು ಖಾತ್ರಿಯಾಗಿತ್ತು. ಹಾಗಾಗಿ ತುಂಬ ...ಎಚ್ಚರಿಕೆಯಾಗಿ ಬೆಂಗಳೂರು-ಮಂಗಳೂರು ನಡುವೆ ...ಓಡಾಡಿಕೊಂಡಿದ್ದ. ವಯಸ್ಸೂ ನಲ್ವತ್ತು ದಾಟಿದ್ದರಿಂದ ...ರೌಡಿಗಿರಿ ಬೇಡಾಗಿತ್ತು ರಾಜಾನಿಗೆ. ಆದರೆ ಸೇಡು ಸಾವಾಗಿ ...ನನ್ನು ಕಾಡಿತ್ತು.

ಈ ಭೂಗತ ಯುದ್ಧ ನೇರಾನೇರ ರವಿ ಪೂಜಾರಿ ...ಮತ್ತು ವಿಕ್ಕಿ ಶೆಟ್ಟಿಯ ಗ್ಯಾಂಗ್ ನಡುವೆ ನಡೆಯುತ್ತಿದೆ. ...ಸಹಚರ ಬಿಜೈ ರಾಜಾನನ್ನು ಕೊಲ್ಲಿಸಿದ ರವಿ ಪೂಜಾರಿ ...ಮೇಲೆ ವಿಕ್ಕಿ ಶೆಟ್ಟಿಗೆ ಸಿಟ್ಟು ಬಂದಿದೆ. ಆತ ರಾಜಾನ ...ಕೊಂದವರ ತಲಾಶ್‌ಗೆ ಹೆಬ್ಬೆಟ್ಟು ಮಂಜನನ್ನು ...ನಿಯೋಜಿಸಿದ್ದಾನಂತೆ. ಆತನಿಗೆ ಮಂಗಳೂರು-ಕರಾವಳಿ ...ಯ ಭೂಗತ ಹುಡುಗರನ್ನು ರಾಜಾನ ಕೊಂದವರ ...ಖತಂ ಮಾಡಲು ಛೂಬಿಡುವ ಮನಸ್ಸಿಲ್ಲವಂತೆ. ...ದರಿಂದ ಮಂಗಳೂರಲ್ಲಿ ಮತ್ತೆ ತನ್ನಿಂದ ರೌಡಿಗಿರಿ-...ಗ್ಯಾಂಗ್‌ವಾರ್ ಶುರುವಾಯಿತೆಂಬ ಅಭಿಪ್ರಾಯ ...ಮೂಡುವುದು ಆತನಿಗೆ ಬೇಡವಂತೆ.

ಹಾಗಾಗಿ ಹೆಬ್ಬೆಟ್ಟು ಮಂಜನಿಗೆ ವಿಕ್ಕಿ ಶೆಟ್ಟಿ ಸುಪಾರಿ ...ಕೊಟ್ಟಿದ್ದಾನೆಂದು ಮಂಗಳೂರಿನ ಪೊಲೀಸ್-ಪಾತಕ ...ವಲಯಗಳೆರಡೂ ಪಿಸುಗುಡುತ್ತಿವೆ. ಹೆಬ್ಬೆಟ್ಟು ಕಡೆಯವರು ...ಈಗಾಗಲೇ ತಮ್ಮ ಕಾರ್ಯಾಚರಣೆ ಶುರು ...ಮಾಡಿಕೊಂಡಿದ್ದಾರಂತೆ. ರವಿ ಪೂಜಾರಿಯ ಶಿಷ್ಯರನ್ನು ...ಹುಡುಕುತ್ತಿದ್ದಾರೆ. ಅಲ್ಲಿಗೆ ಮಂಗಳೂರಲ್ಲಿ ಮತ್ತೊಂದು ...ಕೋಲಾಹಲ ಆಗೋದು ಗ್ಯಾರಂಟಿಯಾಗಿದೆ. ತಲೆ ...ಕೆಡಿಸಿಕೊಂಡಿರುವ ಪೊಲೀಸರು ತಿಪ್ಪರಲಾಗ ಹಾಕುತ್ತಿದ್ದಾರೆ. ...ಮತ್ತೆ ಮಂಗಳೂರಲ್ಲಿ ರೌಡಿ ಗ್ಯಾಂಗ್‌ವಾರ್ ಶುರುವಾಯ್ತಾ? ...ಎಂಬುದೊಂದು ಭಯದ ಪ್ರಶ್ನೆ ಮಂಗಳೂರಿಗರನ್ನು ...ಕಾಡುತ್ತಿದೆ!

■ ನಹುಷ

ಅವತ್ತಿನ ಬಸವಣ್ಣನಂಗೆ ಇವತ್ತಿನ ಎಡೂರಪ್ಪ ಕಂಡ್ರಿ

ಥೂತ್ತೇರಿ

■ ಯಾಹೂ

ಬಿಜೆಪಿಯಿಂದ ಸಿಡಿದು ಕೆಜೆಪಿ ಮಾಡಿಕೊಂಡು ಪುರೋಹಿತರ ಪಾರ್ಟಿಯ ಹುಟ್ಟಡಗಿಸಲು ಪಣತೊಟ್ಟಿರುವ ಎಡಿಯೂರಪ್ಪನವರನ್ನು ಮಾತನಾಡಿಸಿ ಉತ್ತೇಜಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ನಾನಿರುವುದೆ ನಿಮಗಾಗಿ, ನಾಡಿರುವುದೆ ನಮಗಾಗೀ...."

"ಹಲೋ ಯಾರು?"

"ನಾನು ಸಾರ್ ಯಾಹೂ."

"ಏನೇಳಿ ಯಾಹೂ."


"ಎಲ್ಲಿದ್ದಿರಿ ಸಾರ್?"

"ಹಾವೇರಿಲಿದ್ದಿನಿ."

"ಹಾವೇರಿಯಿಂದ ಪ್ರಾರಂಭವಾಗೊ ಕೆ.ಜೆ.ಪಿ.ಗೆ ಒಳ್ಳೆದಾಗ್ಲಿ ಸಾರ್."

"ನಿಮ್ಮಂತ ಪತ್ರಕರ್ತರ ಸಹಕಾರ ಇದ್ರೆ ಕೆ.ಜೆ.ಪಿ. ಮುಂದಿನ ಚುನಾವಣೇಲಿ ಎಲ್ಲಾ ಇನ್ನೂರ ಇಪ್ಪತ್ತನಾಲ್ಕು ಕ್ಷೇತ್ರಗಳಲ್ಲಿ ಗೆಲ್ಲುತ್ತೆ."

"ಇದೇನು ಸಾರ್ ಹಿಂಗಂತಿರಿ. ವಿರೋಧ ಪಕ್ಷನೂ ಅಷ್ಟಿಷ್ಟು ಗೆಲ್ಲದು ಬೇಡವೆ?"



"ಅವರೂ ಗೆಲ್ಲಲಿ. ಯಾರು ಬೇಡ ಅಂದೋರು. ಆದ್ರೆ ಒಳ್ಳೆ ಜನ ಆರಿಸಿ ಬರಬೇಕು. ನಾನು ಮುಂದೆ ಕಟ್ಟೊ ಮಾದರಿ ಕರ್ನಾಟಕಕ್ಕೆ ಸಹಕಾರ ಕೊಡಬೇಕು."

"ನೀವು ಮುಂದೆ ಮಾದರಿ ಕರ್ನಾಟಕ ಕಟ್ಟೊದಾದ್ರೆ ಈ ಮೂರೂವರೆ ವರ್ಷ ಕಟ್ಟಿದ್ದು ಯಾವ ತರದ ಕರ್ನಾಟಕ ಅಂತಾರಲ್ಲಾ ಸಾರ್?"

"ಮೂರೂವರೆ ವರ್ಷದ್ದು ಬುನಾದಿ ಕಂಡ್ರಿ. ಮುಂದೆ ಯಾವ ತರ ಕಟ್ತಿನಿ ಅನ್ನದ ನೋಡ್ತಾಯಿರಿ."

"ಏನೇ ಆಗ್ಲಿ ನೀವು ಬಿಜೆಪಿ ಬಿಡಬಾರದಿತ್ತು ಸಾರ್."

"ಬಿ.ಜೆ.ಪಿ. ಬಿಡಬಾರದಿತ್ತು ಅಂದ್ರೆ ಸ್ವಾಭಿಮಾನ ಕಳಕೊಂಡು ಇರಕ್ಕಾಗ್ತೇನ್ರಿ? ಆ ಅನಂತಕುಮಾರ, ಈಶ್ವರಪ್ಪ ಅಡ್ವಾನಿಗೆ ಚಾಡಿ ಹೇಳಿ, ಅಡ್ವಾನಿ ನನ್ನ ಹೆಸರು ಲೋಕಾಯುಕ್ತದ ವರದಿಲಿ ಬರೋತರ ಮಾಡಿ, ಷಡ್ಯಂತ್ರ ಮಾಡಿ, ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿದ್ರು. ಅದು ಯಾವ ಕಂಡೀಷನ್ ಮೇಲೆ? ಮುಖ್ಯಮಂತ್ರಿ ಪದವಿ ಬಿಟ್ಟ ಇಪ್ಪತ್ತನಾಲ್ಕು ಗಂಟೆಲಿ ಪಾರ್ಟಿ ಪ್ರೆಸಿಡೆಂಟ್ ಮಾಡ್ತಿವಿ ಅಂದ್ರು. ಅದ್ನೂ ಮಾಡಲಿಲ್ಲ. ನಾನು ಜೈಲಿನಲ್ಲಿದ್ದಾಗ ಅಡ್ವಾನಿ ಕರದು ಸಭೆ ಮಾಡಿದ್ರು. ಆ ಅಡ್ವಾನಿ ಜೈಲಿಗೆ ಬಂದು ಸಾಂತ್ವನ ಹೇಳಲಿಲ್ಲ. ಇಷ್ಟಾದ್ರು ಎಲ್ಲಾ ಅವಮಾನ ಸಹಿಸಿಕೊಂಡೆ."

"ಸಾರ್, ಅಡ್ವಾನಿ ಜೈಲಿಗೆ ಬಂದು ಸಮಾಧಾನ ಮಾಡಬೇಕಾದ್ರೆ ಜೈಲಿಗೋದ ಕಾರಣ ಮುಖ್ಯ ಆಗ್ತಲ್ಲವ ಸಾರ್?"

"ನನ್ನ ಮೇಲಿನ ಸುಳ್ಳು ಆರೋಪದಿಂದ ಜೈಲಿಗೋದೆ ಕಂಡ್ರಿ. ನಾನೇನು ಮರ್‌ಡರ್ ಮಾಡಿಸಿದ್ನ? ಅಥವಾ ರೇಪ್ ಮಾಡಿದ್ನ? ಇಲ್ಲ ಕಳ್ತನ ಮಾಡಿದ್ನ?"

"ಅದ್ಯಾವುದ್ನೂ ಮಾಡಿರಲಿಲ್ಲ ಸಾರ್. ಆದ್ರೆ ಗಣಿ ಲೂಟಿ, ಅಕ್ರಮ ಡಿನೋಟಿಫಿಕೇಷನ್ ಮತ್ತು ಕಿಕ್‌ಬ್ಯಾಕ್ ಹಣನ ಚೆಕ್ ರೂಪದಲ್ಲಿ ಪಡೆದ ಕಾರಣಗಳೆಲ್ಲಾ ಸೇರಿ ಜೈಲುಪಾಲಾದ್ರಲ್ಲವ ಸಾರ್?"

"ರೀ ಯಾಹು, ನನಗೆ ರೇಗಿಸಬೇಡಿ. ನೀವು ಹೇಳಿದ ಕೆಲಸನೆಲ್ಲಾ ಹಿಂದಿದ್ದ ಮುಖ್ಯಮಂತ್ರಿ, ಅವರಿಂದಿದ್ದ ಮುಖ್ಯಮಂತ್ರಿನೂ ಮಾಡಿದ್ರು ಕಂಡ್ರಿ."

"ನಿಜ ಸಾರ್, ಎಸ್ಸೆಂ ಕೃಷ್ಣ ಮುಖ್ಯಮಂತ್ರಿಯಾದಾಗ ಆತನ ಅಳಿಯನ ಕಾಫಿತೋಟ ಆರುನೂರು ಎಕರೆ ಇತ್ತಂತೆ. ಕೃಷ್ಣ ಅಧಿಕಾರ ಬಿಟ್ಟಾಗ ಹದಿನಾರು ಸಾವಿರ ಎಕರೆಗಳಷ್ಟು ವಿಸ್ತಾರ ಆಯ್ತಂತೆ. ಅದು ಯಾರಿಗೂ ಗೊತ್ತಾಗಲಿಲ್ಲ. ಹಾಗೆ ಧರಂಸಿಂಗ್ ಅನ್ನೊ ತೆಗ್ಗಾದ ಪ್ರತಾಪಗಳೂ ಗೊತ್ತಾಗಲಿಲ್ಲ. ಇನ್ನ ನೀವೇ ಮುಖ್ಯಮಂತ್ರಿ ಮಾಡಿದ ಕುಮಾರಸ್ವಾಮಿದು ಅಕ್ರಮ ಡಿನೋಟಿಫಿಕೇಶನ್, ಗಣಿ ಲಂಚ ಅಲ್ಲದೆ, ಆತನ ಅಣ್ಣಂದಿರ ಆಸ್ತಿ ಚಾಮುಂಡಿಬೆಟ್ಟದಷ್ಟು ಬೆಳಿತಂತೆ. ಆದ್ರೆ ಅವರಷ್ಟೇ ಆಸ್ತಿ ಮಾಡಿದ ನೀವು ಜೈಲಿಗೋದ್ರಿ. ಅದು ನಿಮ್ಮವರ ಚಿತಾವಣೆಯಿಂದ."

"ಹೌದು ಕಂಡ್ರಿ. ಆ ಈಶ್ವರಪ್ಪ ಎಂತ ಮಾತಂತನೆ. 'ಇನ್ಯಾರೆ ಆಗಿದ್ರು ಆತ್ಮಹತ್ಯೆ ಮಾಡಿಕೊತಿದ್ರು. ಪಾಪ ಎಡೂರಪ್ಪ ಇನ್ನು ಇದ್ದಾರೆ' ಅಂತನಲ್ರೀ."

"ಅವುನೇನೊ ಎದುರಿಗೆ ಸಿಕ್ಕಿದಾಗ ನೀವು ಕೆನ್ನೆಗೆ ಹೊಡಿಯಕ್ಕೆ ಕಾಯ್ತಿದ್ರಂತೆ, ನಿಜವ ಸಾರ್?"

"ಅದಕ್ಕೇ ನಾನು ಅವನನ್ನ ಅವಾಯ್ಡ್ ಮಾಡಿದೆ ಕಂಡ್ರಿ. ನನ್ನ ಬಗ್ಗೆ ಹೇಳ್ತನಲ್ಲ, ಆತ ಆಸ್ತಿ ಮಾಡಿಲ್ಲವಾ? ಅವುನ ಆಸ್ತಿ ಪಟ್ಟಿ ಕೊಡ್ಲ?"

"ಆದ್ರೂ ನಿಮ್ಮಾಸ್ತಿ ಮುಂದೆ ಅವುನದೇನು ಅಲ್ಲ ಸಾರ್. ಈಚೆಗೆ ಶಿವಮೊಗ್ಗಕ್ಕೆ ಹೋಗಿ ನೋಡಿದೆ. ಅದೇನು ರಸ್ತೆ ಮಾಡಿಸಿದ್ದಿರಿ. ಹೊಸ ಬಸ್ಟಾಂಡುಗಳು, ಮಾರ್ಕೆಟ್ಟು, ಪಾರ್ಕು, ಸಿಮೆಂಟು ರಸ್ತೆ, ನಿಜಕ್ಕೂ ಆ ಊರ ನೋಡಂಗೆ ಮಾಡಿದ್ರಿ ಸಾರ್. ನಿಜಕ್ಕೂ ನೀವು ಒಳ್ಳೆ ಕಂಟ್ರಾಕ್ಟು."

"ಅದೇ ತರ ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ಮಾಡೊ ಕನಸಿದೆ ನನಿಗೆ."

"ಮಾಡಿ ಸಾರ್, ಮಾಡಿ. ನನಿಗೊಂದು ಡವುಟು ಸಾರ್. ಈಗ ಶಿವಮೊಗ್ಗದ ಅಭಿವೃದ್ಧಿ ಆದಾಯನ ಸ್ಟಾರ್ ಹೋಟ್ಲು, ಪಿ.ಇ.ಎಸ್. ಕಾಲೇಜು, ಹಾಸ್ಟಲು, ಬೇಕಾದಷ್ಟು ಭೂಮಿ ಮೇಲೆ ತೊಡಗಿಸಿದ್ದಿರಿ. ಅಂದ್ರೆ ಶಿವಮೊಗ್ಗದ ಅಭಿವೃದ್ಧಿ ಕಿಕ್‌ಬ್ಯಾಕ್ ಸ್ಥಳದಲ್ಲೇ ಸಾಕ್ಷಿ ಹೇಳ್ತಾ ಇದೆ. ಮುಂದೆ ಉಳಿದ ಜಿಲ್ಲೆಗಳ ಅಭಿವೃದ್ಧಿ ಆದಾಯ ನೆನೆಸಿಕೊಂಡ್ರೆ ಭಯವಾಗ್ತಾ ಅದಲ್ಲ ಸಾರ್."

"ರೀ, ಆ ಈಶ್ವರಪ್ಪನಂಗೆ ಮಾತಾಡಬೇಡಿ. ಶಿವಮೊಗ್ಗದ ಅಭಿವೃದ್ಧಿ ಮಾಡಬೇಕಾದೋನು ಈಶ್ವರಪ್ಪ. ಆದ್ರೆ ಅವನು ಶಾದೇವರ ಪೂಜೆ, ಶ್ರೀನಿವಾಸ ಕಲ್ಯಾಣ, ಯಜ್ಞ ಹೋಮ ಮಾಡಿಕೊಂಡು ಕಾಲಹಾಕಿದ. ಅದೇ ನಾನು ಶಿಕಾರಿಪುರದ ಜೊತೆಗೆ ಶಿವಮೊಗ್ಗನೂ ಅಭಿವೃದ್ಧಿ ಮಾಡಿ ಒಂದು ಮಾದರಿ ಜಿಲ್ಲೆ ಮಾಡಿರೋದನ್ನ ಜನ ಹೊಗಳತಾಯಿದಾರೆ. ಕಿಕ್‌ಬ್ಯಾಕು ಅಂತಿರಲ್ಲ ಏನ್ರಿ ಅದು?"

"ಸಾರಿ ಸಾರ್. ಕೆಲವೊಂದು ಪದ ಅರ್ಥ ಕಳಕಂಡವೆ. ಮುಂದೆ ನಿಮಗೆ ಒಳ್ಳೆದಾಗ್ಲಿ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಪುರೋಹಿತರ ಅಸ್ಪೃಶ್ಯತೆ, ವಂಚನೆ ನೋಡಕ್ಕಾಗದೆ ಹೊರಬಂದು ಲಿಂಗಾಯತ ಧರ್ಮ ಮಾಡಿದಂಗೆ ನೀವೂ ಬಿಜೆಪಿ ಬಿಟ್ಟು ಕೆ.ಜೆ.ಪಿ. ಮಾಡ್ತಾಯಿದ್ದಿರಿ. ಆದ್ರು ನೀವು, ನಿಮ್ಮ ಜೊತೆಯಿರೊ ಲಿಂಗಾಯಿತ್ರ ನೋಡಿದ್ರೆ ಬಸವಣ್ಣ ಸುಮ್ಮನೆ ಇದ್ದು ಹೋಗಬವುದಿತ್ತು ಅನ್ನುಸ್ತಾ ಅದೆ ಸಾರ್."

"ಯಾಕ್ರಿ ಅಂಗಂತಿರಿ?"

"ಮತ್ತೇನು ಸಾರ್? ಲಿಂಗಾಯಿತ್ರ ನೋಡಿದ್ರೆ ಪುರೋಹಿತಶಾಹಿಗಳು ಬೇಕು, ಇವ್ರುರ ಬೇಡ ಅನ್ನಂಗಾಗ್ಯದೆ. ಮನೆವಳಗಡೆ ಬಸವಣ್ಣನ ಫೋಟೊ ಮಡಿಕಂಡು ಅಸ್ಪೃಶ್ಯತೆ ಆಚರಸ್ತರೆ. ಜಾತಿಯತೆ ಮಾಡ್ತರೆ. ಯಜ್ಞ ಹೋಮಸ್ವಲ್ಲಿ ಮಾಡ್ತರೆ. ಒಟ್ಟಿನಲ್ಲಿ ಪುರೋಹಿತಶಾಹಿಗಳ ಜಾತಿಗೆ ದಾಸರಾಗಿಬಿಟ್ರು ಸಾರ್. ಆ ಕಾರಣಕ್ಕೆ ಬಡವರಾಗಿದ್ದ ಪುರೋಹಿತರು ಕುಬೇರ್ರಾದ್ರು. ಕೆಟ್ಟ ಜನಗಳ ಖಜಾನೆ ಭರ್ತಿ ಮಾಡಿದ್ರಿ ಸಾರ್. ಆದ್ರೆ ನೀವು ಬೀದಿಗೆ ಬಿದ್ರಿ. ಅಲ್ಲವ ಸಾರ್?"

"ನಾನೇನು ಬೀದಿಗೆ ಬಿದ್ದಿಲ್ಲ ಕಂಡ್ರಿ. ಬಿಜೆಪಿ ಮನಿಗೆ ಬೆಂಕಿ ಹಚ್ಚಕ್ಕೆ ಬೀದಿಗೆ ಬಂದಿದ್ದಿನಿ. ನಾನು ಮಾಡಿರೊ ತಪ್ಪನ್ನ ಸರಿಮಾಡ್ತಿನಿ. ಈ ಈಶ್ವರಪ್ಪ, ಅನಂತಕುಮಾರನಿಗೆ ಸರಿಯಾದ ಪಾಠ ಕಲುಸ್ತಿನಿ. ನನ್ನ ಹೋರಾಟ ಯಂಗಿರತದೆ ಅಂತ ನೀವೇ ನೋಡಿ."


"ಅಂಗಿದ್ರೆ ನಿಮ್ಮ ಹೋರಾಟಕ್ಕೆ ನಮ್ಮ ಸಪೋರ್ಟಿದೆ ಸಾರ್. ಆದ್ರೆ ಬಿಜೆಪಿ ಬಿಟ್ಟಿದ್ದಕ್ಕೆ ದುಃಖಪಡತಿನಿ ಅನ್ನಬ್ಯಾಡಿ. ಬಿಟ್ಟ ಪಾರ್ಟಿ ಬಗ್ಗೆ ಯೋಚನೆ ಮಾಡದೆ ಹೊಸ ಪಾರ್ಟಿ ಕಟ್ಟಿ. ನಿಮಗೆ ಮಾದರಿಯಾಗಿ ಬಂಗಾರಪ್ಪ ಬಿಟ್ಟು ಹೋದ ದಾರಿ ಇದೆ."

"ಆ ಬಂಗಾರಪ್ಪನ ದಾರಿ ನಾನ್ಯಾಕೆ ತುಳಿಬೇಕ್ರಿ? ಆತನ ಸ್ಥಿತಿ ಯಾರಿಗೂ ಬರೋದು ಬೇಡಿ. ಸಾಲಸೂಲ ಮಾಡಿ ತೀರಸಕ್ಕಾಗದೆ ಜೆ.ಡಿ.ಎಸ್. ಸೇರಿಕೊಂಡ್ರು. ನನ್ನೆದ್ರಿಗೂ ಸೋತು, ನನ್ನ ಮಗನೆದ್ರಿನೂ ಸೋತು, ದೇವೇಗೌಡನ ಪಾರ್ಟಿಲಿ ತೀರಿಕೊಂಡ್ರು ಪಾಪ. ಆತನ ತಿಥಿ ಮಾಡಿದೋರು ಅವುರೆಯಂತೆ."


"ಯಾಕಂದ್ರೆ ದೇವೇಗೌಡ್ರು ತಿಥಿ ಊಟ ಮಾಡದ್ರಲ್ಲಿ ಎಕ್ಸಪರ್ಟು ಸಾರ್. ಅಳತಾ ಊಟ ಮಾಡೋ ಕಲೆ ಅವುರೊಬ್ಬರಿಗೆ ಸಿದ್ದಿಸಿರೋದು."

"ಆದ್ರೆ ನಮ್ಮ ತಿಥಿ ಊಟ ಮಾಡೊ ಅವಕಾಶ ಕೊಡಲ್ಲ ನಾವು."

"ಥೂತ್ತೇರಿ!!!"



ಕಿಟ್ಟಪ್ಪಗೌಡರ ಬಗ್ಗೆ ಬರೆದು ಕಳುಹಿಸಿ



ಕರ್ನಾಟಕದ ಸಮಾಜವಾದಿ ಚಳವಳಿಯ ನಾಯಕ ಗೋಪಾಲಗೌಡರ ಒಡನಾಡಿ ಹಾಗೂ ಮಲೆನಾಡಿನ ಪ್ರಸಿದ್ಧ ಶಿಕ್ಷಕ ಕಿಟ್ಟಪ್ಪ ಗೌಡರ ಬದುಕು ಹಾಗೂ ಕೊಡುಗೆ ಕುರಿತಂತೆ ಪುಸ್ತಕವೊಂದನ್ನು ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸುತ್ತಿದೆ.

ನಾನು ಈ ಪುಸ್ತಕವನ್ನು ಸಂಯೋಜಿಸುತ್ತಿದ್ದು ಕಿಟ್ಟಪ್ಪಗೌಡರನ್ನು ಹಾಗೂ ಅವರ ಪತ್ನಿ ರುಕ್ಮಿಣಿಯಮ್ಮನವರ-ಬಹುಶಃ ಇವರು ಕರ್ನಾಟಕದ ಪ್ರಥಮ ಚುನಾಯಿತ ಸಮಾಜವಾದಿ ಮಹಿಳೆ- ವ್ಯಕ್ತಿತ್ವ, ಬದುಕನ್ನು ಬಲ್ಲವರು ಲೇಖನ ಬರೆದು ಕಳುಹಿಸಲು ಕೋರಿದೆ. ಡಿಸೆಂಬರ್ 20 ರೊಳಗಾಗಿ ನಿಮ್ಮ ಲೇಖನ ಪತ್ರಿಕೆ ವಿಳಾಸಕ್ಕೆ ತಲುಪಲಿ. ಇ-ಮೇಲ್ ಮೂಲಕ ಕಳುಹಿಸುವುದಾದಲ್ಲಿ bparvateesha@gmail.com ಗೆ ನುಡಿ/ಬರಹದಲ್ಲಿ ಕಳುಹಿಸಬಹುದು.

ಹಾವೇರಿ: ಯಡ್ಡಿ ಸಮಾವೇಶದಲ್ಲಿ ದುಡ್ಡಿನ ದರ್ಬಾರು

ಹಾವೇರಿಯಲ್ಲಿ ಸಮಾವೇಶ ಮಾಡುವ ಮೂಲಕ ಸ್ವಂತ ಪಕ್ಷದ ಮಾಲೀಕನಾಗಲು ಹೊರಟಿರುವ ಮಾಜಿ ಸಿಎಂ ಯಡಿಯೂರಪ್ಪ ಜನ ಸೇರಿಸುವುದೇ ಒಂದು ದೊಡ್ಡ ಸಾಧನೆ ಎಂದುಕೊಂಡಂತಿದೆ. ಆಂಧ್ರದ ತೆಲುಗು ಸಿನಿಮಾದಂತೆ ಸೀನ್ ಕ್ರಿಯೇಟ್ ಮಾಡಿ ಸಮಾವೇಶ ಮುಗಿಯುವುದರೊಳಗೆ ಅಧಿಕಾರಕ್ಕೆ ಬಂದಂತೆ ಫೋರ್ಜಿಸುವ ಮೂಡಿನಲ್ಲಿರುವ ಯಡ್ಡಿ ಈ ಸಮಾವೇಶಕ್ಕೆ ಉರ್ಫ್ ಜಾತ್ರೆಗೆ ಬರೋಬ್ಬರಿ 70 ಕೋಟಿ ಖರ್ಚು ಮಾಡುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ.

ಅನುಕಂಪದಲ್ಲಿ ಆರಿಸಿ ಬಂದು, ಹಸಿರು ಶಾಲು ಹಾಕಿಕೊಂಡು ರೈತರ ಹೆಸರಲ್ಲಿ ವಿಧಾನಸೌಧದ ಮೆಟ್ಟಲ ಮೇಲೆ ಪ್ರಮಾಣವಚನ ಸ್ವೀಕರಿಸಿದ್ದ ಯಡಿಯೂರಪ್ಪ ಮುಖ್ಯಮಂತ್ರಿಯಾಗುತ್ತಲೇ ರಾಜ್ಯದ ರೈತರನ್ನು ಮರೆತುಬಿಟ್ಟರು. ಅಧಿಕಾರ ಸಿಕ್ಕ ನಂತರದ ಒಂದೇ ವಾರದಲ್ಲಿ ಗೊಬ್ಬರ ಕೇಳಿದ ಹಾವೇರಿ ರೈತರ ಮೇಲೆ ಗೋಲಿಬಾರ್ ಮಾಡಿಸಿ ಇಬ್ಬರು ಅನ್ನದಾತರ ಜೀವ ತೆಗೆದರಲ್ಲದೆ, ಹತ್ತಕ್ಕೂ ಹೆಚ್ಚು ಬಡ ರೈತರನ್ನು ಅಂಗವಿಕಲರಾಗಿಸಿದ್ದರು. ಅಂತಹ ಕ್ರೂರಿ ಯಡಿಯೂರಪ್ಪನಿಗೆ ಈಗ ಮತ್ತೆ ಹಾವೇರಿ ನೆನಪಾಗಿದೆ. ಇದು ಹಾವೇರಿ ಜಿಲ್ಲೆಯ ಜನತೆಯ ದುರ್ದೈವವಲ್ಲದೆ ಮತ್ತೇನು..?

ಅಸಲಿಗೆ ಯಡಿಯೂರಪ್ಪ ಹಾವೇರಿಯನ್ನೇ ಸಮಾವೇಶಕ್ಕಾಗಿ ಆಯ್ಕೆ ಮಾಡಿಕೊಂಡಿರುವುದರ ಹಿಂದೆ ರಾಜಕೀಯ ಲೆಕ್ಕಾಚಾರವಿದೆ. ಕಳೆದ ಬಾರಿಯ ಚುನಾವಣೆ ಸಂದರ್ಭದಲ್ಲಿ ಜನತಾ ಪರಿವಾರದಿಂದ ಹೊರಬಂದು ರಾಜಕೀಯ ನೆಲೆಗಾಗಿ ಪರಿತಪಿಸುತ್ತಿದ್ದ ಪುಟಗೋಸಿಗಳಿಗೆ ಬಿಜೆಪಿ ಪಕ್ಷದಿಂದ ಬಿ ಫಾರ್ಮ್ ಕೊಡಿಸಿ ಗೆಲ್ಲಿಸಿಕೊಂಡಿದ್ದರು ಯಡಿಯೂರಪ್ಪ. ಜಿಲ್ಲೆಯ ರಾಜಕಾರಣದ ಹಿರಿಯ ಎನಿಸಿಕೊಂಡಿರುವ ಚನ್ನಬಸಪ್ಪ ಉದಾಸಿ ಮತ್ತವನ ಚೇಲಾಗಳಾದ ಶಿವರಾಜ ಸಜ್ಜನ್, ನೆಹರು ಓಲೇಕಾರ್, ಬ್ಯಾಡಗಿಯ ಸುರೇಶ ಗೌಡ ಮತ್ತು ರಾಣೆಬೆನ್ನೂರಿನ ಜಿ. ಶಿವಣ್ಣ ಬಿಜೆಪಿಯ ಚೆಡ್ಡಿ ತೊಟ್ಟು ಶಾಸಕರಾಗಿದ್ದರು.

ಹಾಗೆಯೇ ಕಳೆದ ಚುನಾವಣೆ ಸಮಯದಲ್ಲಿ ಸಂಯುಕ್ತ ಜನತಾದಳದಿಂದ ಹೊರಬಂದ ಬಸವರಾಜ ಬೊಮ್ಮಾಯಿ ಕೂಡ ಯಡ್ಡಿಯ ಕೃಪೆಯಿಂದ ಬಿಜೆಪಿಯ ಟಿಕೆಟ್ ಪಡೆದು ಶಿಗ್ಗಾಂವಿಯಿಂದ ಗೆದ್ದರು. ಆನಂತರ ಬೊಮ್ಮಾಯಿ ಯಡ್ಡಿಯ ಬಾಲಂಗೋಚಿ ಎಂದೇ ಫೇಮಸ್ ಆಗಿದ್ದು. ಉದಾಸಿ ಮತ್ತು ಬೊಮ್ಮಾಯಿ ತರಹದ ತನ್ನ ಬಾಲಂಗೋಚಿಗಳಿಗೆ ಯಡ್ಡಿ ಫಲವತ್ತಾಗಿ ಆಮದನಿ ತರುವ ಖಾತೆಗಳನ್ನು ನೀಡಿದ್ದರು. ಈಗ ಅವರೆಲ್ಲ ಮಂತ್ರಿಗಳಾಗಿ ಗಳಿಸಿದ ಹಣದಲ್ಲಿ ಒಂದಷ್ಟು ಭಾಗವನ್ನು ಕೆಜೆಪಿ ಪಕ್ಷದ ಸಮಾವೇಶಕ್ಕೆ ಕಕ್ಕಿಸಲು ಸಜ್ಜಾಗಿದ್ದಾರೆ ಯಡ್ಡಿ.

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಶಾಮನೂರು ಶಿವಶಂಕರಪ್ಪನವರ ರಾಜ್ಯಾಧ್ಯಕ್ಷರಾಗುವ ಕನಸು ದಿನಕಳೆದಂತೆ ಕಮರಿ ಹೋಗುತ್ತಿರುವುದರಿಂದ ಅವರು ಕೂಡ ಈ ಸಮಾವೇಶಕ್ಕೆ ತಮ್ಮ ಕೈಲಾದಷ್ಟು ಸಹಾಯ ನೀಡಿದ್ದಾರೆಂದು ಕೆಜೆಪಿಯ ಸದಸ್ಯರೇ ಹೇಳಿಕೊಂಡು ತಿರುಗುತ್ತಿದ್ದಾರೆ. ಮಾತ್ರವಲ್ಲ ಯಡ್ಡಿ ಮತ್ತು ಶಾಮನೂರರ ಮಧ್ಯೆ ಪಕ್ಕಾ ಏಜೆಂಟ್‌ನಂತೆ ಕೆಲಸ ಮಾಡಿದ್ದು ದಾವಣಗೆರೆಯ ಬಿಜೆಪಿ



ಸಂಸದ ಜಿ.ಎಂ.ಸಿದ್ದೇಶ್ವರ ಎಂದೂ ಹೇಳುತ್ತಿದ್ದಾರೆ.

ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಬಳ್ಳಾರಿ ಜಿಲ್ಲೆಯ ಗಡಿ ಭಾಗಗಳಿಂದ ಹಾವೇರಿ ಸಮಾವೇಶಕ್ಕೆ ಜನರನ್ನು ಸಾಗಿಸುವ ಜವಾಬ್ದಾರಿಯನ್ನೂ ಹೊತ್ತಿರುವ ಸಿದೇಶ್ವರ ಈ ನಿಟ್ಟಿನಲ್ಲಿ ಕಳೆದ ಒಂದು ವಾರದಿಂದ ಕೆಲಸ ಶುರು ಹಚ್ಚಿಕೊಂಡಿದ್ದಾರೆ. ಜನರನ್ನು ಕರೆತರಲು ಹಲವಾರು ಕಡೆ 5-10 ಲಕ್ಷ ರೂಪಾಯಿಗಳ ಅಡ್ವಾನ್ಸ್ ಪೇಮೆಂಟನ್ನೂ ಮಾಡಿ ಬಂದಿದ್ದಾರಂತೆ. ಬರಗಾಲದಲ್ಲಿ ಕೈಗೆ ಹಣ ಬಂದಿದ್ದರಿಂದ ಜನ ಕೂಡ ಹಾವೇರಿಗೆ ಹಾಜರಾಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಸಮಾವೇಶದ ಪ್ರಮುಖ ಉಸ್ತುವಾರಿಯನ್ನು ನಿಭಾಯಿಸುತ್ತಿರುವ ಲೋಕೋಪಯೋಗಿ ಸಚಿವ ಸಿ.ಎಂ.ಉದಾಸಿ ಮತ್ತವನ ಮಗ ಶಿವಕುಮಾರ ಉದಾಸಿ ವೇದಿಕೆ, ಪೆಂಡಾಲು ಸೇರಿದಂತೆ ಇನ್ನಿತರೆ ಸವಲತ್ತುಗಳಿಗೆ 15 ಕೋಟಿ ಬಂಡವಾಳ ಹಾಕಲು ಮುಂದಾಗಿದ್ದಾರಂತೆ. ಆ ಹಣವನ್ನು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳಿಂದ ವಸೂಲಿ ಮಾಡಲಾಗಿದೆಯಂತೆ. ಇದರ ಜೊತೆಜೊತೆಗೆ ಮರಿ ಉದಾಸಿ ರಾತ್ರಿ ಹೊತ್ತಿನಲ್ಲಿ ಹಾನಗಲ್, ಶಿರಹಟ್ಟಿ, ಮುಂಡರಗಿ, ಹಾವೇರಿ ತಾಲೂಕಿನ ಹಳ್ಳಿಗಳನ್ನು ಸುತ್ತುತ್ತ ಎಲ್ಲೆಡೆ ಮೀಟಿಂಗ್ ಮಾಡಿ ಪೇಮೆಂಟ್ ಫಿಕ್ಸ್ ಮಾಡಿದ್ದಾರಂತೆ. ಉಳಿದಂತೆ ಬಿಜೆಪಿಲ್ಲಿಯೇ ಇದ್ದುಕೊಂಡೇ ಕೆಜೆಪಿ ಪಕ್ಷದ ಅಡ್ವಾನ್ಸ್ ವಕ್ತಾರನಂತೆ ಬಾಯಿ ಬಡಿದುಕೊಳ್ಳುತ್ತಿರುವ ನೆಹರು ಓಲೇಕಾರ ಮತ್ತು ಶಿವರಾಜ ಸಜ್ಜನ ತಮ್ಮ ಕೈಯಿಂದ ಈ ಸಮಾವೇಶಕ್ಕೆ ಅಲ್ಪಸ್ವಲ್ಪ ಹಣ ಹಾಕಿದರೂ ತಾವೇ ಇದನ್ನು ನಡೆಸುತ್ತಿರುವವರಂತೆ ಪೋಸು ಕೊಡುತ್ತಾ ತಿರುಗಾಡುತ್ತಿದ್ದಾರೆ. ಇದೆಲ್ಲದರ ಮಧ್ಯೆ ಯಡ್ಡಿಯ ಸುಪುತ್ರ ಸಂಸದ ಬಿ.ವೈ.ರಾಘವೇಂದ್ರ ಸಮಾವೇಶದ ಸಂಪೂರ್ಣ ಉಸ್ತುವಾರಿ ವಹಿಸಿಕೊಂಡಿದ್ದಾರೆ.

12 ಕೋಟಿ ರೂ. ಶಾಮಿಯಾನ


ಹಾವೇರಿ ನಗರದ ಜಿಹೆಚ್ ಕಾಲೇಜು ಮೈದಾನದಲ್ಲಿ ಕೆಜೆಪಿ ಸಮಾವೇಶಕ್ಕೆಂದು ಹಾಕಲಾಗುತ್ತಿರುವ ಶಾಮಿಯಾನಕ್ಕೆ ಬರೋಬ್ಬರಿ 12 ಕೋಟಿ ರೂಪಾಯಿಯಂತೆ. ಕಾಲೇಜಿನ ಮೈದಾನದಲ್ಲಿ 420 ಅಡಿ ಅಗಲ ಮತ್ತು 800 ಅಡಿ ಉದ್ದದ ಪೆಂಡಾಲ್ ನಿರ್ಮಾಣವನ್ನು ಹುಬ್ಬಳ್ಳಿಯ ಶಾಮಿಯಾನ ಸಪ್ಲೈಯರ್ಸ್‌ಗೆ ವಹಿಸಲಾಗಿದೆ. ಈಗಾಗಲೇ ವೇದಿಕೆ ನಿರ್ಮಾಣಕ್ಕೆ 30 ಅಡಿ ಎತ್ತರದ ವಾಟರ್‌ಪ್ರೂಫ್ ಪೆಂಡಾಲ್ ತಲೆಯೆತ್ತಿದ್ದು, 140 ಅಡಿ ಅಗಲ ಮತ್ತು 300 ಅಡಿ ಉದ್ದದವರೆಗೆ ತಗಡಿನ ಶೀಟುಗಳನ್ನು ಬಳಸಲಾಗಿದೆ. ಸಮಾವೇಶದ ಕೇಂದ್ರ ವೇದಿಕೆ 100 ಅಡಿ ಅಗಲ, 40 ಅಡಿ ಉದ್ದವಾಗಿದೆ. ಇಡೀ ಶಾಮಿಯಾನದಲ್ಲಿ ಅಂದಾಜು 60 ರಿಂದ 80 ಸಾವಿರ ಫೈಬರ್ ಕುರ್ಚಿಗಳನ್ನು ಹಾಕಬಹುದಾಗಿದೆ. ಆದರೆ ಯಡಿಯೂರಪ್ಪ ಮತ್ತ[...] ಚೇಲಾಗಳು 5 ಲಕ್ಷ ಜನರನ್ನು ಇಲ್ಲಿಗೆ ತಂದು ಕೂರಿಸುತ್ತ[...] ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಜಿಹೆಚ್ ಕಾಲೇ[...] ಮೈದಾನದಲ್ಲಿ ಹೆಚ್ಚೆಂದರೆ 80 ಸಾವಿರ ಜ[...] ಸೇರಬಹುದಷ್ಟೇ. ಅದೂ ಅವರೆಲ್ಲ ಉಸಿರು ಬ[...] ಹಿಡಿದುಕೊಂಡು ನಿಂತರೆ ಮಾತ್ರ. ವಾಸ್ತವ ಹೀಗಿರುವ[...] ಇವರು ಅದು ಹೇಗೆ ಈ ಮೈದಾನದಲ್ಲಿ ಐದು ಲ[...] ಜನರನ್ನು ಕೂಡಿಡುತ್ತಾರೆ ಆ ದೇವರೇ ಬಲ್ಲ.

ಹೊರಗಿನವರಿಗಿಂತ ಇಲ್ಲಿಯವರೇ ಜಾಸ್ತಿಯಂತೆ

ಜನ ಸೇರಿಸುವುದೇ ಸಮಾವೇಶದ ರಿಸಲ್ಟ್ ಎಂಬ[...] ತಯಾರಿ ನಡೆಸಿರುವ ಕೆಜೆಪಿ ಮುಖಂಡರು ಹಾವೇ[...] ಜಿಲ್ಲೆ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಿಂದ ಜನರ[...] ಕರೆತರುವತ್ತ ಹೆಚ್ಚು ಗಮನ ಹರಿಸುತ್ತಿಲ್ಲ. ಬದಲಾಗಿ ಹಾವೇ[...] ಜಿಲ್ಲೆಯ ಏಳು ತಾಲೂಕುಗಳಿಂದ - ಅದರಲ್ಲೂ ಹಾವೇ[...] ತಾಲೂಕಿನಿಂದ - ಹೆಚ್ಚು ಜನರನ್ನ ಸಮಾವೇಶ[...] ಶಾಮಿಯಾನದಡಿ ಗುಡ್ಡೆ ಹಾಕುವ ಇರಾದೆಯಲ್ಲಿರುವಂತಿ[...]

ಈಗಾಗಲೇ ಹಾವೇರಿ ತಾಲೂಕಿನ ಪ್ರತಿ ಹಳ್ಳಿಯಲ[...] ಕೆಜೆಪಿಯ ಬಾವುಟ ಮತ್ತು ಬ್ಯಾಂಟಿಂಗ್ಸ್‌ಗಳು ರಾರಾಜಿಸುತ್ತಿ[...] ಈ ಭಾಗದ ಟಂಟಂ ವಾಹನಗಳಿಂದ ಹಿಡಿದು ಟ್ರ್ಯಾಕ್ಟ[...] ಟೆಂಪೋ, ಲಾರಿವರೆಗೂ ಎಲ್ಲವನ್ನು ಅಡ್ವಾನ್ಸ್ ಆಗಿ ಬು[...] ಮಾಡಲಾಗಿದೆ. ಅದರಂತೆ ಪ್ರತಿ ಟಂಟಂಗೆ ಒಂದು ಸಾವಿ[...] ಟ್ರ್ಯಾಕ್ಟರ್‌ಗೆ 2 ಸಾವಿರ, ಟೆಂಪೋಗೆ 5 ಸಾವಿರ, ಲಾರಿ[...] 8 ಸಾವಿರ ಎಂದು ಪ್ರತಿ ಟ್ರಿಪ್ಪಿನ ಲೆಕ್ಕದಲ್ಲಿ ಬು[...] ಮಾಡಲಾಗಿದೆ. ಆ ವಾಹನಗಳಲ್ಲಿ ಬರುವ ಹಾವೇ[...] ತಾಲೂಕಿನ ಪ್ರತಿಯೊಬ್ಬರಿಗೂ 200 ರಿಂದ 5[...] ರೂಪಾಯಿವರೆಗೆ ಕ್ಯಾಷ್ ಜೊತೆಗೆ ಊಟ ಫ್ರೀ ಅಂ[...] ಹಾಗೆಯೇ ಜಿಲ್ಲೆಯ ಇತರೆ ತಾಲೂಕುಗಳಿಂದ ಬರು[...] ಜನರಿಗೆ ಸ್ವಲ್ಪ ಹೆಚ್ಚಿಗೆ ರೇಟ್ ಫಿಕ್ಸ್ ಮಾಡಲಾಗಿ[...] ಉಳಿದ ಜಿಲ್ಲೆಗಳಿಂದ ಜನರನ್ನು ಕರೆತರಲು 2[...] ಕೆಎಸ್ಆರ್‌ಟಿಸಿ ಬಸ್‌ಗಳನ್ನು ಗುತ್ತಿಗೆ ಮೇಲೆ ಪಡೆಯಲಾಗಿ[...] ಎಂಬ ರೂಮರ್ ಕೂಡ ಚಾಲ್ತಿಯಲ್ಲಿದೆ. ಇದೆಲ್ಲ[...] ಲೆಕ್ಕ ಹಾಕಿದರೆ ಜನರನ್ನು ಕರೆತರುವ ಬಾಬತ್ತಿಗೇ [...] ರಿಂದ 30 ಕೋಟಿ ರೂ. ದಾಟುತ್ತದೆ. ಒಟ್ಟಿನಲ್ಲಿ ಯಡ್ಡಿ[...] ಹಾವೇರಿ ಸಮಾವೇಶಕ್ಕೆ ಅದೆಷ್ಟು ಜನ ಬಿಜೆಪಿ ಶಾಸಕ[...] ಚೆಡ್ಡಿ ಬಿಚ್ಚಿ ಬರುತ್ತಾರೋ ಗೊತ್ತಿಲ್ಲ, ಆದರೆ ಇ[...] ಸಾವಿರಾರು ಜನರಿಗಂತೂ ಒಂದು ಹೊತ್ತಿನ ಪುಕ್ಕಟೆ ಊಟ[...] ಜೊತೆಗೆ ಮೈಬಗ್ಗಿಸದೆ ಒಂದು ದಿನದ ಕೂಲಿಯ[...] ಮುಫತ್ತಾಗಿ ಸಿಗಲಿದೆ.

ನಿಗಮ-ಮಂಡಳಿ: ಬಿಜೆಪಿ ನಾಯಕರ ಲೂಟಿ




ಬಿಜೆಪಿಯ ಬಕಾಸುರ ರಾಜಕಾರಣಿಗಳು ದುಡ್ಡು ನುಂಗಲು ಸಿಗುವ ಯಾವ ಅವಕಾಶವನ್ನೂ ಬಿಡುವಂತೆ ಕಾಣುತ್ತಿಲ್ಲ.

ಮುಖ್ಯಮಂತ್ರಿ, ಮಂತ್ರಿ, ಶಾಸಕರಾದಿಯಾಗಿ ಲಂಚ, ವರ್ಗಾ ದಂಧೆ, ಲ್ಯಾಂಡ್ ಡೀಲ್‌ಗಳ ಹಗರಣಗಳು ಸಾಲಾಗಿ ಹೊರಬರುತ್ತಿರುವಾಗಲೇ ಇದೇ ಬಿಜೆಪಿ ಸರ್ಕಾರದ ನಿಗಮ-ಮಂಡಳಿಗಳಲ್ಲೂ ಈಗ ಹಣ ತಿನ್ನುವ ಸ್ಪರ್ಧೆ ಶುರುವಾಗಿದೆ.

ಇನ್ನೇನು ಸರ್ಕಾರ ಕೊನೆಯುಸಿರು ಎಳೆಯುತ್ತಿರುವಾಗ ತಾವ್ಯಾಕೆ ಸುಮ್ಮನೆ ಕೂತಿರಬೇಕು ಎನ್ನುವಂತೆ ಈ ನಿಗಮಗಳಲ್ಲಿ ಹಣದ ಲೂಟಿ ನಡೆಯುತ್ತಿದೆ.

ಬೆಳಗಾವಿಯ ಮುಂಡರಗಿಯ ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗುಂಡಪ್ಪ ಗಡಾದ ಎಂಬುವರು ಈ ಲೂಟಿಯ ಅಂಕಿಅಂಶಗಳನ್ನು ಈಗ ಪತ್ತೆ ಹಚ್ಚಿದ್ದಾರೆ.

ಈಗ ನಡೆದಿರುವುದೂ ಇದೇ ಲೂಟಿಯ ಕೆಲಸ. ಈ ನಿಗಮಗಳು ಅದೇನು ಜನೋಪಕಾರಿ ಕೆಲಸಗಳನ್ನು ಮಾಡುತ್ತಿವೆಯೋ ಯಾರಿಗೂ ಗೊತ್ತಿಲ್ಲ, ಆದರೆ ಬಿಜೆಪಿ ಪುಢಾರಿಗಳು ಮಾತ್ರ ವಿವಿಧ ನಿಗಮಗಳ ಚೇರ್‌ಮನ್‌ಗಳಾಗಿ ಕೋಟಿಗಟ್ಟಲೆ ಲೂಟಿ ನಡೆಸುತ್ತಿದ್ದಾರೆ. ಸಂಬಳ, ಸಾರಿಗೆ, ಭತ್ಯೆ ಮನೆ ಬಾಡಿಗೆ, ಇಂಧನ ವೆಚ್ಚ, ಅತಿಥಿ ಸತ್ಕಾರ, ಟೆಲಿಫೋನ್ ಬಿಲ್.... ಹೀಗೆ ಯಾವ ಬಾಬ್ತನ್ನೂ ಬಿಡದೆ ಒಂದಕ್ಕೆ ನಾಲ್ಕರಷ್ಟು ಬಿಲ್ ಜಡಿದು ತಮ್ಮ ಜೇಬು ತುಂಬಿಸಿಕೊಳ್ಳುತ್ತಿದ್ದಾರೆ. ಕಳೆದೆರಡು ವರ್ಷಗಳಲ್ಲಿ ಈ ಭ್ರಷ್ಟರು ಬರೀ ಸಂಬಳ, ಟಿಎ, ಡಿಎ ಲೆಕ್ಕದಲ್ಲಿ ಒಂಭತ್ತು ಕೋಟಿ ರೂಪಾಯಿಗೂ ಜಾಸ್ತಿ ಹಣ ತಿಂದಿದ್ದಾರೆಂದರೆ ಏನನ್ನಬೇಕು?



ಭೀಮಪ್ಪ ಗುಂಡಪ್ಪ ಗಡಾದ

ಆಹಾರ ನಿಗಮದ ಹೆಗ್ಗಣ ಅಶ್ವಥ್

ಹಾಲಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಚೇರ್‌ಮನ್ ಆಗಿರುವ ಎಂ.ಸಿ. ಅಶ್ವಥ್ ಕಳೆದ ಎರಡು ವರ್ಷದಲ್ಲಿ ಕೇವಲ ಸಂಬಳ-ಸಾರಿಗೆ ಲೆಕ್ಕದಲ್ಲಿ 84 ಲಕ್ಷ ರೂಪಾಯಿ ಹಣ ನುಂಗಿದ್ದಾನೆ. ಅಂದರೆ ತಿಂಗಳಿಗೆ ಮೂರೂವರೆ ಲಕ್ಷ ರೂಪಾಯಿಗಳು!

ಚನ್ನಪಟ್ಟಣದ ಜೆಡಿಎಸ್ ಶಾಸಕನಾಗಿದ್ದ ಎಂ.ಸಿ. ಅಶ್ವಥ್ 2010 ರಲ್ಲಿ ಯಡಿಯೂರಪ್ಪ ಸರ್ಕಾರ ಅವಿಶ್ವಾಸ ನಿರ್ಣಯ ಎದುರಿಸಿದಾಗ ಓಟ್ ಹಾಕದೆ ದೂರ ಉಳಿದು ಬಿಜೆಪಿಗೆ ನೆರವಾಗಿದ್ದ. ಆಪರೇಷನ್ ಕಮಲದ ಎಂಜಲು ಕಾಸು ತಿಂದು ಜೆಡಿಎಸ್‌ಗೆ ರಾಜೀನಾಮೆ ಕೊಟ್ಟು ನಂತರ ಯಡ್ಡಿ ಕೃಪೆಯಿಂದ ಆಹಾರ ನಿಗಮದ ಚೇರ್‌ಮನ್ ಆದ. ಚನ್ನಪಟ್ಟಣ ಹಾಗೂ ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ ಅಕ್ರಮ ಲಿಕ್ಕರ್ ದಂಧೆ ನಡೆಸಿ ಕೋಟಿಗಟ್ಟಲೆ ದೋಚಿದ್ದ ಅಶ್ವಥ್‌ಗೆ ದುಡ್ಡು ಕದಿಯುವ ಚಟವೇ ಕಿಕ್ ನೀಡುತ್ತಿತ್ತು. ಹಾಗಾಗಿ ಆಹಾರ ನಿಗಮಕ್ಕೆ ಕಾಲಿಟ್ಟ ತಕ್ಷಣ ತನ್ನ ಬಿಲ್ವಿದ್ಯೆ ತೋರಿಸತೊಡಗಿದ.

ಈ ನಿಗಮಕ್ಕೆ ಅಶ್ವತ್ ಬರುವ ಮುನ್ನ ಚೇರ್‌ಮನ್ ಆಗಿದ್ದ ಹರತಾಳು ಹಾಲಪ್ಪ ಜುಲೈ 2008 ರಿಂದ ಡಿಸೆಂಬರ್ 2010 ರ ಅವಧಿಯಲ್ಲಿ ಅಂದರೆ 18 ತಿಂಗಳಲ್ಲಿ ಎಲ್ಲಾ ಭತ್ಯೆ ಸೇರಿ ಒಟ್ಟು 9.34 ಲಕ್ಷ ರೂ. ಪಡೆದಿದ್ದಾರೆ.

ಆದರೆ ಅಶ್ವಥ್ 2010 ರ ಡಿಸೆಂಬರ್‌ನಿಂದ 2012 ರ ಅಕ್ಟೋಬರ್‌ವರೆಗೆ ಅಂದರೆ 20 ತಿಂಗಳಿಗೆ ಕಿತ್ತಿರುವ ಹಣ 84.39 ಲಕ್ಷ ರೂಪಾಯಿಗಳು!

ಹಾಲಪ್ಪ ತಿಂಗಳಿಗೆ ಒಂದು ಲಕ್ಷ ರೂಪಾಯಿಗಳ ಭತ್ಯೆ ಪಡೆದಿದ್ದರೆ ಈ ಹೆಗ್ಗಣ ಅಶ್ವಥ್ ನಿಗಮಕ್ಕೆ ತಿಂಗಳಿಗೆ ಮೂರೂವರೆ ಲಕ್ಷ ರೂಪಾಯಿ ಖರ್ಚು ಮಾಡಿಸಿ ಹಣ ನುಂಗಿದ್ದಾನೆ. ಆದರೆ ಈ ಅವಧಿಯಲ್ಲಿ ಇವನೇನು ಕಿಸಿದ, ಎಲ್ಲೆಲ್ಲಿ ಟೂರ್ ಮಾಡಿದನೆಂಬುದು ಯಾರಿಗೂ ಗೊತ್ತಿಲ್ಲ.

ಕರ್ನಾಟಕ ಸೋಪ್ಸ್‌ನಲ್ಲಿ ಶಿವಾನಂದನ ಗಲೀಜು

2009 ರ ಫೆಬ್ರವರಿಯಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ನಿಗಮಕ್ಕೆ ಅಧ್ಯಕ್ಷನಾದ ಶಿವಾನಂದ ನಾಯ್ಕ ನಿಗಮವನ್ನೇ ಗುಡಿಸಿ ಗುಂಡಾಂತರ ಮಾಡಿದ್ದಾನೆ. ಈ ಅವಧಿಯಲ್ಲಿ ಇವನನ್ನು ಸಾಕಲು ನಿಗಮ ಖರ್ಚು ಮಾಡಿರುವುದು ಬರೋಬ್ಬರಿ 84.13 ಲಕ್ಷ ರೂಪಾಯಿಗಳು. ಭಟ್ಕಳದ ಮಾಜಿ ಬಿಜೆಪಿ ಶಾಸಕನಾದ ನಾಯ್ಕ ಈಗ್ಗೆ ಹದಿನೈದು ವರ್ಷಗಳ ಹಿಂದೆ ಹೊನ್ನಾವರದಲ್ಲಿ ಮೀನು ಸಾಗಾಣಿಕಾ ಲಾರಿಯೊಂದರ ಡ್ರೈವರ್ ಆಗಿದ್ದ ಪಕ್ಕಾ ಹಿಂದೂ ಕೋಮುವಾದಿಯಾಗಿ ಭಟ್ಕಳ-ಹೊನ್ನಾವರ ಪ್ರದೇಶಗಳಲ್ಲಿ ಮುಸ್ಲಿಮರ ವಿರುದ್ಧ ಗಲಭೆ, ದೊಂಬಿಗಳಿಗೆ ಪ್ರಚೋದನೆ ನೀಡುತ್ತಲೇ ರಾಜಕೀಯವಾಗಿ ಬೆಳೆದ. ಕುಮಾರಸ್ವಾಮಿ ಆಡಳಿತದಲ್ಲಿ ಸಣ್ಣ ಕೈಗಾರಿಕಾ ಸಚಿವನಾಗಿದ್ದು ನಂತರ ಯಡ್ಡಿಯ ಕಾಲಿಗೆ ಬಿದ್ದು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ನಿಗಮದ ಚೇರ್‌ಮನ್ ಆದ.

ಹೀಗೆ ಚೇರ್‌ಮನ್ ಆದವನು ಬೀದಿಬೀದಿ ಅಲೆದು ಸೋಪನ್ನೇನು ಮಾರಲಿಲ್ಲವಾದರೂ ಸಂಬಳ, ಸಾರಿಗೆ, ಡೀಸೆಲ್, ಫೋನ್‌ಬಿಲ್, ಬಾಡಿಗೆ, ಅಡುಗೆ ಸಹಾಯಕರ ಲೆಕ್ಕ ತೋರಿಸಿ ಒಟ್ಟು 84 ಲಕ್ಷ ರೂಪಾಯಿ ಹಣ ನುಂಗಿ ನೀರು ಕುಡಿದಿದ್ದಾನೆ.

ಶಿವಾನಂದ ನಾಯ್ಕ ಇಲ್ಲಿ ಕದ್ದ ದುಡ್ಡಿನಲ್ಲಿ ಈಗ ಹೊನ್ನಾವರದಲ್ಲಿ ಒಂದು ಕೋಟಿ ರೂಪಾಯಿ ಬೆಲೆಯ ದೊಡ್ಡ ಬಂಗಲೆ ಎಬ್ಬಿಸಿದ್ದಾನೆ. ಅಷ್ಟೇ ಅಲ್ಲ, ಬಿಜೆಪಿಯಲ್ಲಿದ್ದರೂ ಇನ್ನು ಉಪಯೋಗವಿಲ್ಲ ಅನ್ನಿಸಿ ಜೆಡಿಎಸ್ ಸೇರಲು ಸರ್ಕಸ್ ನಡೆಸುತ್ತಿದ್ದಾನೆ. ಭಟ್ಕಳದಿಂದ ಪುನಃ ಅಸೆಂಬ್ಲಿಗೆ ನಿಲ್ಲುವ ಲೆಕ್ಕಾಚಾರ ಇರುವುದರಿಂದ ಶಿವಾನಂದ ನಾಯ್ಕ, ಕರ್ನಾಟಕ ಸಾಬೂನು ನಿಗಮವನ್ನು ಪೂರ್ತಿ ಲೂಟಿ ಮಾಡಿಯೇ ತೊಲಗುವಂತೆ ಕಾಣುತ್ತಿದೆ.



ಲಲಿತಾರಾಣಿ

ಲಲಿತಾರಾಣಿ ಕರಕುಶಲತೆ

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ಮಂಡಳಿಯ ಅಧ್ಯಕ್ಷೆಯಾಗಿರುವ ಲಲಿತಾರಾಣಿ ಶ್ರೀರಂಗದೇವರಾಯ ತಾನು ವಿಜಯನಗರದ ರಾಣಿ ಎಂದೇ ಭ್ರಮೆ ಹೊಂದಿದ್ದಾರೆ ಎನಿಸುವಂತಿದೆ ಆಕೆಯ ದರ್ಬಾರು ನೋಡಿದರೆ. ಕ[...] 30 ತಿಂಗಳಿಂದ ಈ ಮಂಡಳಿಯ ಅಧ್ಯಕ್ಷೆಯಾಗಿರ[...] ಲಲಿತಾರಾಣಿ ಒಟ್ಟು 51 ಲಕ್ಷ ರೂಪಾಯಿಗಳ ಬ[...] ಎತ್ತಿದ್ದಾರೆ. ಆಕೆ ಅದೆಂತಾ ಬಿಲ್ವಿದ್ಯಾ ಚತುರೆ ಎಂ[...] ತಿಳಿಯಲು ಖರ್ಚಿನ ಬಿಡಿ ವಿವರಗಳನ್ನು ನೋಡಬೇ[...]

2009-10 ರ ಸಾಲಿನಲ್ಲಿ ಸಂಬಳದ ಬಾಬ್ತು [...] ಸಾವಿರ, ಪ್ರವಾಸ ಭತ್ಯೆ 3.82 ಲಕ್ಷ, ವಾ[...] ನಿರ್ವಹಣೆಗೆಂದು 1.15 ಲಕ್ಷ, ಜೊತೆಗೆ ಇತರೆ ಖರ್ಚೆಂ[...] 5.47 ಲಕ್ಷ ರೂಪಾಯಿ 2010-11 ರಲ್ಲಿ ಇನ್ನೂ ಹಳ[...] ಪುಢಾರಿಗಿರಿ ಪ್ರದರ್ಶಿಸಿರುವ ಲಲಿತಾರಾಣಿ ಟಿಎ 1[...] ಲಕ್ಷ, ವಾಹನ ನಿರ್ವಹಣೆಗೆಂದು 2.25 ಲಕ್ಷ ಹಾ[...] ಇತರೆ ಖರ್ಚಿನ ಬಾಬ್ತಿನಲ್ಲಿ 6.03 [...] ಹಣ ಎಳೆದಿದ್ದಾರೆ.

2011-12 ರಲ್ಲಿ ಟಿಎ 2.42 [...] ರೂ., ವಾಹನ ನಿರ್ವಹಣೆಗೆಂದು 3[...] ಲಕ್ಷ, ಇತರೆ 5.75 ಲಕ್ಷವಾದರೆ 201[...] 13 ರಲ್ಲಿ ಸಂಬ್ಬಳ-ಟಿಎಗೆ 1.91 [...] ವಾಹನ ನಿರ್ವಹಣೆಗೆಂದು 1.06 [...] ಇತರೆ ಖರ್ಚು 3.50 ಲಕ್ಷ [...] ತೋರಿಸಿದ್ದಾರೆ.

ಅಂದರೆ ನಿಗದಿತ ಸಂಬಳಕ[...] ಎರಡರಷ್ಟು ಟಿಎ, ಅದರ ನಾಲ್ಕು ಪ[...] ಇತರೆ ಖರ್ಚೆಂದು ಕತೆ ಕಟ್ಟಿದ್ದಾರೆ. [...] ಖರ್ಚೆಂದು ಕರಕುಶಲ ನಿಗಮವು ಬ[...] 17.75 ಲಕ್ಷ ರೂ. ತೋರಿಸಿದೆ. ಅದೇ ರೀತಿ ವಾ[...] ನಿರ್ವಹಣೆ ಬಾಬ್ತೊಂದರಲ್ಲೇ 7.52 ಲಕ್ಷ ಖ[...] ತೋರಿಸಲಾಗಿದೆ. ಈಕೆಯ ಅಧ್ಯಕ್ಷಾವಧಿಯಲ್ಲಿ ನಿಗಮ[...] 5 ಲಕ್ಷ ರೂ. ಲಾಭ ಗಳಿಸಿದೆಯೋ ಇಲ್ಲವೋ ಅ[...]

ಲಾಡ್ಜ್‌ಗಳೆಲ್ಲಾ ಬುಕ್

ಸಮಾವೇಶದಲ್ಲಿ ಪಾಲ್ಗೊಳ್ಳಲು ಆಗಮಿಸುವ ಶಾಸಕರು, ...ಮುಖಂಡರುಗಳಿಗೆ ಈಗಾಗಲೇ ಹಾವೇರಿ ನಗರ ಸೇರಿದಂತೆ ...ಣೆಬೆನ್ನೂರು ಮತ್ತು ಶಿಗ್ಗಾಂವಿ ಪಟ್ಟಣಗಳಲ್ಲಿರುವ ಎಲ್ಲ ...ಾಡ್ಜ್‌ಗಳ ರೂಮ್‌ಗಳನ್ನು ಬುಕ್ ಮಾಡಲಾಗಿದೆ. ಸದ್ಯ ...ಳಗಾವಿ ಅಧಿವೇಶನದಲ್ಲಿರುವ ಕೆಜೆಪಿ ಸೇರುವ ಶಾಸಕರು ...ಮಾವೇಶಕ್ಕೆ ಅಲ್ಲಿಂದಲೇ ನೇರವಾಗಿ ಬಂದಿಳಿಯಲಿದ್ದಾರೆ. ...ದಕ್ಕಾಗಿ ಬೆಳಗಾವಿಯಿಂದ ಬೆಳಗ್ಗೆ ಒಂಭತ್ತು ಗಂಟೆಗೆ ...ಾಸಗಿ ಐಶಾರಾಮಿ ಎಸಿ ಬಸ್‌ಗಳನ್ನು ಬುಕ್ ...ಾಡಲಾಗಿದೆ. ಸರ್ಕಾರಿ ಐಬಿಗಳಂತೂ ಈಗಾಗಲೇ ಕೆಜೆಪಿ ...ೀಲಾಗಳ ಪಾಲಾಗಿವೆ.

...ಯಾರಿಗೆಂದೇ ರಾಜೀನಾಮೆ ಕೊಟ್ಟರು

ಸಮಾವೇಶದ ತಯಾರಿಗೆ ಪ್ರಾರಂಭದಲ್ಲಿ ಕಾರ್ಯಕರ್ತರ ...ಾರತೆ ಎದ್ದು ಕಾಣಿಸುತ್ತಿತ್ತು. ಮಂತ್ರಿ ಉದಾಸಿ ಈ ...ಮಸ್ಯೆಯನ್ನು ಎರಡೇ ದಿನಗಳಲ್ಲಿ ಬಗೆಹರಿಸಿದರು. ...ಾನಗಲ್ ತಾಲೂಕು ಪಂಚಾಯತಿಯ 11 ಸದಸ್ಯರು, ...ರಸಭೆಯ 18 ಸದಸ್ಯರು, ಎಪಿಎಂಸಿಯ 12 ಸದಸ್ಯರು, ...ಎಲ್‌ಡಿ ಬ್ಯಾಂಕಿನ 12 ಸದಸ್ಯರು ತಮ್ಮ ಬಿಜೆಪಿ ಸದಸ್ಯತ್ವಕ್ಕೆ ...ಜೀನಾಮೆ ಕೊಡುವಂತೆ ನೋಡಿಕೊಂಡರು. ಅನಂತರ ...ವರೆಲ್ಲರಿಗೂ ಕೆಜೆಪಿ ಸಮಾವೇಶದ ತಯಾರಿ ಉಸ್ತುವಾರಿ ...ಸಿದರು. ಇದರ ಜೊತೆಜೊತೆಗೆ ಶಿವರಾಜ ಸಜ್ಜನ ...ಡ. ಹಾವೇರಿ ತಾಲೂಕು ಪಂಚಾಯತಿಯ 18 ಜನ ...ತ್ತು ಜಿಲ್ಲಾ ಪಂಚಾಯತಿಯ 22 ಜನ ತಮ್ಮ ಬಿಜೆಪಿ ...ದಸ್ಯತ್ವಕ್ಕೆ ರಾಜೀನಾಮೆ ಕೊಡುವಂತೆ ಮಾಡಿದ. ಬಿಜೆಪಿಗೆ ...ಬ್ಬೈ ಹೇಳಿರುವ ಇವರೆಲ್ಲರೂ ಸಮಾವೇಶದ ದಿನ ...ಜೆಪಿ ಸೇರಲಿದ್ದಾರೆ ಎಂದು ಸಜ್ಜನ ಪ್ರೆಸ್‌ಮೀಟ್‌ನಲ್ಲಿ ...ಳಿಕೊಂಡಿದ್ದಾರೆ. ಬರುವ ದಿನಗಳಲ್ಲಿ ಬಿಜೆಪಿಗೆ ಕೈಕೊಟ್ಟು ...ಜೆಪಿ ಸೇರುವವರ ಸಂಖ್ಯೆ ಹೀಗೇ ಮುಂದುವರೆದರೆ ...ದೇ ತಿಂಗಳಲ್ಲಿ ಈ ಪ್ರದೇಶದಲ್ಲಿ ಚೆಡ್ಡಿ ಪಕ್ಷ ಪೂರ್ತಿ ...ಲಿ ಖಾಲಿ ಆಗುವುದರಲ್ಲಿ ಸಂದೇಹವಿಲ್ಲ.

ಇದೆಲ್ಲವನ್ನು ನೋಡಿಕೊಂಡು ತಲೆ ಬೆಚ್ಚಗಾಗಿಸಿಕೊಂಡ ...ಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನ ಚೇಲಾ ಮತ್ತು ಜಿಲ್ಲಾ ...ಜೆಪಿ ಅಧ್ಯಕ್ಷನಾಗಿರುವ ವಿಧಾನಪರಿಷತ್ ಸದಸ್ಯ ಸೋಮಣ್ಣ ...ವಿನಮರದ "ಕೊನೆಗೆ ಹತ್ತೇ ಜನ ಪಕ್ಷದಲ್ಲಿ ಉಳಿದರೂ ...ವರನ್ನೇ ಇಟ್ಟುಕೊಂಡು ಪಾರ್ಟಿ ಕಟ್ಟತೀನಿ" ಎಂದು ...ಳುತ್ತಿದ್ದಾರೆ.

ಹಾವೇರಿಯಲ್ಲಿ ಡಿಸೆಂಬರ್ 9ರಂದು ನಡೆಯಲಿರುವ ...ಡ್ಡಿಯ ಜಾತ್ರೆಯಲ್ಲಿ ಉಂಡು ಹೋಗುವವರ ಸಂಖ್ಯೆನೇ ...ಕ್ಕೆ ಜಾಸ್ತಿ ಇದೆ. ಸಮಾವೇಶ ಆದ ನಂತರ ಅದೆಷ್ಟು ...ಜ ಕೆಜೆಪಿ ಪಕ್ಷವನ್ನು ಕಟ್ಟಲು ಯಡ್ಡಿಯೊಂದಿಗೆ ...ಳಿದಿರುತ್ತಾರೆ ಎಂಬುದನ್ನು ಸಮಾವೇಶದ ನಂತರದ ...ದಲ್ಲಿ ಲೆಕ್ಕ ಹಾಕಬೇಕಷ್ಟೇ.

ಹುರಳಿಕುಪ್ಪಿ ವಿನಯ

...ಲಕ್ಷ ರೂಪಾಯಿ ಮಾತ್ರ ನೀರಿನಂತೆ ಹರಿದುಹೋಗಿದೆ.

ಲಕ್ಷ್ಮೀನಾರಾಯಣ ಗೋವಿಂದಾ...

...ಇನ್ನು ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ...ಡಿ.ಲಕ್ಷ್ಮೀನಾರಾಯಣ ಸಂಬಳವೆಂದು ನಾಲ್ಕು ಲಕ್ಷ ...ದು ಮನೆ ಬಾಡಿಗೆ ಭತ್ಯೆ ಲೆಕ್ಕದಲ್ಲಿ ಕಿತ್ತಿರುವ ಹಣ ...ಲಕ್ಷ ರೂಪಾಯಿಗಳು!

...ಇವರಿಗೆಲ್ಲಾ ಹೇಳುವವರು ಕೇಳುವವರು ಯಾರೂ ...ಲ್ಲವೆಂಬ ಭಂಡತನದಿಂದಲೇ ಸ್ವೇಚ್ಛೆಯಿಂದ ಸಾರ್ವಜನಿಕರ ...ಣವನ್ನು ಹೀಗೆ ಪೋಲು ಮಾಡಿದ್ದಾರೆ.

...ಹಾಲಿ ಬಿಜೆಪಿ ಸರ್ಕಾರದಲ್ಲಿದ್ದರೂ ಯಡಿಯೂರಪ್ಪನ ...ಪಿ ಜೊತೆ ಓಡಾಡುವ ಲಕ್ಷ್ಮೀನಾರಾಯಣ ನಿಗಮಕ್ಕೆ ...ಬಂಧಿಸಿದಂತೆ ನಯಾಪೈಸೆಯಷ್ಟೂ ಕೆಲಸ ಮಾಡದೆ ...ಡ್ಡಿಯ ಜೊತೆ ತಿರುಗಿದ್ದೇ ಜಾಸ್ತಿ.

ಖಾದಿ ಮಂಡಳಿ

ಶಂಕರಗೌಡರ ಕಮಾಲ್

...ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ...10 ರಲ್ಲಿ ಚೇರ್‌ಮನ್ ಆದ ಶಂಕರಗೌಡ ಹರವಿಗೆ ...ಷ್ಟು ಶತಮಾನಗಳ ಹಸಿವಿತ್ತೊ ಏನೋ. ಈತ ಕಳೆದ ...ಡು ವರ್ಷದಲ್ಲಿ ಸಂಬಳವೆಂದು ಕೇವಲ 3.34 ಲಕ್ಷ ...ದು ಪ್ರವಾಸ ವೆಚ್ಚವೆಂದು ಬರೋಬ್ಬರಿ 21.73 ಲಕ್ಷ ... ಜೇಬಿಗಿಳಿಸಿದ್ದಾರೆ. ಇಷ್ಟೊಂದು ಪ್ರವಾಸ ಶಂಕರಗೌಡರು ...ಲ್ಲಿ ನಡೆಸಿದರು, ಯಾವ ಪುರುಷಾರ್ಥಕ್ಕೆ ಓಡಾಡಿದರೆಂಬ ...ಗತಿ ಯಾವನಿಗೂ ತಿಳಿದಿಲ್ಲ.

...ಈ ನಿಗಮ ಮಂಡಳಿಗಳನ್ನು ಅಸ್ತಿತ್ವಕ್ಕೆ ತಂದಾಗ ...ಆ ಕ್ಷೇತ್ರಗಳಲ್ಲಿ ಸ್ವಲ್ಪವಾದರೂ ರಚನಾತ್ಮಕ ಕೆಲಸಗಳಾಗಲಿ ...ಬ ಸದುದ್ದೇಶವಿತ್ತು, ಜೊತೆಗೆ ಅಧಿಕಾರದಾಹಿ ...ಕಾರಿಗಳನ್ನು ಎಂತದ್ದೋ ಒಂದು ಕುರ್ಚಿ ನೀಡಿ ...ಮಾಧಾನ ಪಡಿಸುವ ಅಸ್ತ್ರವಾಗಿಯೂ ಇವನ್ನು ...ಸಲಾಗುತ್ತಿತ್ತು.

...ಈಗ ನೋಡಿದರೆ ಶುದ್ಧ ನಾಲಾಯಕ್ ಹಾಗೂ ಕಲ್ಲು ...ಕೊ ಕಚ್ಚಿ ತಿನ್ನುವ ಹೆಗ್ಗಣಗಳಂತೆ ಇವರೆಲ್ಲಾ ನಿಗಮ ...ಡಳಿಗಳಿಗೆ ವಕ್ಕರಿಸಿಕೊಂಡು ತಿಂದು ತೇಗುತ್ತಿದ್ದಾರೆ. ...ಈ ಬಿಜೆಪಿಗಳು ಭೋಜನಕ್ಕೆ ಕುಳಿತರೆ ಸಾಕ್ಷಾತ್ ...ಂತನೇ ಬಂದರೂ ನಿಲ್ಲಿಸಲಾಗುವುದಿಲ್ಲ ಬಿಡಿ.

■ ಪಾರ್ವತೀಶ

ಯಡ್ಡಿ ಕೂಗಾಡಿದರೂ ಶೆಟ್ಟರ್ ನೆಮ್ಮದಿಗೆ ಭಂಗವಿಲ್ಲ

ಮುಂದಿನ ಹತ್ತು ದಿನಗಳಲ್ಲಿ ಕರ್ನಾಟಕದ ರಾಜಕೀಯದಲ್ಲಿ ಎರಡು ಮಹತ್ತರವಾದ ಘಟನೆಗಳು ನಡೆಯಲಿವೆ. ಮೊದಲನೆಯದು ಬೆಳಗಾವಿಯಲ್ಲಿ ನಡೆಯುವ ಅಧಿವೇಶನ. ಎರಡನೆಯದು ಹಾವೇರಿಯಲ್ಲಿ ನಡೆಯುವ ಯಡಿಯೂರಪ್ಪನ ಕೆಜೆಪಿ ಪಕ್ಷದ ಸಮಾವೇಶ. ಈ ಸಮಾವೇಶ ದಿಂದಾಗಿ ಜಗದೀಶ್ ಶೆಟ್ಟರ್ ನೇತೃತ್ವದ ಸರಕಾರ ಉರುಳುತ್ತದೋ? ಬದುಕುಳಿಯುತ್ತದೋ? ಎಂಬ ಬಗ್ಗೆ ರಾಜಕೀಯ ವಲಯದಲ್ಲಿ ಗಹನವಾದ ಚರ್ಚೆ ಆರಂಭವಾಗಿದೆ.


ಕರ್ನಾಟಕ ವಿಧಾನಸಭೆ ವಿಸರ್ಜನೆಯಾಗಿ ನಿಗದಿತ ಸಮಯಕ್ಕಿಂತ ಮೊದಲೇ ಚುನಾವಣೆ ನಡೆಯಲಿದೆ ಎಂಬ ಗಾಳಿ ಸುದ್ದಿ ಕಳೆದ ಒಂದು ವಾರದಿಂದ ಕೇಳಿಬರುತ್ತಿದೆ. ಇವೆಲ್ಲ ಹಾವೇರಿಯಲ್ಲಿ ನಡೆಯುವ ಕೆಜೆಪಿ ಸಮಾವೇಶದಲ್ಲಿ ಎಷ್ಟು ಜನ ಯಡಿಯೂರಪ್ಪನ ಹಿಂಬಾಲಕ ಶಾಸಕರು, ಮಂತ್ರಿಗಳು ಭಾಗವಹಿಸುತ್ತಾರೆ ಎಂಬುದನ್ನು ಅವಲಂಬಿಸಿದೆ.


ವಾಸ್ತವವಾಗಿ ದೆಹಲಿಯಲ್ಲಿರುವ ಬಿಜೆಪಿಯ ದೊಣ್ಣೆ ನಾಯಕರು ಮತ್ತು ಆರೆಸ್ಸೆಸ್ಸಿನ ಚೆಡ್ಡಿ ನಾಯಕರು ಈಗಾಗಲೇ ಒಂದು ತರಹದ ಕೋಮಾಸ್ಥಿತಿಯಲ್ಲಿರುವ ಸರ್ಕಾರವನ್ನು ನಡೆಸುವುದಕ್ಕಿಂತ ಅದನ್ನು ವಿಸರ್ಜಿಸಿ ಚುನಾವಣೆಗೆ ಹೋಗುವುದೇ ಲೇಸು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಮಾಡುವ ಮುಖಾಂತರ ನಾಲ್ಕು ಗುರಿಗಳನ್ನು ಸಾಧಿಸಬಹುದು ಎಂಬುದು ಚೆಡ್ಡಿ ನಾಯಕರ ಲೆಕ್ಕಾಚಾರ. ಮೊದಲನೆಯದಾಗಿ ಸರ್ಕಾರವನ್ನು ಅವಧಿಗೆ ಮುನ್ನ ವಿಸರ್ಜಿಸಿದರೆ ಬಿಜೆಪಿ ಅಧಿಕಾರಕ್ಕೆ ಅಂಟಿಕೊಂಡಿಲ್ಲ ಎಂಬ ಸಂದೇಶವನ್ನು ಕೊನೆ ಕ್ಷಣದಲ್ಲಾದರೂ ಜನರಿಗೆ ತೋರಿಸಬಹುದು. ಎರಡನೆಯದಾಗಿ, ಯಡ್ಡಿಯ ಹಾವೇರಿ ಸಮಾವೇಶಕ್ಕೆ ಹೋಗುವ ಶಾಸಕರನ್ನು 'ನಿರ್ಭಯದಿಂದ' ತೆಗೆದುಹಾಕಿ ಈಗಾಗಲೇ ಕರಗಿಹೋಗಿರುವ ಮರ್ಯಾದೆಯನ್ನು ತಮ್ಮ 'ಶಿಸ್ತಿನ ಪಕ್ಷ' ಮರಳಿ ಪಡೆಯಬಹುದು. ಮೂರನೆಯದಾಗಿ, ಯಡಿಯೂರಪ್ಪ ರಾಜ್ಯಾದ್ಯಂತ ಪ್ರವಾಸ ಮಾಡಿ ತನ್ನ ಕೆಜೆಪಿ ಪಕ್ಷವನ್ನು ಕಟ್ಟಲು ಇರುವ ಸಮಯಾವಕಾಶವನ್ನು ಕಡಿತಗೊಳಿಸುವುದು. ನಾಲ್ಕನೆಯದಾಗಿ, ಈಗ ಸಚಿವ ಸಂಪುಟದಲ್ಲಿರುವ ಯಡಿಯೂರಪ್ಪನ ಅನುಯಾಯಿ ಮಂತ್ರಿಗಳಿಗೆ ಸಿಕ್ಕಾಪಟ್ಟೆ 'ಕಲೆಕ್ಷನ್' ಮಾಡಿ ತಮ್ಮ ಗುರು ಯಡ್ಡಿಗೆ ನೆರವಾಗುವುದಕ್ಕೆ ಬ್ರೇಕ್ ಹಾಕುವುದು.

ವಿಚಿತ್ರವೆಂದರೆ, ರಾಜ್ಯ ಸರ್ಕಾರವನ್ನು ಮುಂಚಿತವಾಗಿ ವಿಸರ್ಜಿಸುವ ದೊಣ್ಣೆ-ಚೆಡ್ಡಿ ನಾಯಕರ ಶಿಫಾರಸ್ಸನ್ನು ಬಿಜೆಪಿಯಲ್ಲಿರುವ ಅನೇಕ ನಾಯಕರೇ ವಿರೋಧಿಸುತ್ತಿದ್ದಾರೆ. ಅದರಲ್ಲೂ ಬಿಜೆಪಿಯ ರಾಜ್ಯಾಧ್ಯಕ್ಷ ಮತ್ತು ಉಪ ಮುಖ್ಯಮಂತ್ರಿಯಾಗಿರುವ ಈಶ್ವರಪ್ಪ "ವಿಧಾನಸಭೆಯ ವಿಸರ್ಜನೆ ಅಷ್ಟೇನು ಸೂಕ್ತವಾದ ನಿರ್ಣಯ ಅಲ್ಲ" ಎಂದು ತಮ್ಮ ಅಭಿಪ್ರಾಯವನ್ನು ಹೈಕಮಾಂಡ್‌ಗೆ ತಿಳಿಸಿದ್ದಾರಂತೆ. ಅದೇರೀತಿ ಹೊಸದಾಗಿ ಮಂತ್ರಿಮಂಡಲ ಸೇರಿರುವ ಚಿಕ್ಕಮಗಳೂರಿನ ಸಿ.ಟಿ. ರವಿ, ಜೀವರಾಜ್, ಇತರರು "ಯಾವುದೇ ಕಾರಣಕ್ಕೂ ವಿಧಾನಸಭೆ ವಿಸರ್ಜನೆ ಮಾಡಲು ಇದು ಸುಸೂಕ್ತವಾದ ಕಾಲವಲ್ಲ" ಎಂದು ಬಿಜೆಪಿ ಹೈಕಮಾಂಡ್‌ಗೆ ಸೂಚಿಸಿದ್ದಾರಂತೆ. ಜೊತೆಗೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಉಪಮುಖ್ಯಮಂತ್ರಿ ಆರ್.ಅಶೋಕ್ ಕೂಡ "ಈ ಹಂತದಲ್ಲಿ ವಿಧಾನಸಭೆಯ ವಿಸರ್ಜನೆ ಆತುರದ ರಾಜಕೀಯ ಕ್ರಮವಾಗಬಹುದು" ಎಂದು ಅಭಿಪ್ರಾಯಪಟ್ಟಿದ್ದಾರಂತೆ. ಇದೆಲ್ಲದರ ಅರ್ಥ ಬಿಜೆಪಿ ಪಕ್ಷದಲ್ಲೇ ಯಾರೂ ವಿಧಾನಸಭೆ ವಿಸರ್ಜನೆಗೆ ಮಾನಸಿಕವಾಗಿಯಾಗಲಿ, ರಾಜಕೀಯವಾಗಿಯಾಗಲಿ ತಯಾರಾಗಿಲ್ಲ ಎಂದಾಯಿತು.

ಅಸಲಿ ವಿಚಾರವೇನೆಂದರೆ ಒಂದು ವೇಳೆ ವಿಧಾನಸಭೆ ಯನ್ನು ಈಗಲೇ ವಿಸರ್ಜಿಸಿದರೆ ಈಗ ತಮ್ಮ ಕೈಯಲ್ಲಿರುವ ಅಧಿಕಾರವನ್ನು ಮುಂಗಡವಾಗಿ ಕಳೆದುಕೊಳ್ಳಬೇಕಾಗುತ್ತದೆ ಎಂಬುದೇ ಈ ಬಿಜೆಪಿ ನಾಯಕರ ವಿರೋಧಕ್ಕೆ ಕಾರಣವಾಗಿದೆ. ಅದರಲ್ಲೂ ಈಗ ಒಂದೆಡೆ ರಾಜ್ಯಾಧ್ಯಕ್ಷರೂ ಆಗಿರುವ, ಇನ್ನೊಂದೆಡೆ 'ತೆರೆಮರೆಯ ಮುಖ್ಯಮಂತ್ರಿ' ಎಂಬ ಖ್ಯಾತಿಯನ್ನೂ ಗಳಿಸಿರುವ ಈಶ್ವರಪ್ಪನವರಿಗೆ ಈ ಬಗ್ಗೆ ಕಿಂಚಿತ್ತೂ ಆಸಕ್ತಿ ಇಲ್ಲ. ಯಡಿಯೂರಪ್ಪನ ನಿರ್ಗಮನದ ನಂತರ ರಾಜ್ಯ ಬಿಜೆಪಿಯಲ್ಲಿ ಏಕಮೇವಾದ್ವಿತೀಯ ನಾಯಕ ಎಂದೆನಿಸಿಕೊಂಡಿರುವ ಈಶ್ವರಪ್ಪನವರಿಗೆ ತಮ್ಮ ಎರಡೂ ಕೈಗಳಲ್ಲಿ ಎರಡು ಅಧಿಕಾರಗಳನ್ನು ಹಿಡಿದು ಇನ್ನಷ್ಟು ಕಾಲ ವಿಜೃಂಭಿಸಬೇಕೆಂದು ಹಂಬಲಿಸುತ್ತಿದ್ದಾರೆ.

ಅದಕ್ಕೆ ಮತ್ತೊಂದು ಮುಖ್ಯ ಕಾರಣವೂ ಇದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಯಾವುದೇ ಕಾರಣಕ್ಕೂ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಜಗದೀಶ್ ಶೆಟ್ಟರ್ ಆದಿಯಾಗಿ ಎಲ್ಲಾ ಬಿಜೆಪಿ ಶಾಸಕರಿಗೆ ಖಾತ್ರಿಯಾಗಿದೆ. ನಾಲ್ಕು ವರ್ಷಗಳ ಕಾಲ ಕಾದು ಕಾಡಿ ಬೇಡಿ ಕೊನೆಗೂ ಇತ್ತೀಚೆಗೆ ಮಂತ್ರಿಗಿರಿಯನ್ನು ಪಡೆದಿರುವ ಸಿ.ಟಿ. ರವಿ, ಜೀವರಾಜ್ ಮೊದಲಾದವರು ಇನ್ನೂ ಮೂರ್‍ನಾಲ್ಕು ತಿಂಗಳ ಕಾಲ ಕೆಂಪುದೀಪದ ಗೂಟದ ಕಾರಿನಲ್ಲಿ ಹಾಯಾಗಿ ತಿರುಗಾಡುವ ಕನಸು ಕಾಣುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಿಧಾನಸಭೆಯ ವಿಸರ್ಜನೆಯ ಸಲಹೆ ಅವರೆಲ್ಲರಿಗೆ ಹೇಗೆ ಇಷ್ಟವಾದೀತು ಹೇಳಿ?





ಇದೆಲ್ಲದರ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ನಾಯಕರು ತಮ್ಮ ಹೈಕಮಾಂಡ್‌ಗೇ ಒಂದು ಮರು ಸಲಹೆಯನ್ನು ನೀಡಿದ್ದಾರೆ. ಅದೇನೆಂದರೆ "ಹಾವೇರಿ ಸಮಾವೇಶಕ್ಕೆ ಯಡಿಯೂರಪ್ಪನವರ ಹಿಂಬಾಲಕ ಶಾಸಕರು ಎಷ್ಟು ಜನ ಹೋಗುತ್ತಾರೆ ಎಂದು ನೋಡೋಣ. ಒಂದು ವೇಳೆ ಎರಡು ಡಜನ್‌ಗಿಂತಲೂ ಹೆಚ್ಚು ಶಾಸಕರು ಆ ಸಮಾವೇಶಕ್ಕೆ ಹಾಜರಾದರೆ ನೀವು ಹೇಳಿದಂತೆ ಅವರನ್ನೆಲ್ಲ ಪಕ್ಷದಿಂದ ಉಚ್ಚಾಟನೆ ಮಾಡಿ, ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಹೋಗುವ ದಿಟ್ಟ ಕ್ರಮವನ್ನು ಕೈಗೊಳ್ಳೋಣ. ಅಕಸ್ಮಾತ್ ಕೇವಲ ಬೆರಳೆಣಿಕೆಯಷ್ಟು ಶಾಸಕರು ಹಾವೇರಿ ಸಮಾವೇಶಕ್ಕೆ ಹಾಜರಾದರೆ, ಅವರೆಲ್ಲರಿಗೆ ಶೋಕಾಸ್ ನೋಟಿಸ್ ಕೊಡೋಣ" ಎಂದು ಹೇಳಿದ್ದಾರಂತೆ. ಇದಕ್ಕೆ ಈಶ್ವರಪ್ಪನವರೂ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ.

ಇದು ಬಿಜೆಪಿ ಒಳಗಿನ ಬಿಕ್ಕಟ್ಟಾದರೆ ಯಡಿಯೂರಪ್ಪ ಕೂಡ ಇನ್ನೊಂದು ರೀತಿಯ ಗೊಂದಲದಲ್ಲಿ ಸಿಲುಕಿಕೊಂಡಿದ್ದಾರೆ. ಈ ಹಿಂದೆ ಅವರು ಸದಾನಂದ ಗೌಡ ಮತ್ತು ಜಗದೀಶ್ ಶೆಟ್ಟರ್ ಅವರುಗಳನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಏರಿಸಿದ ಸಂದರ್ಭಗಳಲ್ಲಿ ಅವರ ಜೊತೆ ಸುಮಾರು 67 ಜನ ಶಾಸಕರಿದ್ದದ್ದು ಸಾಬೀತಾಗಿತ್ತು. ಆದರೆ ಈಗ ಅವರೊಂದಿಗೆ ಅಷ್ಟು ಜನ ಶಾಸಕರಿಲ್ಲ ಎಂಬುದು ಗುಟ್ಟಾಗಿ ಉಳಿದಿಲ್ಲ. ಮಾತ್ರವಲ್ಲ ಬರಲಿರುವ ಹಾವೇರಿ ಸಮಾವೇಶಕ್ಕೆ ದೊಡ್ಡ ಸಂಖ್ಯೆಯಲ್ಲಿ ಶಾಸಕರು ಭಾಗವಹಿಸುವುದಿಲ್ಲ ಎಂಬುದೂ ಯಡ್ಡಿಗೆ ಸ್ಪಷ್ಟವಾಗಿದೆ. ಹೆಚ್ಚೆಂದರೆ 25 ಜನ ಶಾಸಕರು ಅವರಿಗೆ ಹಾವೇರಿಯಲ್ಲಿ 'ಜೈ' ಎನ್ನಬಹುದು ಎಂಬ ನಿರೀಕ್ಷೆ ಇದೆ. ಯಾಕೆಂದರೆ ಇಲ್ಲಿಯವರೆಗೂ ಒಂದಿಬ್ಬರು ಶಾಸಕರು ಮತ್ತು ಮಂತ್ರಿಗಳನ್ನು ಹೊರತುಪಡಿಸಿದರೆ ಬೇರೆ ಯಾರೂ ಯಡ್ಡಿಯ ಕೆಜೆಪಿ ಸಮಾವೇಶಕ್ಕೆ ಹೋಗುತ್ತೇನೆ ಎಂದು ಧೈರ್ಯವಾಗಿ ಹೇಳಿಲ್ಲ.

ಒಂದು ವೇಳೆ ಅಧಿಕಾರಕ್ಕೆ ಗಂಟು ಬಿದ್ದು ಶಾಸಕರು ಮತ್ತು ಮಂತ್ರಿಗಳು ಹಾವೇರಿ ಸಮಾವೇಶಕ್ಕೆ ಚಕ್ಕರ್ ಹೊಡೆದರೆ ಖಂಡಿತವಾಗಿಯೂ ಯಡ್ಡಿಗೆ ಮುಖಭಂಗ ವಾಗುತ್ತದೆ. ಹೊಸ ರಾಜಕೀಯ ಪಕ್ಷವನ್ನು ಕಟ್ಟಲು ಹೊರಟಿರುವ ಯಡಿಯೂರಪ್ಪ ಇಂತಹ ಮುಖಭಂಗದಿಂದ ತಪ್ಪಿಸಿಕೊಳ್ಳಲು ಹಾವೇರಿ ಸಮಾವೇಶಕ್ಕೆ ಒಂದೆರಡು ದಿನ ಮೊದಲು "ದಯವಿಟ್ಟು ನೀವ್ಯಾರೂ ಈಗ ಈ ಸಮಾವೇಶಕ್ಕೆ ಬರಬೇಡಿ. ಮುಂದೆ ಚುನಾವಣೆ ಘೋಷಣೆಯಾದಾಗ ನೋಡೋಣ" ಎಂದು ಬಹಿರಂಗ ಸೂಚನೆ ಕೊಡುವ ಸಾಧ್ಯತೆಯಿದೆ ಎಂಬ ಮಾತು ಕೇಳಿಬರುತ್ತಿದೆ.

ಇದರರ್ಥ ಇಷ್ಟೆ. ಇತ್ತ ಯಡಿಯೂರಪ್ಪ ಮತ್ತು ಅತ್ತ ಈಶ್ವರಪ್ಪ ಇಬ್ಬರೂ ತಮ್ಮ ತಮ್ಮ ಬಲಪ್ರದರ್ಶನದ ಇತಿ-ಮಿತಿಯನ್ನು ಅಳೆದು ತೂಗಿ ನೋಡುತ್ತ ದಿನಕ್ಕೊಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ವಿಧಾನಸಭೆಯನ್ನು ವಿಸರ್ಜಿಸುವ ವಿಷಯ ಎರಡೂ ಬಣಗಳಿಗೆ ಇಷ್ಟವಿಲ್ಲ. ಏನೇ ಆದರೂ ಚುನಾವಣೆಯತನಕ ತನ್ನ ಜೀವನದ ಅತ್ಯಂತ ಉನ್ನತ ಹುದ್ದೆಗಳಾದ ಉಪಮುಖ್ಯಮಂತ್ರಿ ಗದ್ದುಗೆ ಮತ್ತು ರಾಜ್ಯಾಧ್ಯಕ್ಷ ಸ್ಥಾನಗಳು ತಂದುಕೊಡುತ್ತಿರುವ ಶಕ್ತಿ ಮತ್ತು ಸೌಲಭ್ಯಗಳನ್ನು ಈ ಸರ್ಕಾರದ ಕೊನೆಯ ಉಸಿರಿನತನಕ ಅನುಭವಿಸಬೇಕೆಂದು ಈಶ್ವರಪ್ಪ ತೀರ್ಮಾನಿಸಿದಂತಿದೆ. ಹಾಗೆಯೇ ಯಡಿಯೂರಪ್ಪ ಕೂಡ ಕೊನೆಯ ಕ್ಷಣದತನಕ ಶೆಟ್ಟರ್ ಸರ್ಕಾರವನ್ನು ಬೀಳಿಸದೆ ತನ್ನ ಹಿಂಬಾಲಕರಿಂದ ತನ್ನ ನೂತನ ಪಕ್ಷವನ್ನು ಕಟ್ಟಲು ಕೈಲಾದಷ್ಟು 'ಸಂಪನ್ಮೂಲ'ಗಳನ್ನು ಸಂಗ್ರಹಿಸುವುದಕ್ಕೆ ಒತ್ತು ಕೊಡುತ್ತಿದ್ದಾರೆ.

ಈ ಎಲ್ಲ ಕಾರಣಗಳಿಂದಾಗಿ ಹಾವೇರಿಯಲ್ಲಿ ಯಡಿಯೂರಪ್ಪನವರು ಬಿಜೆಪಿ ನಾಯಕರ ವಿರುದ್ಧ ಗುಡುಗಿದರೂ, ಶೆಟ್ಟರ್ ವಿರುದ್ಧ ಆರ್ಭಟಿಸಿದರೂ, ತನ್ನದೇ ಜಿಲ್ಲೆಯವರಾದ ಈಶ್ವರಪ್ಪನ ವಿರುದ್ಧ ಗದಾಪ್ರಹಾರ ಮಾಡಿದರೂ ಸದ್ಯಕ್ಕೆ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಬೀಳುವುದಿಲ್ಲ ಎಂಬುದು ರಾಜಕೀಯ ವಲಯದಲ್ಲಿ ಖಾತ್ರಿಯಾಗಿದೆ.

ಸದ್ಯಕ್ಕೆ ಎಲ್ಲರ ಕಣ್ಣು ಹಾವೇರಿಯ ಮೇಲಿದೆ. ಇದೇ ಹಾವೇರಿಯಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಬೀಜ ಮತ್ತು ಗೊಬ್ಬರ ಕೇಳುತ್ತಿದ್ದ ಅಸಹಾಯಕ ರೈತರ ಮೇಲೆ ಗುಂಡಿನ ಸುರಿಮಳೆ ಹರಿಸಿ ಇಬ್ಬರ ಪ್ರಾಣವನ್ನೇ ತೆಗೆದುಕೊಂಡಿತ್ತು. ಈಗ ಅದೇ ಹಾವೇರಿಯಲ್ಲಿ ಯಡಿಯೂರಪ್ಪ ತಾವೇ ಕಟ್ಟಿ ಬೆಳೆಸಿದ ಬಿಜೆಪಿಯ ಮೇಲೆ ತಮ್ಮ ಮಾತಿನ 'ಗುಂಡಿನ ದಾಳಿ' ನಡೆಸಿಯಾರೆ ಎಂಬ ಭಯ ಬಿಜೆಪಿ ವಲಯದಲ್ಲಿ ದಟ್ಟವಾಗಿ ಹಬ್ಬಿದೆ.

• ತೇಜ್ಯ

ಹಾವೇರಿಯನ್ನು ಆಯ್ಕೆ ಮಾಡಿದ್ದು ಯಾಕೆ?

ಯಡಿಯೂರಪ್ಪ ಯಾಕೆ ತಮ್ಮ ನೂತನ ಪಕ್ಷವಾದ ಕರ್ನಾಟಕ ಜನತಾ ಪಕ್ಷದ ಮೊದಲ ಸಮಾವೇಶವನ್ನು ಹಾವೇರಿಯಲ್ಲಿ ಏರ್ಪಡಿಸಿದ್ದಾರೆ ಎಂಬ ಪ್ರಶ್ನೆ ಹಲವರನ್ನು ಕಾಡಿದ್ದು ನಿಜ. ಅಷ್ಟೇ ಅಲ್ಲ, "ಹಾವೇರಿಯಲ್ಲಿ ರೈತರ ಮೇಲೆ ಗುಂಡನ್ನು ಹಾರಿಸಿದ್ದ ಯಡಿಯೂರಪ್ಪನವರು ಈಗ ಅದೇ ನೆಲದಲ್ಲಿ ತಮ್ಮ ಹೊಸ ಪಕ್ಷವನ್ನು ಪ್ರಾರಂಭಿಸುತ್ತಿರುವುದು ತಮಾಷೆಯಾಗಿ ಕಾಣಿಸುತ್ತಿದೆ" ಎಂದು ಮಾಜಿ ಮುಖ್ಯಮಂತ್ರಿ ಜಾತ್ಯತೀತ ಜನತಾ ದಳದ ನಾಯಕ ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ. ವಾಸ್ತವವಾಗಿ, ಹಾವೇರಿಯನ್ನೇ ಯಡಿಯೂರಪ್ಪ ಆಯ್ಕೆ ಮಾಡಲು ಒಂದು ಮುಖ್ಯ ಕಾರಣ ಇದೆ. ಅದು ಅವರ ಕಟ್ಟಾ ಬೆಂಬಲಿಗ ಉದಾಸಿಯವರು ಈ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದು. ಈಗಾಗಲೇ ತಾನು ಯಡಿಯೂರಪ್ಪನವರ ಪಕ್ಷ ಸೇರುತ್ತೇನೆಂದು ಉದಾಸಿ ಬಹಿರಂಗವಾಗಿ ಘೋಷಿಸಿದ್ದಾರೆ.

ಆರಂಭದಲ್ಲಿ ಈ ಸಮಾವೇಶವನ್ನು ದಾವಣಗೆರೆಯಲ್ಲಿ ನಡೆಸಬೇಕೆಂದು ಯಡ್ಡಿ ಆಲೋಚಿಸಿದ್ದರು. ಯಾಕೆಂದರೆ ಅಕ್ಕಪಕ್ಕದ ಜಿಲ್ಲೆಗಳಿಂದಲೂ ಜನರು ಬರುವುದಕ್ಕೆ ದಾವಣಗೆರೆ ಸೂಕ್ತವಾಗಿತ್ತು. ಅಷ್ಟೇ ಅಲ್ಲ, ದಾವಣಗೆರೆಯಲ್ಲಿ ಬಹಳ ದೊಡ್ಡ ಕ್ರೀಡಾಂಗಣವಿರುವುದರಿಂದ ಭಾರಿ ಜನಸ್ತೋಮವನ್ನು ಸೇರಿಸಲು ಕೂಡ ಅಲ್ಲಿ ಅವಕಾಶವಿತ್ತು. ಆದರೆ ಆ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ರವೀಂದ್ರನಾಥ್ ಯಡ್ಡಿಯ ವಿರೋಧಿ ಬಣದಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ರವೀಂದ್ರನಾಥ್ ಮಾತ್ರವಲ್ಲ ಯಡ್ಡಿಯ ಸದ್ಯದ ಪ್ರಮುಖ ವೈರಿಗಳಲ್ಲಿ ಒಬ್ಬರಾದ ಈಶ್ವರಪ್ಪ ಮುಖಾಂತರ ಈ ಸಮಾವೇಶಕ್ಕೆ ಅಡ್ಡಿ-ಆತಂಕಗಳನ್ನು ಉಂಟುಮಾಡಬಹುದು ಎಂಬ ಆಂಜಿಕೆಯೂ ಯಡ್ಡಿಗೆ ಇತ್ತು. ಆ ಕಾರಣಕ್ಕೆ ಅವರು ಕೊನೆಗೆ ದಾವಣಗೆರೆ ಬದಲು ಹಾವೇರಿಯನ್ನು ಆಯ್ಕೆ ಮಾಡಿದರು.

ಈಗ ಉದಾಸಿ ಮತ್ತು ಅವರ ಪುತ್ರ ಲೋಕಸಭಾ ಸದಸ್ಯ ಶಿವಕುಮಾರ್ ಉದಾಸಿ ಹಾವೇರಿ ಸಮಾವೇಶವನ್ನು ಯಶಸ್ವಿಯಾಗಿ ನೆರವೇರಿಸಲು ಯಡ್ಡಿಯ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದಾರೆ.

ಯಾವ ಜಾಗದಲ್ಲಿ ಯಡ್ಡಿ ಅಮಾನುಷವಾಗಿ ರೈತರನ್ನು ಕೊಂದು ಹಾಕಿಸಿದ್ದರೋ ಅದೇ ಜಾಗದಿಂದ ಇವತ್ತು ತಮ್ಮ ರಾಜಕೀಯ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಜ್ಜಾಗಿರುವುದು ಈ ರಾಜ್ಯದ ರಾಜಕೀಯ ದುರಂತವಲ್ಲದೆ ಮತ್ತಿನ್ನೇನು?

ವೀರಪ್ಪನ್ ಪತ್ನಿ ಮುತ್ತುಲಕ್ಷ್ಮಿಯ ಆಕ್ರೋಶ

'ಅಟ್ಟಹಾಸ'ದ ವಿರುದ್ಧ ಬೀದಿಗಿಳಿತೀನಿ...!



ರಮೇಶ್

ವರನಟ ರಾಜ್ ಅಪಹರಣದ 'ಅಟ್ಟಹಾಸ' ಎಂಬ ಸಿನಿಮಾ ಇನ್ನೇನು ಬಿಡುಗಡೆಗೆ ಸಜ್ಜಾದ ಸುದ್ದಿ ಜೋರಾಗುತ್ತಿದ್ದಂತೆಯೇ ನರಹಂತಕ ವೀರಪ್ಪನ್ ಪತ್ನಿ ಮುತ್ತುಲಕ್ಷ್ಮಿಯ ಆಕ್ರೋಶ ಮತ್ತು ಚೀರಾಟವೂ ಉಲ್ಬಣಿಸುತ್ತಿದೆ. ಮೊನ್ನೆಯಷ್ಟೇ ಬೆಂಗಳೂರಿಗೆ ಬಂದಿದ್ದ ಆಕೆಯನ್ನು ಪತ್ರಿಕೆ ಮಾತಾಡಿಸಲು ಹೋದರೆ ಬಾಯಿತುಂಬ ಅದೇ ಬೊಬ್ಬೆ. ಅಟ್ಟಹಾಸ ಬಿಡುಗಡೆಯಾದರೆ ತಾನು ಸಮಾಜದಲ್ಲಿ ತಲೆಯೆತ್ತಿ ನಡೆಯಲಾಗದೆಂಬ ಆಕೆಯ ಆತಂಕ, ಅತ್ತ ಚೆನ್ನೈ ಹೈಕೋರ್ಟಿನಲ್ಲಿ ಅಟ್ಟಹಾಸದ ನಿರ್ದೇಶಕ ಎ.ಎಮ್.ಆರ್. ರಮೇಶ್ ವಿರುದ್ಧ ಆಕೆ ಹಾಕಿದ ಕೇಸು ಮತ್ತು ಆಕೆಯ ಬೆನ್ನಿಗಿರುವ ತಮಿಳು ಸಂಘಟನೆಗಳ ಯುದ್ಧೋನ್ಮಾದದ ಹಿಂದೆ ಬೇರೆಯದೇ ಉದ್ದೇಶವಿದೆಯೇ?

ವೀರಪ್ಪನ್ ಕುರಿತಂತೆ ಈಗಾಗಲೇ ಹಲವಾರು ಟೀವಿಗಳು ಧಾರಾವಾಹಿ ಬಿತ್ತರಿಸಿವೆ. ಇಂಗ್ಲಿಷಿನ ಇಂಡಿಯಾ ಟುಡೆಯಿಂದ ಹಿಡಿದು ಕನ್ನಡದ ಬಹುತೇಕ ಪತ್ರಿಕೆಗಳು ವೀರಪ್ಪನ್ ಕುರಿತಂತೆ ಟನ್ನುಗಟ್ಟಲೆ ಬರೆದಾಗಿದೆ. ಇಂಥಾದ್ದರಲ್ಲಿ ಈಗ ಅಟ್ಟಹಾಸ ಎಂಬ ಚಿತ್ರ ಬಿಡುಗಡೆಯಾದಾಕ್ಷಣ ಮುತ್ತುಲಕ್ಷ್ಮಿ ಏಕೆ ಈಪಾಟ ಬೊಬ್ಬೆ ಹಾಕಬೇಕು? ನಿಜಕ್ಕೂ ಮುತ್ತುಲಕ್ಷ್ಮಿಯ ಭವಿಷ್ಯಕ್ಕೆ ಕಂಟಕವಾದ ಯಾವ ಅಂಶ ಎ.ಎಮ್.ಆರ್. ರಮೇಶ್ ನಿರ್ಮಾಣದ 'ಅಟ್ಟಹಾಸ' ಚಿತ್ರದಲ್ಲಿದೆ?

ಇಂಥ ಅನೇಕ ಪ್ರಶ್ನೆಗಳನ್ನು ಹೊತ್ತೇ ಮುತ್ತುಲಕ್ಷ್ಮಿಯನ್ನು ಮಾತಾಡಿಸಲೆತ್ನಿಸಿದ ಪತ್ರಿಕೆಗೆ ನರಹಂತಕನ ಮಡದಿ ತನ್ನದೇ ಧಾಟಿಯಲ್ಲಿ ಅಳಲು ತೋಡಿಕೊಂಡಿದ್ದಾಳೆ. ಎಸ್‌ಟಿಎಫ್ ದೌರ್ಜನ್ಯಗಳ ಕುರಿತಂತೆ ನ್ಯಾಯಮೂರ್ತಿ ಸದಾಶಿವ ಆಯೋಗದೆದುರು ಸಂತ್ರಸ್ತರ ಪರವಹಿಸಿ ವಾದ ಮಂಡಿಸಿದ ಬೆಂಗಳೂರಿನ ವಕೀಲ ದೇವದಾಸ್ ಮತ್ತು ಕನ್ನಡ ತಮಿಳು ಫೆಡರೇಷನ್ನಿನ ನಾಯಕ ಮಣಿವಣ್ಣನ್ ಜೊತೆ ಈ ವರದಿಗಾರನ ಮನೆಗೇ ಬಂದ ಮುತ್ತುಲಕ್ಷ್ಮಿ ಕಿಡಿಕಾರಿದ್ದು ಚಿತ್ರ ನಿರ್ದೇಶಕ ರಮೇಶ್ ವಿರುದ್ಧ.

ಸಾರ್, ನಾನೇನೂ ವೀರಪ್ಪನ್ ಪರವಹಿಸಿಯಾಗಲಿ ನಡಿಗರ್ ರಾಜ್‌ಕುಮಾರ್ ವಿರುದ್ಧವಾಗಲಿ ಮಾತಾಡುತ್ತಿಲ್ಲ, ಕನ್ನಡಿಗರ ಬಗ್ಗೆಯೂ ನನಗೇನೂ ತಕರಾರಿಲ್ಲ. ನನಗೆ ನೋವಿರುವುದು ಎ.ಎಮ್.ಆರ್. ರಮೇಶನ ದುರಾಶೆ ಮತ್ತು ದುಡ್ಡಿನ ದಾಹಕ್ಕೆ. ಆತ ನನಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದರೆ ಈ ರೀತಿ ನಾನು ಬೀದಿಗಿಳಿಯುವ ಅಗತ್ಯವೇ ಇರಲಿಲ್ಲ. ಪಾರಂಗೋ ಸಾರ್! ('ನೋಡಿ...) ಕರ್ನಾಟಕದ ಜನ ಈ ಚಿತ್ರದ ಹೆಸರನ್ನು ಅಟ್ಟಹಾಸ ಅಂತಲೇ ಭಾವಿಸಿಕೊಂಡಿದ್ದರೆ ಅದು ತಪ್ಪು, ಇದೇ ಚಿತ್ರಕ್ಕೆ ತಮಿಳಿನಲ್ಲಿ ಏನು ಹೆಸರಿಟ್ಟಿದ್ದಾರೆ ಗೊತ್ತೆ?

■ ರಾ. ಸೋಮನಾಥ್

ವನಯುದ್ಧಂ!

ವನಯುದ್ಧಂ ಅಂದರೆ ಕಾಡಿನಲ್ಲಿ ನಡೆಸುವ ಯುದ್ಧ ಎಂದರ್ಥ. ಅಂದರೆ ಕರ್ನಾಟಕದ ಜನ ಯಾವುದನ್ನು ವೀರಪ್ಪನ್ ಅಟ್ಟಹಾಸ ಎಂದು ಭಾವಿಸುತ್ತಾರೋ. ತಮಿಳುನಾಡಿನ ಜನರ ಪಾಲಿಗದು ವನಯುದ್ಧಂ. ನೋಡಿದ್ರಾ; ಒಂದೇ ಸಿನಿಮಾದ ಮೂಲಕ ಎರಡು ಭಾಷೆಯ ಜನರನ್ನು ಯಾವ ರೀತಿ ವಂಚಿಸುತ್ತಿದ್ದಾರೆ ಅಂತ? ಇದು ಆತನ ವ್ಯಾಪಾರಿ ಬುದ್ಧಿಗೆ ಒಂದು ಉದಾಹರಣೆ ಮಾತ್ರ.

ಈ ಬಗ್ಗೆ ನಾನು ಈಗಾಗಲೇ ಚೆನ್ನೈ ಕೋರ್ಟಿನಲ್ಲಿ ಕೇಸು ದಾಖಲಿಸಿದ್ದೇನೆ. ಕೆಳ ನ್ಯಾಯಾಲಯ ಕೊಟ್ಟ ತಡೆಯಾಜ್ಞೆಗೆ ಚೆನ್ನೈ ಹೈಕೋರ್ಟು ತಡೆ ನೀಡಿದೆ. ಕೋರ್ಟ್ ಆದೇಶದ ಪ್ರಕಾರವೇ ನಮ್ಮ ವಕೀಲರಾದ ಮನೋಹರನ್, ನನ್ನ ಅಕ್ಕನ ಮಗ ಕನಕರಾಜ್, ಬೆಂಗಳೂರಿನ ವಕೀಲರಾದ ಬಿ.ಎಸ್.ದೇವದಾಸ್ ಮತ್ತು ಕನ್ನಡ ತಮಿಳ್ ಫೆಡರೇಷನ್ನಿನ ಅಧ್ಯಕ್ಷ ಮಣಿವಣ್ಣನ್ ಜೊತೆ ಸೇರಿಕೊಂಡು ನಾನೂ ಸಿನಿಮಾ ನೋಡಿದ್ದೇನೆ. ಇದು ಶುದ್ಧ ಅನ್ಯಾಯದ ಚಿತ್ರ.

"ಹಾಗಿದ್ದರೆ ಸೆನ್ಸಾರ್ ಮಂಡಳಿ ಏಕೆ 'ಯು' ಸರ್ಟಿಫಿಕೇಟ್ ಕೊಡುತ್ತಿತ್ತು? ಹೇಗೆ ಇದನ್ನು ಅನ್ಯಾಯ ಎನ್ನುತ್ತೀರಾ?" ಕೇಳಿತು ಪತ್ರಿಕೆ.

'ನೋಡಿ ಸಾರ್, ಆವತ್ತು ನಡಿಗರ್ ರಾಜ್‌ಕುಮಾರ್ ಕಿಡ್ನಾಪ್ ಆಗಿತ್ತಲ್ಲಾ. ತಮಿಳು ಹೋರಾಟಗಾರರಾದ ನೆಡುಮಾರನ್ ಮಧುರೈನಲ್ಲಿ ರಾಜ್‌ಕುಮಾರ್ ಅಪಹರಣಕ್ಕೆ ಸಂಬಂಧಪಟ್ಟಂತೆ ತಮಿಳರ ಬೇಡಿಕೆಗಳೇನು ಎಂಬ ಬಗ್ಗೆ ಸಮಾವೇಶವೊಂದನ್ನು ಹಮ್ಮಿಕೊಂಡಿದ್ದರು. ಆ ಸಭೆಯಲ್ಲಿ ನಾನೂ ಭಾಗವಹಿಸಿದ್ದೆ ಅಲ್ಲಿಗೆ ಎ.ಎಮ್.ಆರ್. ರಮೇಶ್ ಕೂಡ ಬಂದಿದ್ದರು. ತಮಿಳಿನಲ್ಲೇ ಮಾತಾಡಿದ್ದರು. ನಾನು ಬೆಂಗಳೂರಿನ ತಮಿಳರಿರಬೇಕು ಎಂದುಕೊಂಡೆ. ಏನೋ ಅಭಿಮಾನದಿಂದ ಯೋಗಕ್ಷೇಮ ವಿಚಾರಿಸುತ್ತಿರಬೇಕು ಎಂದುಕೊಂಡೆ. ಆವತ್ತು ರಮೇಶ್ ನನ್ನ ಜೊತೆ ನಿಂತು ಫೋಟೋ ಬೇರೆ ತೆಗೆಸಿಕೊಂಡರು. ಈತ ಕನ್ನಡದವನು ಅನ್ನೋದು ನನಗೆ ಗೊತ್ತಾಗಲೇ ಇಲ್ಲ, ಬಹುಶಃ ಅದು 2007ನೇ ಇಸವಿ ಇರಬೇಕು.

ಇದಾದನಂತರ ರಾಜ್‌ಕುಮಾರ್ ಬಿಡುಗಡೆಯೂ ಆಯ್ತು ನೋಡಿ. ಅದಾಗಿ ಎಷ್ಟೋ ದಿನಗಳ ನಂತರ ಮತ್ತೆ ಇದೇ ರಮೇಶ್ ನನ್ನನ್ನು ಸಂಪರ್ಕಿಸಿದ. ಆಗ ನಾನು ತಮಿಳುನಾಡಿನ ಮೆಟ್ಟೂರು ಪಕ್ಕದ ಆರ್.ಎಸ್.ಪ್ಲಾಂಟ್‌ನಲ್ಲಿ ನನ್ನ ಅಕ್ಕನ ಮನೆಯಲ್ಲಿದ್ದೆ. ಅಲ್ಲಿಗೆ ರಾಜೀವ್ ಗಾಂಧಿ ಕೊಲೆ ಕೇಸಿನಲ್ಲಿದ್ದ ಬೆಂಗಳೂರಿನ ರಂಗನಾಥ್ ಎಂಬಾತನ ಜೊತೆ ಬಂದ ರಮೇಶ್ ನಾನು ವೀರಪ್ಪನ್ ಕುರಿತಂತೆ ಒಂದು ಸಿನಿಮಾ ತೆಗೀಬೇಕು ಅಂತಿದೀನಿ ಎಂದ. ಆ ಹೊತ್ತಿಗಾಗಲೇ ಆತ ತಮಿಳಿನಲ್ಲಿ 'ಕುಪ್ಪಿ' ಎಂಬ ಸಿನಿಮಾ ಮಾಡಿದ್ದ. ರಾಜೀವ್ ಗಾಂಧಿ ಹತ್ಯೆ ಕುರಿತಂತೆ ಶಿವರಸನ್ ಮತ್ತು ಶುಭಾ ಬ... ಚಿತ್ರಿಸಿದ ಆ ಸಿನಿಮಾ ಕನ್ನಡದಲ್ಲಿ 'ಸೈನೈಡ್' ಎಂದು ಬಿಡುಗಡೆಯಾಗಿತ್ತು.



ಮುತ್ತುಲಕ್ಷ್ಮಿ

ನನಗೆ ತಮಿಳಿನ 'ಕುಪ್ಪಿ' ಚಿತ್ರದ ಸಿಡಿಯೊಂದನ್ನು ಕೊಟ್ಟು ನಮ್ಮ ಮನೆಯಲ್ಲೇ ಇದ್ದ ಪ್ಲೇಯರ್‌ನಿಂದ ಅದನ್ನು ಹಾಕಿ ತೋರಿಸಿದ. ಆ ರೀತಿ ಸಿಡಿ ಹಾಕಿ ತೋರಿಸಿದವನು ಅರ್ಧಂಬರ್ಧ ಅದನ್ನು ನೋಡುತ್ತಿದ್ದಂತೆಯೇ ಪ್ಲೇಯರ್‌ನಿಂದ ಕಿತ್ತು ತಾನೇ ವಾಪಸ್ಸು ತೆಗೆದುಕೊಂಡು ಹೋದ. ಹೋಗುವ ಮುನ್ನ ವೀರಪ್ಪನ್ ಕುರಿತಂತೆ ತಾನು ನಿರ್ಮಿಸುತ್ತಿರುವ ಚಿತ್ರಕ್ಕೆ ನೀವೇ ಕತೆ ಬರೆಯಬೇಕು. ಜೊತೆಗೆ ವೀರಪ್ಪನ್ ಪಾತ್ರಧಾರಿಯ ಎದುರು ನೀವೇ ಹೀರೋಯಿನ್ ಆ... ನಟಿಸಬೇಕು ಅಂತಲೂ ಹೇಳಿದ್ದ. ನಾನು ನಂಬಿಬಿಟ್ಟೆ. ವೀರಪ್ಪನ್ ಪಾತ್ರವಹಿಸಿ ಯಾರು ಹೀರೋ ಆಗ್ತಾರೆ ಎಂದು ಕೇಳಿದ್ದಕ್ಕೆ, ತೆಲುಗಿನ ಸೂಪರ್‌ಸ್ಟಾರ್ ಅಕ್ಕಿನೇನಿ ನಾಗಾರ್ಜುನರೇ ಈ ಚಿತ್ರದ ಹೀರೋ. ಅವರೆದುರು ನೀವೇ ಹೀರೋಯಿನ್ ಆಗಿ ನಟಿಸಿದರೆ ನ್ಯಾಚುರಲ್ಲಾಗಿರು... ಆದರೆ ಸ್ಟೋರಿಗೆ ಮಾತ್ರ ನಾನು ನಯಾ ಪೈಸೆ ಕೊಡಲಾ...



ಸಿನಿಮಾದ ಒಂದು ದೃಶ್ಯ

ಇಷ್ಟೆಲ್ಲ ದೃಶ್ಯಗಳನ್ನು ಕತ್ತರಿಸಿಬಿಟ್ಟರೆ ಕೊನೆಗೆ ಉಳಿಯುವುದು ಟೈಟಲ್ ಕಾರ್ಡ್ ಮಾತ್ರ!

ಅಟ್ಟಹಾಸ ಮತ್ತು ತಮಿಳಿನ ವನಯುದ್ಧಂ ಚಿತ್ರಗಳನ್ನು ಕುರಿತಂತೆ ವೀರಪ್ಪನ್ ಪತ್ನಿ ಮುತ್ತುಲಕ್ಷ್ಮಿ ವ್ಯಕ್ತಪಡಿಸಿದ ಆಕ್ಷೇಪಣೆಗಳದ್ದೇ ದೊಡ್ಡಪಟ್ಟಿಯಿದೆ. ಹಾಗೊಮ್ಮೆ ಕೋರ್ಟು ಈ ಎಲ್ಲಾ ದೃಶ್ಯಗಳನ್ನು ಕತ್ತರಿಸುವಂತೆ ಆದೇಶ ನೀಡಿತೆಂದರೆ ಇಡೀ ವೀರಪ್ಪನ್ ಕತೆಯೇ ಮಸಾಲೆಯಿಲ್ಲದ ಬೂಸಾದಂತಾಗುತ್ತದೆ.

ಮುತ್ತುಲಕ್ಷ್ಮಿಯ ಪ್ರಕಾರ ಅಟ್ಟಹಾಸದಲ್ಲಿ ವೀರಪ್ಪನ್ ತನ್ನ ಬಾಲ್ಯದಲ್ಲಿ ಗುರು ಸೇವಿಗೌಂಡರ್‌ನ ಜೊತೆ ಕಾಡಿನಲ್ಲಿ ಬೇಟೆಗೆ ಹೋಗುತ್ತಾ ಓರ್ವ ಬೇಟೆಗಾರನಾಗಿ ಬೆಳೆಯುವುದೇ ಶುದ್ಧ ಸುಳ್ಳು. ಪ್ರಾಣಿಹಂತಕ ಮತ್ತು ಕಾಡುಗಳ್ಳ ಸೇವಿಗೌಂಡರ್‌ಗೂ ವೀರಪ್ಪನ್‌ಗೂ ಇದ್ದ ನಂಟಿಗೆ ಯಾವುದೇ ಸಾಕ್ಷ್ಯಾಧಾರವಿಲ್ಲವಂತೆ!

ಶುರುವಿನಲ್ಲಿ ತನ್ನ ಸಂಬಂಧಿಗಳಾದ ಮಾದಯ್ಯ ಮತ್ತು ತಂಗವೇಲು ಎಂಬಿಬ್ಬರನ್ನು ಅಮಾನುಷವಾಗಿ ಕೊಲ್ಲುವ ವೀರಪ್ಪನ್ ಅವರಿಬ್ಬರ ಹೆಣಗಳನ್ನು ತುಂಡುತುಂಡಾಗಿ ಕತ್ತರಿಸಿ ಪಾಲಾರ್ ನದಿಯ ಮೀನುಗಳಿಗೆ ಹಾಕುವ ದೃಶ್ಯವೊಂದು ಅಟ್ಟಹಾಸದಲ್ಲಿದೆ. ಮುತ್ತುಲಕ್ಷ್ಮಿಯ ಪ್ರಕಾರ ಇದು ನಡೆದೇ ಇಲ್ಲವಂತೆ. ಈ ಬಗ್ಗೆ 1986 ರಲ್ಲಿ ಮಲೆಮಾದೇಶ್ವರ ಪೊಲೀಸ್ ಠಾಣೆಯ ಎಫ್‌ಐಆರ್ ನಂ. 46 ರಲ್ಲಿ ಪೊಲೀಸರು ಯಾರನ್ನೂ ಬಂಧಿಸಲಿಲ್ಲ ಮತ್ತು ಮೃತದೇಹಗಳ ಅವಶೇಷಗಳೂ ಸಿಕ್ಕಿಲ್ಲವಾದ್ದರಿಂದ ಇದು ವೀರಪ್ಪನದೇ ಕೃತ್ಯ ಎಂಬ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂಬುದು ಆಕೆಯ ವಾದ.

ಸಂಬಂಧಿಗಳಾದ ಮಾದಯ್ಯ ಮತ್ತು ತಂಗವೇಲು ಹತ್ಯೆಗೆ ಪ್ರತೀಕಾರವಾಗಿ ನರಹಂತಕನ ವಿರುದ್ಧ ತಿರುಗಿಬಿದ್ದ ಐವರು ರಕ್ತಸಂಬಂಧಿಗಳನ್ನು ವೀರಪ್ಪನ್ ಬರ್ಬರವಾಗಿ ಕೊಂದು ಹಾಕಿ ಆ ಐದೂ ಹೆಣಗಳನ್ನು ಸುಟ್ಟುಹಾಕುವ ದೃಶ್ಯವನ್ನೂ ಕತ್ತರಿಸಬೇಕಂತೆ. ಏಕೆಂದರೆ 1989 ರಲ್ಲಿ ವೀರಪ್ಪನ್ ನಡೆಸಿದ ಈ ಮಾರಣಹೋಮದ ಎಫ್‌ಐಆರ್‌ನಲ್ಲಿ ಪೊಲೀಸರು ಯಾರೊಬ್ಬರನ್ನೂ ಬಂಧಿಸದೇ ಇರುವುದರಿಂದ ವಿಚಾರಣೆಯೇ ನಡೆದಿಲ್ಲವಾದ್ದರಿಂದ ಈ ದೃಶ್ಯವನ್ನು ಕತ್ತರಿಸಬೇಕೆಂಬುದು ಆಕೆಯ ವಾದ. ಹಾಗೇ 1991 ರ ಕ್ರೈಮ್ ನಂಬರ್ 16 ರಲ್ಲಿ ವೀರಪ್ಪನ್ ಗಂಧವನ್ನು ಕದಿದು ಆನೆಗಳನ್ನು ಕೊಂದ ಬಗ್ಗೆ ಪೊಲೀಸರು ಯಾರನ್ನೂ ಬಂಧಿಸಿಲ್ಲವಾದ್ದರಿಂದ ಈ ದೃಶ್ಯವನ್ನೂ ಚಿತ್ರದಿಂದ ಕಟ್ ಮಾಡಬೇಕಂತೆ!



1989 ರಲ್ಲಿ ಪಾಲಾರ್ ಸೇತುವೆಯ ಚೆಕ್‌ಪೋಸ್ಟಿಗೆ ಗಾರ್ಡ್ ಆಗಿದ್ದ ಮೋಹನಯ್ಯನನ್ನು ವೀರಪ್ಪನ್ ಕೊಂದು ಹಾಕಿದ ಕ್ರೈಮ್ ನಂ. 33 ರಲ್ಲಿ ಪೊಲೀಸರು ಯಾರನ್ನೂ ಬಂಧಿಸಿಲ್ಲವಾದ್ದರಿಂದ ಈ ಪ್ರಕರಣದಲ್ಲಿ ಯಾರಿಗೂ ಶಿಕ್ಷೆಯಾಗಿಲ್ಲ ಎಂಬ ಒಂದೇ ಕಾರಣಕ್ಕೆ ಆ ದೃಶ್ಯವನ್ನೂ ಕೈಬಿಡಬೇಕಂತೆ. ಹಾಗೆ ತನ್ನ ಮತ್ತು ವೀರಪ್ಪನ್‌ನ ಮದುವೆಯ ದೃಶ್ಯಾವಳಿಗಳು ಆನಂತರ ಕಾಡಿನಲ್ಲಿ ತನ್ನದೇ ಹಸುಗೂಸನ್ನು ವೀರಪ್ಪನ್ ಕೊಂದು ಹಾಕುವ ದೃಶ್ಯಗಳನ್ನು ತೆಗೆಯಬೇಕಂತೆ. ಇದರಿಂದಾಗಿ ತನ್ನ ಘನತೆಗೆ ಧಕ್ಕೆ ಬರುತ್ತದೆಯೆಂಬುದು ಆಕೆಯವಾದ.

ಮುತ್ತುಲಕ್ಷ್ಮಿಯ ತಕರಾರುಗಳು ಇಷ್ಟಕ್ಕೇ ಮುಗಿಯುವುದಿಲ್ಲ, ಅರಣ್ಯಾಧಿಕಾರಿ ಡಿಎಫ್‌ಒ ಶ್ರೀನಿವಾಸ್‌ರನ್ನು ವೀರಪ್ಪನೇ ಕೊಂದ ಎಂಬ ಬಗ್ಗೆಯೂ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಈ ಬಗ್ಗೆ 28.8.2010 ರಂದು ಕೋರ್ಟು ಸಾಕ್ಷ್ಯಾಧಾರಗಳ ಕೊರತೆಯ ಆಧಾರದ ಮೇಲೆ ಪ್ರಕರಣವನ್ನು ಕೈಬಿಡುವಂತೆ ಆದೇಶಿಸಿದ್ದರಿಂದ ವೀರಪ್ಪನೇ ಡಿಎಫ್‌ಓ ಶ್ರೀನಿವಾಸ್‌ರನ್ನು ಕೊಂದರೆಂಬ ದೃಶ್ಯವನ್ನು ಕೈಬಿಡಬೇಕಂತೆ!

ತನ್ನ ನೆಚ್ಚಿನ ಬಂಟ ಗುರುನಾಥನ್ ಹತ್ಯೆಗೆ ಪ್ರತೀಕಾರವಾಗಿ ವೀರಪ್ಪನ್ ರಾಮಾಪುರ ಪೊಲೀಸ್ ಠಾಣೆಯ ಮೇಲೆ ನಡೆಸಿದ ದಾಳಿಯ ದೃಶ್ಯ, ಅದಕ್ಕೂ ಮುನ್ನ ಗುರುನಾಥನ್ ಯಾರೋ ಲಂಬಾಣಿ ಹುಡುಗಿಯನ್ನು ಹಾರಿಸಿಕೊಂಡು ಬರುವ ದೃಶ್ಯಾವಳಿ, ಎಸ್.ಪಿ. ಹರಿಕೃಷ್ಣರನ್ನು ಮತ್ತು ಇನ್ಸ್‌ಪೆಕ್ಟರ್ ಶಕೀಲ್ ಅಹ್ಮದ್‌ರನ್ನು ವೀರಪ್ಪನ್ ಕೊಲ್ಲುವ ಸೀನು, ಹಿರಿಯ ಪೊಲೀಸ್ ಅಧಿಕಾರಿ ಗೋಪಾಲ್ ಹೊಸೂರ್ ಮೇಲೆ ವೀರಪ್ಪನ್ ಮಾಡುವ ಅಟ್ಯಾಕ್, ಅವರ ಜೊತೆಗಿದ್ದ ಪೊಲೀಸರನ್ನು ಕೊಲ್ಲುವ ದೃಶ್ಯ, ಎಸ್‌ಟಿಎಫ್ ಪೊಲೀಸರ ಕೈಯಿಂದ ತಪ್ಪಿಸಿಕೊಂಡು ಬಂದ ಮುತ್ತುಲಕ್ಷ್ಮಿಯನ್ನು ಚಾಮರಾಜನಗರ ಕಾಡಿನ ಪುಣಜೂನೂರಿನ ಹಳ್ಳಿ ಹುಡುಗರು ಪೊಲೀಸರಿಗೆ ಹಿಡಕೊಟ್ಟರೆಂದು ವೀರಪ್ಪನ್ ಪುಣಜನೂರಿನ ಮುಖ್ಯಸ್ಥ ಮುತ್ತೇಗೌಡನ ಇಡೀ ಕುಟುಂಬವನ್ನೇ ಗುಂಡಿಟ್ಟು ಕೊಲ್ಲುವ ದೃಶ್ಯ, ಮಂತ್ರಿ ನಾಗಪ್ಪನವರನ್ನು ವೀರಪ್ಪನ್ ಕೊಲ್ಲುವ ದೃಶ್ಯ ಅಂತಿಮವಾಗಿ ವೀರಪ್ಪನ್ ಗ್ಯಾಂಗನ್ನು ತಮಿಳುನಾಡು ಪೊಲೀಸರು ಎನ್‌ಕೌಂಟರ್ ಮಾಡಿ ಮುಗಿಸುವ ದೃಶ್ಯಾವಳಿಗಳನ್ನೆಲ್ಲ ಕತ್ತರಿಸಲೇಬೇಕಂತೆ.

ಇಷ್ಟೆಲ್ಲಕೂ ಆಕೆ ಕೊಡುವ ಕಾರಣವೇನೆಂದರೆ ಈ ಯಾವ ಪ್ರಕರಣದಲ್ಲೂ ಪೊಲೀಸರು ಯಾರನ್ನೂ ಬಂಧಿಸಿಲ್ಲ ಮತ್ತು ಯಾರಿಗೂ ಶಿಕ್ಷೆಯಾಗಿಲ್ಲ, ಹೀಗೆ ಪೊಲೀಸ್ ಮಾಹಿತಿಯನ್ನೇ ಆಧರಿಸಿ ಸಿನಿಮಾ ಮಾಡಿಬಿಟ್ಟರೆ ತನ್ನನ್ನು ಎರಡು ವರ್ಷಗಳ ಕಾಲ ಎಸ್‌ಟಿಎಫ್ ಕ್ಯಾಂಪಿನಲ್ಲಿ ಬಂಧಿಸಿಟ್ಟು ಚಿತ್ರಹಿಂಸೆ ನೀಡಿದ್ದರಿಂದಲೇ ಸಿಟ್ಟಿಗೆದ್ದು ವೀರಪ್ಪನ್ ಪುಣಜನೂರಿನ ಮೇಲೆ ದಾಳಿ ನಡೆಸಿದನೇ ಹೊರತು ಗ್ರಾಮಸ್ಥರ ಮೇಲಿನ ಜಿದ್ದಿನಿಂದಿಲ್ಲ ಎಂಬುದು ಆಕೆಯ ವಾದ.

ಹಾಗಂತ ಆಕೆ ಹೇಳಿದ ಎಲ್ಲಾ ದೃಶ್ಯಗಳನ್ನು ಕತ್ತರಿಸಿಬಿಟ್ಟರೆ ಇಡೀ ಚಿತ್ರವನ್ನೇ ಕಸದಬುಟ್ಟಿಗೆಸೆಯಬೇಕು. ಇಷ್ಟೆಲ್ಲ ಹಣ ಸುರಿದು ಮಾಡಿದ ಚಿತ್ರವನ್ನೇ ಆಕೆ ನೀಡುವ ಕಾರಣಗಳಿಗಾಗಿ ಕತ್ತರಿಸುತ್ತಾ ಹೋದರೆ ಬಹುಶಃ ಕೊನೆಗುಳಿಯುವುದು ಟೈಟಲ್ ಕಾರ್ಡ್ ಮಾತ್ರವೇ!

ಕೋರ್ಟು ಏನು ಮಾಡುತ್ತೋ ಕಾದುನೋಡಬೇಕು!



ಕಾಡಿನಲ್ಲಿ ವೀರಪ್ಪನ್ ಮತ್ತು ರಾಜ್‌ಕುಮಾರ್

[illegible]

ಕನ್ನಡದಲ್ಲಿ ಮಾತ್ರ ಅಟ್ಟಹಾಸ ಎಂಬ ಹೆಸರಿಟ್ಟು ತಮಿಳಿನಲ್ಲಿ ಏಕೆ ವನಯುದ್ಧಂ ಎಂದು ಹೆಸರಿಟ್ಟಿದ್ದಾರೆ ಗೊತ್ತೆ? ಚಿತ್ರ ಅಲ್ಲೂ ದುಡ್ಡು ಮಾಡಬೇಕು ಇಲ್ಲೂ ಓಡಬೇಕೆಂದರೆ ಎರಡೂ ಕಡೆ ವೀರಪ್ಪನ್‌ನನ್ನು ಹೀರೋ ಮಾಡುವಂತಿಲ್ಲ, ಹಾಗೆ ತಮಿಳಿನಲ್ಲಿ ನಡಿಗರ್ ರಾಜ್‌ಕುಮಾರ್‌ರನ್ನು ಒಳ್ಳೆಯದಾಗಿ ತೋರಿಸುವಂತಿಲ್ಲ. ತಮಿಳಿನ ವನಯುದ್ಧಂನಲ್ಲಿ ನಡಿಗರ್ ರಾಜ್‌ಕುಮಾರ್‌ರನ್ನು ತಮಿಳರ ವಿರೋಧಿ ಎಂಬಂತೆ ಚಿತ್ರಿಸಲಾಗಿದೆ. ಕನ್ನಡದ ಅಟ್ಟಹಾಸದಲ್ಲಿ ನಡಿಗರ್ ರಾಜ್‌ಕುಮಾರ್ ಹೊಡೆಯುವ ಡೈಲಾಗುಗಳನ್ನು ತಮಿಳಿನ ವನಯುದ್ಧಂನಲ್ಲಿ ಕತ್ತರಿಸಲಾಗಿದೆ. ಇದರರ್ಥವೇನು?





ತಮಿಳರು ರಾಜ್‌ಕುಮಾರ್‌ರನ್ನು ಇನ್ನಷ್ಟು ದ್ವೇಷಿಸಬೇಕು ಎಂದೆ? ಏಕೆ ಕರ್ನಾಟಕದ ಎಸ್‌ಟಿಎಫ್ ಅಧಿಕಾರಗಳ ಕಾರ್ಯಾಚರಣೆ ಬಗ್ಗೆ ಈ ಚಿತ್ರದಲ್ಲಿ ಯಾವುದೇ ದೃಶ್ಯಾವಳಿಯಿಲ್ಲ.


ನಡಿಗರ್ ರಾಜ್‌ಕುಮಾರ್ ಕಿಡ್ನಾಪಿಗೆ ಸಂಬಂಧಪಟ್ಟಂತೆ ದಾಖಲಾದ ಕೇಸು ಇವತ್ತಿಗೂ ಮುಗಿದಿಲ್ಲ. ಈ ಬಗ್ಗೆ ಕೋರ್ಟು ಯಾವ ತೀರ್ಪನ್ನೂ ನೀಡಿಲ್ಲ. ಹೀಗಿರುವಾಗ ವೀರಪ್ಪನೇ ರಾಜ್‌ಕುಮಾರ್‌ರನ್ನು ಅಪಹರಿಸಿದಂತೆ ಚಿತ್ರಿಸಿರುವುದು, ರಾಜ್‌ಕುಮಾರ್‌ರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ ಹೇಡಿಯಂತೆ ತಲೆ ಚಚ್ಚಿಕೊಂಡು ಅಳುವುದು, ಜೊತೆಗೆ ರಾಜ್‌ಕುಮಾರ್‌ರ ಮೊಮ್ಮಕ್ಕಳು ಗೋಳಾಡುವ ದೃಶ್ಯಗಳಿಂದಾಗಿ ಸಹಜವಾಗೇ ಕನ್ನಡಿಗರಿಗೆ ತಮಿಳರ ವಿರುದ್ಧ ದ್ವೇಷ ಹುಟ್ಟುತ್ತದೆ.

ಈಗ ಎರಡೂ ರಾಜ್ಯಗಳ ಎರಡೂ ಭಾಷೆಗಳ ಜನರ ಮಧ್ಯೆ ಸೌಹಾರ್ದ ಸಂಬಂಧವಿದೆ. ಹಿಂದಿನ ಕಹಿ ನೆನಪುಗಳನ್ನು ಎರಡೂ ಭಾಷೆಯ ಜನ ಮರೆತಾಗಿದೆ. ಇಂಥ ಪರಿಸ್ಥಿತಿಯಲ್ಲಿ ಮತ್ತೆ ವೀರಪ್ಪನ್ ನಡಿಗರ್ ರಾಜ್‌ಕುಮಾರ್‌ರನ್ನು ಕಿಡ್ನಾಪ್ ಮಾಡಿದ್ದು, ತಮಿಳನ್ನು ಎರಡನೇ ಭಾಷೆ ಮಾಡಿ, ಕಾವೇರಿ ನೀರು ಬಿಡಿ ಎಂದೆಲ್ಲ ಷರತ್ತು ವಿಧಿಸುವ ದೃಶ್ಯಗಳಿಂದಾಗಿ ಎರಡೂ ರಾಜ್ಯಗಳು ಮತ್ತು ಭಾಷಿಕ ಜನರ ಮಧ್ಯೆ ವೈಷಮ್ಯ ಭುಗಿಲೇಳುತ್ತದೆ. ರಾಜ್‌ಕುಮಾರ್ ಮತ್ತು ವೀರಪ್ಪನ್ ಮಧ್ಯೆ ನಡೆಯುವ ವಾದ ಸರಣಿಯಂತೂ ಎರಡೂ ಭಾಷಿಕರಿಗೆ ವಿಪರೀತ ಪ್ರಚೋದನೆಕಾರಿಯಾಗಿದೆ. ಯಾರೋ ತಮಿಳು ಹೋರಾಟಗಾರರ ಮೂಲಕ ರಾಜ್‌ಕುಮಾರ್ ಬಿಡುಗಡೆಯಾಯಿತು ಎಂಬಂತೆ ಚಿತ್ರಿಸಲಾಗಿದೆ. ನಕ್ಕೀರನ್ ಗೋಪಾಲ್‌ರನ್ನು ಎರಡೂ ರಾಜ್ಯಗಳ ರಾಯಭಾರಿಯಂತೆ ತೋರಿಸಲಾಗಿದೆ. ನಕ್ಕೀರನ್ ಗೋಪಾಲ್ ಹೇಗೆ ರಾಯಭಾರಿಯಾಗುತ್ತಾರೆ. ನಡಿಗರ್ ರಾಜ್‌ಕುಮಾರ್ ಮತ್ತು ವೀರಪ್ಪನ್ ಮಧ್ಯೆ ಆ ತರಹದ ಡೈಲಾಗನ್ನು ಸೇರಿಸುವ ಅಗತ್ಯವೇನಿತ್ತು. ಇಂಥ ಗಿಮಿಕ್ಕನ್ನು ನಾನು ಕತ್ತರಿಸುವಂತೆ ಕೇಳಿದ್ದೇನೆ. ಇದರಲ್ಲಿ ನನ್ನದೇನು ತಪ್ಪಿದೆ? ವರನಟ ರಾಜ್ ಕುರಿತಂತೆ ಮುತ್ತುಲಕ್ಷ್ಮಿ ಹೇಳುವ ಮಾತುಗಳಿವು.

ಹೀರೋಯಿನ್ನಾಗಿ ಆ್ಯಕ್ಟ್ ಮಾಡ್ತೀರಲ್ಲ; ಅದಕ್ಕೆ 50 ಸಾವಿರ ರೂಪಾಯಿ ಕೊಡ್ತೀನಿ ಅಂದ.

ಗ ನಾನು ಕತೆ ಬಗ್ಗೆ ಕೇಳಿದೆ. ನನ್ನನ್ನು ಕೇಳದೆ ಕತೆ ಮಾಡ್ತಿಯಾ? ನಿನ್ನಿಷ್ಟ ಬಂದಂಗೆಲ್ಲ ಕತೆ ದ್ರೆ ಅದರಿಂದ ನನ್ನ ಯಜಮಾನರ ಆತ್ಮಕ್ಕೆ ಶಾಂತಿ, ? ನನಗೂ ಅನ್ಯಾಯ ಆಗೋಲ್ವಾ? ಎಂದೆಲ್ಲ . ಅದಕ್ಕೆ ರಮೇಶ್ 'ಇಲ್ಲಮ್ಮಾ, ನೀನು ಒಪ್ಪೋ ಕತೆ ಮಾಡ್ತೀನಿ' ಎಂದೇ ಪ್ರಾಮಿಸ್ ಮಾಡಿದ್ದ. ನನ್ನ ಜೊತೆ ನಿಂತು ಫೋಟೋ ತೆಗೆಸಿಕೊಂಡೇ ದ.

ನನಗೆ ಅಚ್ಚರಿಯೆನಿಸಿದ್ದು ಇದಾಗಿ ಒಂದೇ ವಾರಕ್ಕೆ ಬೆಂಗಳೂರಿಗೆ ಹೋಗಿ ಈ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದಾಗ ವೀರಪ್ಪನ್ ಕುರಿತ ಸಿನಿಮಾದಲ್ಲಿ ಮುತ್ತುಲಕ್ಷ್ಮಿಯೇ



ಹೀರೋಯಿನ್ನಾಗಿ ಆ್ಯಕ್ಟ್ ಮಾಡುತ್ತಿದ್ದಾರೆ ಎಂದು ನನ್ನ ಅನುಮತಿಯಿಲ್ಲದೆ ಆತ ಸುದ್ದಿಕೊಟ್ಟು ಬಿಟ್ಟಿದ್ದ. ಇದು ಪತ್ರಿಕೆಗಳಲ್ಲೂ ಸುದ್ದಿಯಾಗಿತ್ತು. ಇದರಿಂದ ಬೇಸರವಾದ ನಾನು ರಮೇಶ್‌ಗೆ ಫೋನ್ ಮಾಡಿ 'ಏನಪ್ಪಾ ಅನುಮತಿಯಿಲ್ಲದೆ ಈ ರೀತಿ ಮಾಡಿದ್ದೀರಲ್ಲಾ?' ಕೇಳಿದೆ. ಅದಕ್ಕೆ ರಮೇಶ್ 'ಏನೋ ಮಿಸ್ಟೇಕ್ ಇಂಥ ಸುದ್ದಿ ಬಂದುಬಿಟ್ಟಿದೆ. ನನ್ನ ಜೊತೆಗೇ ಇರೋ ನಾನು ಖಾಸಗಿಯಾಗಿ ಹೇಳಿದ್ದನ್ನ ಪತ್ರಿಕೆಗಳು ಮಾಡಿದ್ದಾರೆ. ದಯವಿಟ್ಟು ಕ್ಷಮಿಸಿ. ಇನ್ನು ಮುಂದೆ ರೀತಿ ಆಗದ ಹಾಗೆ ನೋಡಿಕೊಳ್ತೀನಿ...' ಎಂದೆಲ್ಲ ಹೇಳಿದ್ದ.

ಈ ಬಗ್ಗೆ ತಮಿಳಿನ ದಿನತಂತಿ, ದಿನಕರನ್ ಪತ್ರಿಕೆಗಳು ಫೋನ್ ಮಾಡಿ ಕೇಳಿದ್ದಕ್ಕೆ, ನಾನು 'ಅದೆಲ್ಲಾ ಶುದ್ಧ , ನಾನು ಆ ರೀತಿ ಹೇಳೇ ಇಲ್ಲ' ಎಂದು ಹೇಳಿದ್ದೆ. ಇದೂ ಕೂಡ ತಮಿಳು ಪತ್ರಿಕೆಗಳಲ್ಲಿ ಸುದ್ದಿಯಾಗಿತ್ತು. ಇನ್ನು ರಮೇಶ್ ಏನೇನು ತಾಪತ್ರಯ ಮಾಡ್ತಾನೋ ಎಂದು ಆತಂಕಕ್ಕೆ ಬಿದ್ದ ನಾನು ನನ್ನ ವಕೀಲ ಪಿ.ಮೋಹನ್‌ರಿಗೆ ರಮೇಶ್ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ನೋಟಿಸ್ ನೀಡುವುದಕ್ಕೂ ಹೇಳಿದ್ದೆ. ಅಷ್ಟರಲ್ಲೇ ಕರ್ನಾಟಕ ಪೊಲೀಸರು ನನ್ನನ್ನು ಟಾಡಾ ಕೇಸಿನಲ್ಲಿ ಬಂಧಿಸಿಬಿಟ್ಟರು. ಅದು 2008 ರ ನವೆಂಬರ್ ತಾರೀಖು. ಶಾಲಾರ್ ಬ್ರಾಸ್, ಮತ್ತು ಪೊಲೀಸರ ಸಹಕಾರಕ್ಕೆ, ನನ್ನನ್ನೂ ಸಿಲುಕಿಸಿ ಮಲೆ ಮಾದೇಶ್ವರ ಬೆಟ್ಟದ ಪೊಲೀಸ್ ಇನ್‌ಸ್ಪೆಕ್ಟರ್ ಗೋಪಾಲಸ್ವಾಮಿ ನನ್ನನ್ನು ಕೇಸಿನಡಿ ಬಂಧಿಸಿದ್ದೇ ಮೈಸೂರು ಜೈಲಿಗೆ ಕಳುಹಿಸಿದರು.

ನನ್ನ ಪರಿಸ್ಥಿತಿಯೇ ಹೀಗಾದ ಮೇಲೆ ಇನ್ನು ವೀರಪ್ಪನ್ ಕುರಿತು ರಮೇಶ್ ತೆಗೆಯುತ್ತಿದ್ದ ಸಿನಿಮಾ ಬಗ್ಗೆ ಹೇಗೆ ತಾನೆ ತಲೆಕೆಡಿಸಿಕೊಳ್ಳಲಿ? ನಾನು ಜೈಲಲ್ಲಿರುವಾಗಲೇ 'ವನಯುದ್ಧಂ' ಸಿನಿಮಾ ಕುರಿತಂತೆ ಟೀವಿಗಳಲ್ಲಿ ಬರುತ್ತಿದ್ದ ಸುದ್ದಿ ನೋಡುತ್ತಲೇ ಇದ್ದೆ! ಪತ್ರಿಕೆಗಳಲ್ಲೂ ಈ ಬಗ್ಗೆ ವರದಿಗಳಿರುತ್ತಿದ್ದವು. ಜೈಲು ಬಂಧಿಯಾಗಿ ನಾನು ತಾನೇ ಏನು ಮಾಡಲು ಸಾಧ್ಯವಿತ್ತು?

2011 ರ ಏಪ್ರಿಲ್ 26 ರಂದು ನಾನು ಮೈಸೂರು ಜೈಲಿನಿಂದ ಬಿಡುಗಡೆಯಾಗುವ ಹೊತ್ತಿಗೆ ರಮೇಶ್ ಮುಕ್ಕಾಲು ಭಾಗ ಸಿನಿಮಾ ಮುಗಿಸಿಬಿಟ್ಟ. ಅದೇ ಹೊತ್ತಿಗೆ ಪತ್ರಿಕೆಗಳಲ್ಲಿ ಚಿತ್ರದ ಕುರಿತಂತೆ ಜಾಹಿರಾತುಗಳು ಬರಲಾರಂಭಿಸಿದ್ದವು. ಮೊದಲೇ ಪೊಲೀಸರು, ಪತ್ರಿಕೆಗಳು ನಡೆಸುತ್ತಿದ್ದ ಅಪಪ್ರಚಾರ ಬೇರೆ. ಇನ್ನು ಈ ಚಿತ್ರ ಬಿಡುಗಡೆಯಾಗಿಬಿಟ್ಟರೆ ಇನ್ನೇನು ಯಡವಟ್ಟಾಗುತ್ತೋ ಎಂದು ಭೀತಿಗೆ ಬಿದ್ದ ನಾನು ಚೆನ್ನೈ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದೆ. ಕೋರ್ಟು ವಕೀಲ ತಿಪ್ಪೆಸ್ವಾಮಿಯವರನ್ನು 'ಕೋರ್ಟ್ ಕಮೀಶನರ್ ಆಗಿ ನೇಮಿಸಿ' ಅಭಿಪ್ರಾಯ ತಿಳಿಸುವಂತೆ ಆದೇಶಿಸಿತು. ಜೊತೆಗೆ ತಡೆಯಾಜ್ಞೆಯನ್ನೂ ಕೊಟ್ಟಿತ್ತು.

ಆದರೆ ರಮೇಶ್ ಇದರ ವಿರುದ್ಧ ಚೆನ್ನೈ ಹೈಕೋರ್ಟಿಗೆ ಹೋಗಿ ತಡೆ ತೆರವು ಕೋರಿ ಅರ್ಜಿ ಸಲ್ಲಿಸಿಬಿಟ್ಟ. ನೋಡಿ ನಾನೊಬ್ಬ ಅಸಹಾಯಕ ಹೆಣ್ಣು. ಈಗಾಗಲೇ ಸಿಕ್ಕಾಪಟ್ಟೆ ಪೊಲೀಸ್ ದೌರ್ಜನ್ಯಕ್ಕೀಡಾಗಿದ್ದೇನೆ. ನಾನು ಪಟ್ಟ ಪಾಡು ಅಷ್ಟಿಷ್ಟಲ್ಲ. ನನ್ನ ಮಗಳೀಗ ಕಾಲೇಜಿಗೆ ಹೋಗುತ್ತಿದ್ದಾಳೆ. ಆಕೆ ಫೈನಲ್ ಬಿ.ಕಾಂ. ವಿದ್ಯಾರ್ಥಿನಿ. ಈಗೇನಾದರೂ 'ಅಟ್ಟಹಾಸ' ಸಿನಿಮಾ ಬಿಡುಗಡೆಯಾಯಿತೆಂದರೆ ನಾನು ಸಮಾಜದಲ್ಲಿ ತಲೆಎತ್ತಿ ಓಡಾಡಲು ಸಾಧ್ಯವಾ? ಇನ್ನು ಕಾಲೇಜಿಗೆ ಹೋಗೋ ನನ್ನ ಮಗಳು ಯಾವ ರೀತಿ ನೆಮ್ಮದಿಯಿಂದಿರಲು ಸಾಧ್ಯ? ನೀವೇ ಹೇಳಿ. ಈ ಮನುಷ್ಯ ದುಡ್ಡಿನ ದುರಾಶೆಗೆ ಬಿದ್ದು ನನ್ನ ಗಂಡನ ಬಗ್ಗೆ ಸಿನಿಮಾ ಮಾಡಿ ನಮ್ಮ ಮಾನ ಕಳೆಯೋದು ಯಾವ ನ್ಯಾಯ? ಆವತ್ತೇ ಹೇಳಿದ್ದೆ. ಚಿತ್ರದ ಕತೆ ಬಗ್ಗೆ ನನ್ನ ಒಪ್ಪಿಗೆ ಪಡೆದೇ ಸಿನಿಮಾ ಮಾಡಬೇಕು ಅಂತ. ಸೌಜನ್ಯಕ್ಕೂ ಆತ ಜೈಲಿಗೆ ಬಂದು ನನಗೊಂದು ಮಾತು ಹೇಳಲಿಲ್ಲ. ನಾನು ಈಗಾಗಲೇ ವೀರಪ್ಪನ್ ಕುರಿತಂತೆ ಕತೆ ಬರೆದಿದ್ದೇನೆ. ಆ ಕತೆಯನ್ನು ಕೇಂದ್ರ ಸರ್ಕಾರದ ಕಾಪಿರೈಟ್ ಕಾಯ್ದೆ ಪ್ರಕಾರ ನವದೆಹಲಿಯಲ್ಲಿ ನೋಂದಾವಣೆಯನ್ನೂ ಮಾಡಿಸಿದ್ದೇನೆ. ಇದ್ಯಾವುದನ್ನೂ ಲೆಕ್ಕಿಸದೆ ನನ್ನ ಅನುಮತಿಯನ್ನೇ ಪಡೆಯದೆ ಸಿನಿಮಾ ಮಾಡಲು ಆತನಿಗೆ ಏನು ಅಧಿಕಾರವಿದೆ?

ನಾಳೆ ವೀರಪ್ಪನ್ ಬಗ್ಗೆ ಸಿಕ್ಕಸಿಕ್ಕವರೆಲ್ಲ ತಮಗೆ ತೋಚಿದ ಹಾಗೆ ಸಿನಿಮಾ ಮಾಡಹೊರಟರೆ ನಮ್ಮ ಗತಿ ಏನಾಗಬೇಕು. ಅದಕ್ಕೇ ಈಗ ಕೋರ್ಟಿನ ಮೆಟ್ಟಿಲು ಹತ್ತಿದ್ದೇನೆ. ನನ್ನ ಪರವಾಗಿ ವಕೀಲ ಮನೋಹರನ್ ವಾದ ಮಂಡಿಸಿ ಆಗಿದೆ. ಬಹುಶಃ ಮುಂದಿನ ವಾರಕ್ಕೆ ತೀರ್ಪು ಹೊರಬೀಳಬಹುದು. ನ್ಯಾಯ ಸಿಗುತ್ತೆ ಅನ್ನೋ ವಿಶ್ವಾಸ ನನಗಿದೆ. ಹಾಗೊಮ್ಮೆ ಚೆನ್ನೈ ಹೈಕೋರ್ಟಿನಲ್ಲಿ ನನ್ನ ವಿರುದ್ಧ ತೀರ್ಪು ಬಂತೆಂದರೆ ಸುಪ್ರೀಂಕೋರ್ಟ್ ಇದ್ದೇ ಇದೆ.

"ಸರಿಯಮ್ಮಾ... ನೀನು ಆ ಸಿನಿಮಾ ನೋಡಿದ್ದೀಯ?" ಎಂದು ಪ್ರಶ್ನಿಸಿತು ಪತ್ರಿಕೆ.

"ನೋಡದೆ ಇನ್ನೇನು ಸಾರ್! ಮೊನ್ನೆ ನವೆಂಬರ್ 24 ಕ್ಕೆ ನುಂಗಂಬಾಕಂನ ಪ್ರಸಾದ್ ಪ್ರೀವ್ಯೂ ಥೇಟರ್‌ನಲ್ಲಿ ಕೋರ್ಟ್ ಆದೇಶದ ಮೇರೆಗೇ ಚಿತ್ರ ಪ್ರದರ್ಶನವಿತ್ತು. ಅದಕ್ಕೆ ರಮೇಶ್ ಪೊಲೀಸರ ಬೆಂಗಾವಲಿನಲ್ಲಿ ಬಂದಿದ್ದ. ಪ್ರಮುಖ ತಮಿಳು ಸಂಘಟನೆಗಳ ಕಾರ್ಯಕರ್ತರು, ಅನೇಕ ವಕೀಲರೆಲ್ಲ ಸೇರಿಕೊಂಡೇ ಸಿನಿಮಾ ನೋಡಿದೆವು. ಮೊದಲು ತಮಿಳಿನ ವನಯುದ್ಧಂ ನೋಡಿ ಆ ನಂತರ ಕನ್ನಡದ ಅಟ್ಟಹಾಸವನ್ನೂ ನೋಡಿದೆವು. ಇದು one sided ಸ್ಟೋರಿ. ಎಸ್‌ಟಿಎಫ್ ಪೊಲೀಸರು ನೀಡಿದ ಸುಳ್ಳುಕತೆಗಳ ಆಧರಿಸಿ ಸಿನಿಮಾ ಮಾಡಿದ್ದಾರೆಯೇ ಹೊರತು ಇದರಲ್ಲಿ ಏನೇನೂ ಸತ್ಯಾಂಶವಿಲ್ಲ.

ಮೊದಲು ತೆಲುಗಿನ ಅಕ್ಕಿನೇನಿ ನಾಗಾರ್ಜುನರನ್ನು ಹೀರೋ ಮಾಡ್ತೀನಿ ಎಂದವನು ಈಗ ಯಾರೋ ಕನ್ನಡ ಆ್ಯಕ್ಟರ್‌ನನ್ನು ಹಾಕ್ಕೊಂಡು ವೀರಪ್ಪನ್ ಪಾರ್ಟ್ ಮಾಡಿಸಿದ್ದಾನೆ. ಅದರಲ್ಲಿ ನನ್ನ ಪಾತ್ರವೂ ಇದೆ. ಆದರೆ ನಡೆದದ್ದೇ ಬೇರೆ. ಈ ಚಿತ್ರದಲ್ಲಿ ಇರುವ ಕತೆಯೇ ಬೇರೆ. 1990 ರಲ್ಲಿ ನನ್ನ ಗಂಡನನ್ನು ಹಿಡಿಯಲೆಂದು ಸರ್ಕಾರ ಎಸ್‌ಟಿಎಫ್ ಪೊಲೀಸ್ ಪಡೆಯನ್ನು ರಚಿಸಿತಲ್ಲ, ಇನ್ನೂರಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವೀರಪ್ಪನ್‌ಗೆ ಸಹಾಯ ಮಾಡ್ತಾರೆ ಅನ್ನೋ ಹಣೆಪಟ್ಟಿ ಕಟ್ಟಿ ಗುಂಡಿಟ್ಟು ಕೊಂದಿದ್ದಾರೆ. ನೂರಾರು ಹೆಂಗಸರನ್ನು ಎಸ್‌ಟಿಎಫ್ ಪೊಲೀಸರು ರೇಪ್ ಮಾಡಿದ್ದಾರೆ. ಯಾರನ್ನೆಲ್ಲ ವೀರಪ್ಪನ್ ಸಹಚರರೆಂದು ಪೊಲೀಸರು ಬಂಧಿಸಿ ಚಿತ್ರಹಿಂಸೆ ಕೊಟ್ಟರೋ ಈ ಪೈಕಿ ಅನೇಕರನ್ನು ನಿರ್ದೋಷಿಗಳೆಂದು ಮೈಸೂರಿನ ಟಾಡಾ ಕೋರ್ಟು ತೀರ್ಪು ನೀಡಿದೆ.

ಈಗೇನಾದರೂ ವನಯುದ್ಧಂ ಮತ್ತು ಅಟ್ಟಹಾಸ ಚಿತ್ರಗಳು ಬಿಡುಗಡೆಯಾಯಿತೆಂದರೆ ಈ ರೀತಿ ಟಾಡಾ ಕೋರ್ಟಿನಿಂದ ನಿರಪರಾಧಿಗಳೆಂದು ಬಿಡುಗಡೆಗೊಂಡವರ ಬದುಕು ಏನಾಗಬೇಕು?

ಜಸ್ಟೀಸ್ ಸದಾಶಿವ ಮತ್ತು ನ್ಯಾಯಮೂರ್ತಿ ನರಸಿಂಹನ್‌ರ ಕೋರ್ಟುಗಳು ಎಸ್‌ಟಿಎಫ್ ದೌರ್ಜನ್ಯಗಳ ಕುರಿತಂತೆ ವಿಶೇಷ ತನಿಖೆ ನಡೆಸಿ ಸಂತ್ರಸ್ತರಿಗೆ ಎರಡೂ



ರಾಜ್ಯಗಳು ತಲಾ ಐದು ಕೋಟಿಯಂತೆ ಒಟ್ಟು ಹತ್ತು ಕೋಟಿ ಪರಿಹಾರ ನೀಡುವಂತೆ ನೀಡಿದ ಮಧ್ಯಂತರ ಆದೇಶವನ್ನೇ ಈ ತನಕ ಸರ್ಕಾರಗಳು ಕಾರ್ಯಗತಗೊಳಿಸಿಲ್ಲ. ಹೀಗಿರುವಾಗ ಪೊಲೀಸರು ನೀಡಿದ ಮಾಹಿತಿಯನ್ನೇ ಆಧರಿಸಿ ಸಿನಿಮಾ ಬಿಡುಗಡೆ ಮಾಡಿಬಿಟ್ಟರೆ ಅದು ಎಸ್‌ಟಿಎಫ್ ನಡೆಸಿದ ದೌರ್ಜನ್ಯಗಳಿಗೆ ಸಮರ್ಥನೆಯಂತಾಗುವುದಿಲ್ಲವೆ? ಎಸ್‌ಟಿಎಫ್ ದೌರ್ಜನ್ಯ ಕುರಿತಂತೆ ತನಿಖೆ ನಡೆಸುತ್ತಿರುವ ಸದಾಶಿವ-ನರಸಿಂಹನ್ ಆಯೋಗದ ಅಂತಿಮ ತೀರ್ಪಿನ ಮೇಲೆ ಇಂಥ ಸಿನಿಮಾಗಳು ಪ್ರಭಾವ ಬೀರುವುದಿಲ್ಲವೆ.

ಕೇವಲ ಈ ಒಂದೇ ಕಾರಣದಿಂದ ನಾನು ವಿರೋಧಿಸುತ್ತಿಲ್ಲ. ವೀರಪ್ಪನ್ ಕುರಿತ ಕತೆ, ಫೋಟೋಗಳ ಕಾಪಿರೈಟ್ ಹಕ್ಕನ್ನು ನಾನು ನೋಂದಾಯಿಸಿದ್ದೇನೆ. ಕಾಪಿರೈಟ್ ಹಕ್ಕು ನನ್ನ ಹೆಸರಿಗಿರುವಾಗ ಹೇಗೆ ಇನ್ಯಾರೋ ವೀರಪ್ಪನ್ ಕುರಿತಂತೆ ಸಿನಿಮಾ ಮಾಡಲು ಸಾಧ್ಯ?

ಇನ್ನು, ನಡಿಗರ್ ರಾಜ್‌ಕುಮಾರ್ ಅಪಹರಣಕ್ಕೆ ಸಂಬಂಧಪಟ್ಟಂತೆ ಹೇಳಬೇಕೆಂದರೆ; ಅಟ್ಟಹಾಸ ಚಿತ್ರದಲ್ಲಿ ರಾಜ್‌ಕುಮಾರ್‌ರನ್ನು ಕಿಡ್ನಾಪ್ ಮಾಡಿದ ವೀರಪ್ಪನ್ ಕರ್ನಾಟಕ ಸರ್ಕಾರ ಮತ್ತು ರಾಜ್ ಕುಟುಂಬದಿಂದ ಪಡೆದ ಕೋಟ್ಯಂತರ ರೂಪಾಯಿಯ ಒತ್ತೆಹಣದ ಒಂದು ಭಾಗವನ್ನು ನನಗೆ ಕೊಟ್ಟಂತೆ ಚಿತ್ರಿಸಲಾಗಿದೆ. ಇದು ನಿಜವಾಗಿದ್ದರೆ ನಡಿಗರ್ ರಾಜ್ ಕಿಡ್ನಾಪ್ ಪ್ರಕರಣದಲ್ಲಿ ಗೋಪಿಚೆಟ್ಟಿಪಾಳ್ಯದ ಕೋರ್ಟು ಇತರೇ 13 ಮಂದಿಗೆ ಶಿಕ್ಷೆ ವಿಧಿಸಿ ನನ್ನನ್ನು ಮಾತ್ರ ಏಕೆ ನಿರ್ದೋಷಿ ಎಂದು ತೀರ್ಪು ನೀಡುತ್ತಿತ್ತು?

ನೀವೇ ಹೇಳಿ, ನಾಳೆ ದಿನ ಯಾರಾದರೂ ನನ್ನನ್ನು ಮತ್ತು ನನ್ನ ಮಗಳನ್ನು ನೀವೆಲ್ಲ ನಡಿಗರ್ ರಾಜ್‌ಕುಮಾರ್ ಕಿಡ್ನಾಪ್ ಮಾಡಿದ ಹಣದಿಂದ ಬದುಕುತ್ತಿದ್ದೀರಿ ಎಂದು ಹೀಯಾಳಿಸುವುದಿಲ್ಲವೆ? ಜನ ಈ ರೀತಿ ಕಿಡ್ನಾಪ್ ಮಾಡಿದ ಒತ್ತೆ ಹಣದಿಂದ ಜೀವನ ಸಾಗಿಸ್ತಾ ಇದ್ದೀರಿ ಎಂದು ನಮ್ಮನ್ನು ತುಚ್ಛವಾಗಿ ಕಾಣಲಾರಂಭಿಸಿದರೆ ಆ ರೀತಿ ಅಸಹ್ಯವಾಗಿ ಬದುಕುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದೇ ಮೇಲಲ್ಲವೇ? ನನಗೂ ಒಂದು ಘನತೆಯಿದೆ. ಆತ್ಮಾಭಿಮಾನವಿದೆ. ನಡಿಗರ್ ರಾಜ್‌ಕುಮಾರ್‌ರನ್ನು ವೀರಪ್ಪನ್ ಕಿಡ್ನಾಪ್ ಮಾಡಿದ್ದು ಕೇವಲ ಒತ್ತೆಹಣಕ್ಕಾಗಲಿ, ಅಂಥ ಪಾಪದ ದುಡ್ಡಿನಿಂದ ತನ್ನ ಹೆಂಡತಿ ಮಕ್ಕಳ ಹೊಟ್ಟೆ ಹೊರೆಯುವುದಕ್ಕಾಗಿ ಅಲ್ಲ. ಅದಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ.

ಈ ಕಾರಣಕ್ಕೇ ನಾನು 'ಅಟ್ಟಹಾಸ' ಪಡಮ್ (ಚಿತ್ರ) ಬಿಡುಗಡೆಯಾಗದ ಹಾಗೆ ಬೀದಿಗಿಳಿದಿದ್ದೀನಿ. ಚೆನ್ನೈ ಹೈಕೋರ್ಟು ನನಗೆ ನ್ಯಾಯ ಕೊಡುತ್ತದೆ ಅನ್ನೋ ವಿಶ್ವಾಸವಿದೆ. ಅದಕ್ಕೂ ಮೀರಿ ರಮೇಶ್ ವನಯುದ್ಧಂ ಮತ್ತು ಅಟ್ಟಹಾಸ ಚಿತ್ರಗಳನ್ನೇನಾದರೂ ಬಿಡುಗಡೆ ಮಾಡುತ್ತಾನೆಂದರೆ ನಾನು ನೇರವಾಗೇ ಪ್ರತಿಭಟನೆಗಿಳೀತಿನಿ. ನನ್ನ ಜೊತೆ ತಮಿಳು ಸಂಘಟನೆಗಳಿವೆ. ಎಸ್‌ಟಿಎಫ್ ದೌರ್ಜನ್ಯದ ವಿರುದ್ಧದ ಹೋರಾಟಗಾರರಿದ್ದಾರೆ. ಅದು ಹೇಗೆ ಸಿನಿಮಾ ಬಿಡುಗಡೆ ಮಾಡುತ್ತಾನೋ ನೋಡೇಬಿಡ್ತೀನಿ....!

ಇದು ಮುತ್ತುಲಕ್ಷ್ಮಿಯ ಆಕ್ರೋಶ. ನಿಜಕ್ಕೂ ಅದು ಎದೆಯಾಳದಿಂದ ಬಂದ ಸಿಟ್ಟಾ ಅಥವಾ ಪ್ರಚಾರದ ಹುಚ್ಚಾ ಗೊತ್ತಾಗುತ್ತಿಲ್ಲ. ಅಷ್ಟಕ್ಕೂ ಅಟ್ಟಹಾಸ ಎಂಬ ಚಿತ್ರದಲ್ಲಿ ಏನೇನಿದೆ, ಹೇಗಿದೆ ಎಂಬ ಬಗ್ಗೆ ಯಾರಿಗೂ ಮಾಹಿತಿಯಿಲ್ಲ. ಈ ಬಗ್ಗೆ ಪ್ರತಿಕ್ರಿಯೆಗೆ ಅಟ್ಟಹಾಸದ ನಿರ್ದೇಶಕ-ನಿರ್ಮಾಪಕ ರಮೇಶ್ ಸಿಗುತ್ತಿಲ್ಲ. ಸದ್ಯ ಚೆನ್ನೈ ಹೈಕೋರ್ಟು ಎರಡೂ ಕಡೆಯ ವಾದಗಳನ್ನು ಆಲಿಸಿದೆ ನಿಜ. ಮುತ್ತುಲಕ್ಷ್ಮೀಯ ಪರವಾಗೇ ತೀರ್ಪು ಬರುತ್ತದೆಯೆಂಬ ಬಗ್ಗೆ ಯಾವುದೇ ಗ್ಯಾರಂಟಿಯಿಲ್ಲ. ಹಾಗೊಮ್ಮೆ ಚಿತ್ರಕ್ಕೆ ತಡೆಯಾಜ್ಞೆ ನೀಡದ ಹೋದರೆ?

ಅಟ್ಟಹಾಸದ ವಿರುದ್ಧದ ಮುತ್ತುಲಕ್ಷ್ಮಿಯ ಹೋರಾಟವನ್ನೂ ಜನ ತೆರೆಯ ಮೇಲೆಯೇ ನೋಡಬೇಕೇನೊ!



ಭಾಗ 3

ಕಾಡಿನ ಪ್ರವಾಸ



ಡಾ. ರೀಟಾ ರೀನಿ

ಹಾವಿನ ಬೇಟೆ!

ಈ ಫೋಟೋ ನವೀನ್ ಎಂಬ ಫೋಟೋಗ್ರಾಫರ್ ತೆಗೆದಿರೋದು. ಬಹಳ ವರ್ಷಗಳಿಂದ ಡಾನ್‌ಗೆ ಪರಿಚಯವಿರುವ ಅವರ ಆಪ್ತ ಕಿರಿಯ ಸ್ನೇಹಿತ. ಒಂದು ದಿನ ನವೀನ್, ಜೋಶುವಾ ಎಂಬ ಇಬ್ಬರು ಸ್ನೇಹಿತರು ಕಾಡಿಗೆ ಹೋಗಿದ್ದಾಗ ಒಂದು ಹೆಬ್ಬಾವು ಜಿಂಕೆಯೊಂದನ್ನು ಬೇಟೆಯಾಡುವ ಸಂದರ್ಭವನ್ನು ನೋಡಲು ಅವಕಾಶ ಸಿಕ್ಕಿತು. ಕಾಡಿನಲ್ಲಿ ಇವರಿಗೆ ನೆರವು ನೀಡಲು ಸೋಲಿಗರ ಹುಡುಗನೊಬ್ಬ ಜೊತೆಗಿದ್ದ. ಪೊದೆಯಮರೆಯಲ್ಲಿ ಕೂತು ಗಮನಿಸುತ್ತಿದ್ದ ಇವರಿಗೆ ಹೆಬ್ಬಾವು ಜಿಂಕೆಮರಿಯೊಂದನ್ನು ನುಂಗುವಾಗ ತೆಗೆದ ಚಿತ್ರವೇ ಇದು. ಇವರ ಜೊತೆಗಿದ್ದ ಸೋಲಿಗ ಹುಡುಗನಿಗೆ ಹೆಬ್ಬಾವು ಸಾಯಿಸಿದ್ದ ಜಿಂಕೆಯ ಮಾಂಸದ ಮೇಲೆ ಕಣ್ಣು. ಅರ್ಧ ಜಿಂಕೆಯನ್ನು ನುಂಗಿದ್ದ ಜಿಂಕೆಯನ್ನು ಬೆದರಿಸಿಬಿಟ್ಟ. ಅದು ಜಿಂಕೆಯನ್ನು ಹಾಗೆ ಹೊರಗೆ ಹಾಕಿ ಹರಿದುಹೋಯಿತಂತೆ. ಆ ಹುಡುಗ ಸತ್ತ ಜಿಂಕೆಯನ್ನು ತೆಗೆದುಕೊಂಡು ಖುಷಿಯಿಂದ ಹೋದನಂತೆ.

ಇಂಥಾ ಭಯಂಕರ ಎನಿಸುವ, ಬರೀ ಗಾತ್ರದಿಂದಲೇ ಮೂರ್ಛೆ ಬರಿಸುವ ಈ ಹಾವು ಡಾನ್ ಮನೆಯಲ್ಲಿ ಸಾಕುಪ್ರಾಣಿಯಾಗಿತ್ತಂತೆ! ಅದು ಒಂದಲ್ಲ, ಎರಡಲ್ಲ ನಾಲ್ಕೈದು ಹೆಬ್ಬಾವುಗಳು! ಅದನ್ನು ಹೇಗೆ ಹಿಡಿಯುತ್ತಿದ್ದರು ಎಂಬುದನ್ನು ಕೇಳಿಸಿಕೊಂಡರೆ ಮೈಜುಮ್ ಅನ್ನುತ್ತೆ. ಹೆಬ್ಬಾವುಗಳು ತಾವು ನುಂಗುವ ಪ್ರಾಣಿಯ ಸುತ್ತ ಗಟ್ಟಿಯಾಗಿ ಹೆಣೆದುಕೊಂಡು ಉಸಿರುಗಟ್ಟಿಸಿ ಸಾಯಿಸಿ ನಂತರ ನುಂಗುತ್ತದೆ. ಇಂಥಾ ಹೆಬ್ಬಾವಿನ ಮುಖದ ಮೇಲೆ ಒಂದು ಕೋಟನ್ನೋ ಅಂಗಿಯನ್ನೋ ಎಸೆದು, ಅದು 52 ಹಲ್ಲುಗಳು ಬಟ್ಟೆಯನ್ನು ಕಚ್ಚುತ್ತಿರುವಾಗ ಅದರ ತಲೆ ಹಿಡಿದುಕೊಳ್ಳುತ್ತಾರೆ. ಹಾಗೆ ಹಿಡಿದುಕೊಂಡ ಮಾತ್ರಕ್ಕೆ ಹಾವು ಶರಣಾಗುವುದಿಲ್ಲ, ಅದು ಹಿಡಿದವರ ದೇಹವನ್ನು ಸುತ್ತಿಕೊಳ್ಳುತ್ತದೆ. ಉಸಿರುಗಟ್ಟಿಸಬಹುದು! ಅದನ್ನು ಬಿಡಿಸಿಕೊಂಡು ಚೀಲದಲ್ಲಿ ಹಾಕಿ ತರುವುದು! ಹಾಗೆ ತಂದ ಹಾವುಗಳು ಇವರಿಗೆ ಮತ್ತು ಹೊಸ ವಾತಾವರಣಕ್ಕೆ, ಆಹಾರ ಕ್ರಮಕ್ಕೆ ಹೊಂದಿಕೊಳ್ಳಲು ಮೂರು ತಿಂಗಳು ತೆಗೆದುಕೊಳ್ಳುತ್ತಿತ್ತಂತೆ.

ಅದು ಸರಿ ಈ ಹಾವುಗಳಿಗೆ ಏನು ಊಟ ಹಾಕುತ್ತಿದ್ದರು? ದಿನಾಲು ಕತ್ತಲಾದ ಮೇಲೆ ಡಾನ್ ಶಿವಾಜಿನಗರದ ರಸೆಲ್ ಮಾರ್ಕೆಟ್ ಬಳಿ ಗನ್ ತಗೊಂಡು ಹೋಗಿ ಅಲ್ಲಿ ರೊಚ್ಚೆ ಕೊಚ್ಚೆಗಳಲ್ಲಿ ದಪದಪನೆ ಓಡಾಡುತ್ತಿದ್ದ ಹೆಗ್ಗಣಗಳನ್ನು ಶೂಟ್ ಮಾಡಿ ತರುತ್ತಿದ್ದರಂತೆ. ಅದೇ ಈ ಹಾವುಗಳಿಗೆ ಆಹಾರ. ದಿನಾ ಬಂದು ಇಷ್ಟೊಂದು ಹೆಗ್ಗಣಗಳನ್ನು ಯಾಕೆ ಶೂಟ್ ಮಾಡ್ಕೊಂಡು ಹೋಗ್ತಿದ್ದೀಯಾ ಅಂತ ಅಲ್ಲಿನ ಜನರಿಗೆ ಆಶ್ಚರ್ಯ ಆಗಿ ಕೇಳಿದಾಗ ತುಂಟ ಡಾನ್, ಇದನ್ನು ಕೋಶಿಸ್ ಹೋಟೆಲ್‌ಗೆ ಸಪ್ಲೈ ಮಾಡ್ತೀನಿ ಅಂತ ಸೀರಿಯಸ್ಸಾಗಿ ಹೇಳಿ ಕಾರು ಹತ್ತಿ ಬರುತ್ತಿದ್ದರಂತೆ.

ಡಾನ್ ಮನೆಯಲ್ಲಿ ಹೆಬ್ಬಾವುಗಳು ಪೆಟ್‌ಗಳಾಗಿದ್ದರೆ ನಾಗರಹಾವುಗಳನ್ನು ವಿಷ ಸಂಗ್ರಹಣೆಗಾಗಿ ಸಾಕುತ್ತಿದ್ದರಂತೆ. ಕೆನೆತ್ ಆಂಡರ್‌ಸನ್ ಪುಸ್ತಕದಲ್ಲಿ ಇದಕ್ಕೆ ಸಂಬಂಧಿಸಿದ ಸುದೀರ್ಘವಾದ ವಿವರವಿದೆ. ಹಾವಿನ ವಿಷಕ್ಕೆ ಔಷಧಿ ತಯಾರಿಕೆಗಾಗಿ ಈ ವಿಷವನ್ನು ಬಳಸುತ್ತಿದ್ದರು. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕುದುರೆಯ ದೇಹಕ್ಕೆ ಈ ವಿಷವನ್ನು ಚುಚ್ಚಿ ದಿನದಿಂದ ದಿನಕ್ಕೆ ಅದರ ಪ್ರಮಾಣವನ್ನು ಹೆಚ್ಚಿಸುತ್ತಾ ಹೋದಂತೆಲ್ಲಾ ಕುದುರೆಯು ಸಾವು ತರಬಹುದಾದ ವಿಷದ ಪ್ರಮಾಣಕ್ಕೆ ಇಮ್ಯುನೈಸ್ ಆಗುತ್ತದೆ. ಅದರ ರಕ್ತವನ್ನು ತೆಗೆದು ಅದರಿಂದ ವಿಷರೋಧಕ ಔಷಧವನ್ನು ತಯಾರಿಸಲಾಗುತ್ತಿತ್ತಂತೆ. ಹೀಗೆ ಔಷಧ ತಯಾರಿಸುವ ಕಂಪನಿಗಳಿಗೆ ಆಂಡರ್‌ಸನ್‌ಗಳು ತಮ್ಮ ಮನೆಯಲ್ಲಿ ಸಾಕಿದ್ದ ವಿಷಯುಕ್ತ ಹಾವುಗಳ ವಿಷವನ್ನು ಸಂಗ್ರಹಿಸಿ ರಫ್ತು ಮಾಡುತ್ತಿದ್ದರಂತೆ. ಕೆನೆತ್ ಹೇಳುವ ಪ್ರಕಾರ ನಾಲ್ಕು ಅಥವಾ ಐದು ದಿನಗಳಿಗೆ ಒಮ್ಮೆ ಅವರು ಸಾಕಿದ್ದ 20 ನಾಗರಹಾವುಗಳಿಂದ ವಿಷ ಸಂಗ್ರಹಿಸುತ್ತಿದ್ದರಂತೆ. ಒಂದು ನಾಗರಹಾವು ಸರಾಸರಿ ಒಂದು ಘನಸೆಂಟಿಮೀಟರ್‌ನಷ್ಟು ಅಂದರೆ ಒಂದು ಗ್ರಾಮ್‌ನಷ್ಟು ವಿಷ ನೀಡಿದರೆ ಅದರ ಬೆಲೆ ಒಂದು ಗ್ರಾಮಿಗೆ ಒಂದೂವರೆ ಡಾಲರ್‌ನಷ್ಟಿತ್ತಂತೆ. ಅದು ಮೊದಲ ಮಹಾಯುದ್ಧದ ಕಾಲ.

ಡೊನಾಲ್ಡ್ ಆಂಡರ್‌ಸನ್ ಇದೇ ವ್ಯವಹಾರವನ್ನು ಮುಂದುವರಿಸುವ ಹೊತ್ತಿಗೆ ಅವರ ಬಳಿ ಸುಮಾರು 40-50 ನಾಗರಹಾವುಗಳು ಇದ್ದವಂತೆ. ಆದರೆ ಅವರಿಗೆ ಒಂದು ಔನ್ಸ್‌ನಷ್ಟು ವಿಷಕ್ಕೆ ಐದು ರೂಪಾಯಿ ಸಿಗುತ್ತಿತ್ತಂತೆ. ಒಂದು ಔನ್ಸ್‌ನಷ್ಟು ವಿಷ ಸಂಗ್ರಹಿಸಬೇಕಾದರೆ ನಾಲ್ಕೈದು ಹಾವುಗಳ ಹಲ್ಲು ಒತ್ತಿ ಹಿಡಿದು ಅದರ ಎರಡು ವಿಷಚೀಲವನ್ನು ಹಿಸುಕಿ ಅದನ್ನು ತೊಟ್ಟಿಕ್ಕಿಸಬೇಕಿತ್ತಂತೆ. ಆದರೆ ಇದು ಬಹಳ ಅಪಾಯಕಾರಿಯಾದ ಕೆಲಸವಾಗಿತ್ತು ಎನ್ನುತ್ತಾರೆ ಡಾನ್. ಕೆನೆತ್ ಆಂಡರ್‌ಸನ್ ಹಾವುಗಳನ್ನು ಸಾಕುತ್ತಿದ್ದುದು ಅದರಿಂದ ವಿಷ ಸಂಗ್ರಹಿಸುವ ವಿಧಾನವನ್ನು ಒಂದು ಸಾಧಾರಣ ಕೆಲಸವೆಂಬಂತೆ ಹೇಳಿಬಿಟ್ಟಿದ್ದರೆ ಡಾನ್ ಅದರ ಹಿಂದಿನ ಶ್ರಮವನ್ನು ಸೊಗಸಾಗಿ ವಿವರಿಸುತ್ತಾರೆ.

ಹಾವುಗಳ ವಿಷ ತೆಗೆಯುವ ಪ್ರಾರಂಭದ ದಿನಗಳಲ್ಲಿ ಸಿಕ್ಕಾಪಟ್ಟೆ ಗೊಂದಲ ಅನುಭವಿಸಿದರಂತೆ. ಒಂದು ಗುಂಡಿಯಲ್ಲಿರುವ ಹಾವುಗಳಲ್ಲಿ ಒಂದನ್ನು ತೆಗೆದು ಅದರ ವಿಷ ತೆಗೆದು ಮತ್ತೆ ಗುಂಡಿಗೆ ಬಿಟ್ಟು ಇನ್ನೊಂದು ತೆಗೆದುಕೊಂಡರೆ - ಅದು ವಿಷ ತೆಗೆದ ಹಾವೋ ಅಲ್ಲವೋ ಎಂಬ ಗೊಂದಲದಲ್ಲಿ ತಲೆ ಕೆಡುತ್ತಿತ್ತಂತೆ. ಇದನ್ನು ಪರಿಹರಿಸಿಕೊಳ್ಳಲು ಒಂದು ಹಾವಿನ ವಿಷ ತೆಗೆದ ಮೇಲೆ ಅದನ್ನು ಒಂದು ರೂಮಿನಲ್ಲಿ ಹಾಕುತ್ತಿದ್ದರಂತೆ. ಅವನ್ನೆಲ್ಲ ಮತ್ತೆ ಒಟ್ಟುಗೂಡಿಸುವ ಹೊತ್ತಿಗೆ ಡಾನ್ ಮೈಯಲ್ಲಿ ಬೆವರು ನೀರಿನಂತೆ ಹರಿಯುತ್ತಿತ್ತಂತೆ. ಗೋಡೆ, ಬಾಗಿಲು ಹತ್ತಿ ಹರಿದಾಡುವ ಈ ಹಾವುಗಳನ್ನು ಬುಸ್, ಫುಸ್ ಎನ್ನುತ್ತಾ, ಕೋಲಾಡಿಸುತ್ತಾ ಮೈಮೇಲೆ ಹರಿಯದಂತೆ ನೋಡಿಕೊಳ್ಳುತ್ತಾ ಮತ್ತೆ ಸ್ವಸ್ಥಾನಕ್ಕೆ ಸೇರಿಸುವಷ್ಟ... ಹಿಡಿದಿಡಿದು ಮತ್ತೆ ಬುಟ್ಟಿಗಳೊಳಗೆ ಹಾಕುವಷ್ಟ... ಸಾಕುಬೇಕಾಗುತ್ತಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ಡಾ... ಎಷ್ಟೊಂದು ಎಚ್ಚರಿಕೆಯಿಂದ ಈ ಕೆಲಸ ಮಾಡುತ್ತಿದ್ದ... ಅವರ ಅಪ್ಪನಿಗೆ ಒಮ್ಮೆ ಹಾವು ಕಚ್ಚಿಬಿಟ್ಟಿತಂತೆ. ಅ... ಮೇಲೆ ಕಚ್ಚಿದ ಜಾಗದಲ್ಲಿ ಗಾಯವನ್ನು ಕತ್ತರಿಸಿ ಅ... ಕೆಳಗೆ ಗಟ್ಟಿಯಾಗಿ ಬಟ್ಟೆ ಕಟ್ಟಿ ವಿಷದ ರಕ್ತ ಹೊರಹೆಗೆದಿದ್ದ... ಅಪ್ಪ ಬದುಕುಳಿಯುವ ಸಾಧ್ಯತೆಗಳೇ ಇರಲಿಲ್ಲವಂತೆ. ... ಒಬ್ಬ ಸ್ಟೇಷನ್ ಮಾಸ್ಟರ್ ಇದ್ದರಂತೆ. ಹಾವು ಕ... ಸುದ್ದಿ ಕಳಿಸಿದರೆ ಸಾಕು ಹಾವು ಎಲ್ಲಿ ಕಚ್ಚಿದೆ, ಯಾ... ಕಚ್ಚಿದೆ ಎಂಬ ಕನಿಷ್ಠ ಮಾಹಿತಿ ಪಡೆದು ರೋ... ಬದುಕುತ್ತಾನೋ ಸಾಯುತ್ತಾನೋ ಎಂದು ಹೇಳುತ್ತಿದ್ದ... ಆ ಸ್ಟೇಷನ್ ಮಸ್ಟರ್ ಏನು ಹೇಳಿದರೋ ಬಿಟ್ಟರ... ಒಟ್ಟಿನಲ್ಲಿ ಅವರಪ್ಪ ಅದಾಗಿ ಅನೇಕ ವರ್ಷಗಳ ... ಬದುಕಿದ್ದಂತೂ ನಿಜ!

ಕೆನೆತ್ ಆಂಡರ್‌ಸನ್ ಮಾಟಮಂತ್ರಗಳಲ್ಲಿ ನಂ... ಇದ್ದವರು. ಬಹುಶಃ ಕಾಡಿನ ಭಯಾನಕ ಅನುಭವ... ಯಾವುದೋ ಶಕ್ತಿಯ ಮೇಲೆ ಅವಲಂಬಿಸ... ಮನಸ್ಥಿತಿಯನ್ನು ತಂದಿರಬೇಕು. ಅವರ ಮನೆಯಲ್ಲಿ ಒ... ಕ್ರಿಸ್ಟಲ್, ತಲೆಬುರುಡೆ ಮತ್ತು ಮೂಳೆಗಳಂತ ವಿ... ವಸ್ತುಗಳು ಇರುತ್ತಿದ್ದವಂತೆ. ಇದರಲ್ಲಿ ಏನೋ ಕಾಣು... ನೋಡಿ ಎಂದು ಅವರಪ್ಪ ಡಾನ್ ಮತ್ತು ಅವರಕ... ಹೇಳಿದರೆ ಅವರು ಏನಾದರೂ ಕಾಣಬಹುದೇ ... ನೋಡಿ ನೋಡಿ 'ನನಗಂತೂ ಏನೂ ಕಾಣಲಿಲ್ಲ' ಎ... ಎದ್ದು ಹೋಗುತ್ತಿದ್ದರಂತೆ. ಇದರ ವಿವರ ವ... ವಿಮರ್ಶೆ ಬಹಳ ದೊಡ್ಡದು. ಅದನ್ನು ಆ... ನೋಡೋಣ.

ನಾನು ಪ್ರವಾಸದ ವಿಚಾರ ಆರಂಭಿಸಿ ಡ... ಮತ್ತು ಅವರ ಮಾತಿನ ವಿವರಗಳನ್ನೇ ಹೆ... ಬರೆಯುತ್ತಿದ್ದೇನೆ. ನಮ್ಮ ಪ್ರವಾಸದ ಅನು... ದಟ್ಟವಾದದ್ದೇ ಡಾನ್ ಅನುಭವದ ಹಿನ್ನೆಲೆ... ಪ್ರಾಣಿಗೊಂದು ಕತೆ, ಪ್ರಶ್ನೆಗೊಂದು ಕತ... ಇದೇ ನಮ್ಮ ಪ್ರವಾಸದ ವಿಶೇಷ. ನ... ಪ್ರವಾಸಕ್ಕೆ ಹೋದಾಗ ಕಾಡಿನ ನಡ... ಅಚ್ಚುಕಟ್ಟಾದ ರೂಮುಗಳಲ್ಲಿ, ಬೆಚ್ಚನ... ಹಾಸಿಗೆಯ ಮೇಲೆ ಮೈಮರೆತು ... ಮಾಡಬಹುದಾದ ಸೌಕರ್ಯ. ಆದರೆ ಡ... ಸಂದರ್ಭಗಳು ಹಾಗಿರಲಿಲ್ಲ. ಹಾಗಾಗಿ ನ... ಯಾವುದೇ ಅನುಭವ ಅವರದ್ದರ ಮುಂದೆ ಸಪ್ಪೆ ಅನಿಸು... ಶಿಕಾರಿ ವಂಶದ ಮೂರನೆ ತಲೆಮಾರಿನವರು ಡಾ... ಈಗಾಗಲೇ ಕೆನೆತ್ ಆಂಡರ್‌ಸನ್ ಅವರ ಬರಹಗ... ಓದಿರುವವರಿಗೆ ಕೆಲವು ವಿಷಯಗಳು ರಿಪೀಟೆ... ಅನಿಸಬಹುದು. ಆದರೆ ಬಾಲ್ಯ ಮತ್ತು ಯೌವನ... ಅನೇಕ ವಿಚಾರಗಳನ್ನು ಭಿನ್ನವಾಗಿ ಗ್ರಹಿಸಿದ ಡ... ಇನ್ನೊಂದು ತಲೆಮಾರಿನ ಅಭಿವ್ಯಕ್ತಿಯಾಗಿ ಕಾಣುತ್ತಾ...


(ಮುಗಿಯಿ...





ಅಂಬೇಡ್ಕರರ ಸಾಮಾಜಿಕ ಚಳವಳಿಯ ರಥ ಎಲ್ಲಿ ನಿಂತಿದೆ

ಜುಲೈ 31, 1956, ಮಂಗಳವಾರ. ಬಾಬಾಸಾಹೇಬ್ ಅಂಬೇಡ್ಕರರು ಪರಿನಿರ್ವಾಣರಾಗುವುದಕ್ಕೆ ಕೇವಲ 5 ತಿಂಗಳು 5 ದಿನಗಳ ಹಿಂದಿನ ದಿನ. ಅಂಬೇಡ್ಕರರ ಆಪ್ತ ಸಹಾಯಕ ನಾನಕ ಚಂದ್ ರತ್ತುರವರು ರೋಸಿಹೋಗಿದ್ದರು. ಏಕೆಂದರೆ ಅಂಬೇಡ್ಕರರು ಕಳೆದ ಮೂರು ದಿನಗಳಿಂದ ಸತತವಾಗಿ ಅಳುತ್ತಿದ್ದರು. ಕಾರಣ ಮಾತ್ರ ತಿಳಿದಿರಲಿಲ್ಲ, ಅದನ್ನು ಅವರು ಬಾಯಿ ಬಿಟ್ಟು ಸಹ ಹೇಳಿರಲಿಲ್ಲ, ಆದರೆ ಅಂದು ಏಕೋ ಮನಸು ಮಾಡಿದ ಬಾಬಾಸಾಹೇಬರು ರತ್ತುವಿನೊಂದಿಗೆ ತಮ್ಮ ದುಃಖದ ಕಾರಣವನ್ನು ಹೇಳಿಕೊಂಡಿದ್ದರು. ಆ ಮಾತುಗಳನ್ನು ನಿಮ್ಮ ಹೃದಯದಿಂದ ಓದಿರಿ.



"ನಿಮಗೆ ತಿಳಿಯದು ನಾನೇಕೆ ಇಷ್ಟು ದುಃಖತಪ್ತನಾಗಿರುವೆನೆಂದು. ನನ್ನ ನೋವಿಗೆ ಮೊದಲ ಕಾರಣ ನಾನು ನನ್ನ ಗುರಿ ಮುಟ್ಟಲಾಗದಿರುವುದು. ನನ್ನ ಜನರನ್ನು ಈ ದೇಶವನ್ನು ಆಳುವವರನ್ನಾಗಿ ನೋಡಬೇಕಿತ್ತು, ಆದರೆ ನಾನೀಗ ಬಹುತೇಕ ಅಸ್ವಸ್ಥತೆಯಿಂದ ಬಲಹೀನನಾಗಿದ್ದೇನೆ. ಏನೆಲ್ಲ ನಾನು ಸಾಧಿಸಿದೆನೋ ಅದನ್ನು ಕೆಲವು ವಿದ್ಯಾವಂತರು ಮಾತ್ರ ಅನುಭವಿಸುತ್ತಿದ್ದಾರೆ. ತಮ್ಮ ದಗಲಬಾಜಿತನದಿಂದ ಕೆಲಸಕ್ಕೆ ಬಾರದವರೆಂದು ನಿರೂಪಿಸಿದ್ದಾರೆ. ತುಳಿತಕ್ಕೊಳಗಾಗಿರುವ ತಮ್ಮ ಸಹೋದರರ ಬಗ್ಗೆ ಕರುಣೆ ಇಲ್ಲದವರಾಗಿದ್ದಾರೆ. ನನ್ನ ಕನಸುಗಳನ್ನು ನುಚ್ಚುನೂರಾಗಿಸಿದ್ದಾರೆ. ಇವರು ತಮ್ಮ ಸ್ವಾರ್ಥಕ್ಕಾಗಿ, ತಮಗಾಗಿ ಬದುಕುತ್ತಿದ್ದಾರೆ. ಇವರುಗಳಲ್ಲಿ ಒಬ್ಬನೂ ಸಾಮಾಜಿಕ ಕೆಲಸಗಳಿಗಾಗಿ ತಯಾರಿಲ್ಲ. ತಾವೇ ನಾಶವಾಗುವ ದಾರಿಯಲ್ಲಿ ಹೆಜ್ಜೆ ಇಡುತ್ತಿದ್ದಾರೆ. ಆದ್ದರಿಂದ ನಾನು ನನ್ನ ಗಮನವನ್ನು ಹಳ್ಳಿಗಳಲ್ಲಿ ಕಷ್ಟ ಅನುಭವಿಸುತ್ತಿರುವ ಅನಕ್ಷರಸ್ಥ ಜನಗಳ ಕಡೆ ತಿರುಗಿಸಬೇಕಾಗಿದೆ"

ಎಂದು ಹೇಳುತ್ತಾ ಹೋಗುತ್ತಾರೆ. ಕೊನೆಯ ದಿನಗಳಲ್ಲಿ ಬಾಬಾಸಾಹೇಬರಿಗೆ ಅಳದಿರುವ ದಿನಗಳೇ ಇರಲಿಲ್ಲ, ಜಾತಿವಾದಿಗಳನ್ನು ದುಃಸ್ವಪ್ನವಾಗಿ ಕಾಡುತ್ತಿದ್ದ, ಚಳಿಯಲ್ಲೂ ಮುಖಸ್ತುತಿಕಾರರ ಬೆವರಿಳಿಸುತ್ತಿದ್ದ ಬಾಬಾಸಾಹೇಬರನ್ನು ಈ ಸ್ಥಿತಿಗೆ ತಂದವರಾರು? ಅವರ ರಾಜಕೀಯ, ಸಾಮಾಜಿಕ ಚಳವಳಿಯ ಅಥವಾ ವೈಯಕ್ತಿಕ ವಿರೋಧಿಗಳೇ? ಇಲ್ಲ, ಬದಲಾಗಿ ಅವರು ಕಲ್ಪಿಸಿಕೊಟ್ಟ ಮೀಸಲಾತಿಯಿಂದ "ಎಲ್ಲಿ ನಿನಗೆ ಗೌರವವಿಲ್ಲವೋ ಅಲ್ಲಿ ನಿನ್ನ ಚಪ್ಪಲಿಗಳನ್ನು ಸಹ ಬಿಡಬೇಡ" ಎಂದು ಅವರು ಹೇಳಿಕೊಟ್ಟ ಸ್ವಾಭಿಮಾನದಿಂದ ವಿದ್ಯಾವಂತರಾದ ದಲಿತರು ಅವರ ಕೊನೆಯ ದಿನದ ಕಣ್ಣೀರಿಗೆ ಕಾರಣರು. ಅಂಬೇಡ್ಕರರಿಗೆ ಭಾರತದ ಮನುವಾದಿಗಳು ಎದೆಗೆ ಚೂರಿ ಹಾಕುತ್ತಿದ್ದರೆ ನಾವು ದಲಿತ ವಿದ್ಯಾವಂತರು ಮಾಡಿದ್ದೆಲ್ಲವೂ ಅವರ ಬೆನ್ನಹಿಂದೆಯೇ! ಇದು ಅವರ ಮೇಲಿನ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ.

ಅಂಬೇಡ್ಕರರ ಮನದಾಳದಲ್ಲಿ ಒಂದು ಆಸೆಯಿತ್ತು. ಅದೇನೆಂದರೆ ತನ್ನ ಜನರು ತನ್ನನ್ನು ಅರ್ಥಮಾಡಿಕೊಳ್ಳಬೇಕೆಂಬುದು. ಅದೂ ಏತಕ್ಕಾಗಿ? ಅವರುಗಳ ಉದ್ಧಾರಕ್ಕಾಗಿ, ಅವರ ವಿಮೋಚನೆಗಾಗಿ. ಆದರೆ ದಲಿತನಾಯಕರು, ದಲಿತ ವಿದ್ಯಾವಂತರು, ದಲಿತ ನೌಕರರುಗಳಾದ ನಾವುಗಳು ನಮ್ಮ ದಲಿತ ಸಹೋದರರನ್ನು ಅಂಬೇಡ್ಕರರು ಪರಿನಿರ್ವಾಣವಾದ ನಂತರ (ಇದೇ ಡಿಸೆಂಬರ್ 6 ಕ್ಕೆ 56 ವರ್ಷಗಳಾಯಿತು) ಹೇಗೆಲ್ಲ ನೋಡಿಕೊಂಡಿದ್ದೇವೆ?

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಭಾರತದ ದಲಿತರ ಇಂದಿನ ಸ್ಥಿತಿಯ ಬಗ್ಗೆ ವರದಿ ನೀಡಿದೆ. ಅದನ್ನು ಓದಿ ಕಣ್ತುಂಬಿಕೊಳ್ಳಿ.

- ಪ್ರತಿ 18 ನಿಮಿಷಗಳಿಗೆ ದಲಿತರ ಮೇಲೆ ಒಂದು ದೌರ್ಜನ್ಯ ನಡೆಯುತ್ತದೆ.
- ಪ್ರತಿ ದಿನ 3 ದಲಿತ ಮಹಿಳೆಯರ ಅತ್ಯಾಚಾರವಾಗುತ್ತದೆ.
- ಪ್ರತಿ ದಿನ 2 ದಲಿತ ವ್ಯಕ್ತಿಗಳ ಕೊಲೆಯಾಗುತ್ತದೆ.
- ಶೇ. 37 ರಷ್ಟು ದಲಿತರು ಬಡತನ ರೇಖೆಗಿಂತ ಕೆಳಗಿದ್ದಾರೆ.
- ಶೇ. 54 ರಷ್ಟು ದಲಿತರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.
- 1000ಕ್ಕೆ 83 ದಲಿತ ಮಕ್ಕಳು ಹುಟ್ಟಿದ ಒಂದು ವರ್ಷದಲ್ಲಿ ಸಾಯುತ್ತವೆ.
- ಶೇ. 12 ರಷ್ಟು ದಲಿತ ಮಕ್ಕಳು 5 ವರ್ಷದೊಳಗೆ ಸಾಯುತ್ತವೆ.
- ಶೇ. 73 ರಷ್ಟು ದಲಿತ ಹೆಂಗಸರು ಆಸ್ಪತ್ರೆಯ ಹೊರಗಡೆಯೇ ಮಗುವಿಗೆ ಜನ್ಮ ನೀಡುತ್ತಾರೆ.
- ಶೇ. 45 ರಷ್ಟು ದಲಿತರಿಗೆ ಓದಲು ಬರೆಯಲು ಬರುವುದಿಲ್ಲ.
- ಶೇ. 40 ರಷ್ಟು ದಲಿತರಿಗೆ ಕನಿಷ್ಠ ಮೂಲ ಸೌಲಭ್ಯಗಳಿಲ್ಲ.
- ಶೇ. 33 ರಷ್ಟು ಹಳ್ಳಿಗಳ ದಲಿತರ ಮನೆಗೆ ಆರೋಗ್ಯ ಇ... ಸಿಬ್ಬಂದಿಯವರು ಭೇಟಿ ನೀಡುವುದೇ ಇಲ್ಲ.
- ಶೇ. 27.6 ರಷ್ಟು ಹಳ್ಳಿಗಳ ಪೊಲೀಸ್ ಸ್ಟೇಷನ್ನುಗಳಲ್ಲಿ ದಲಿತರಿಗೆ ಪ್ರವೇ...
- ಶೇ. 38 ರಷ್ಟು ಸರ್ಕಾರಿ ಶಾಲೆಗಳಲ್ಲಿ ದಲಿತ ಮಕ್ಕಳು ಪ್ರತ್ಯೇ... ಕುಳಿತು ಊಟ ಮಾಡಬೇಕು.
- ಶೇ. 23.5 ರಷ್ಟು ಹಳ್ಳಿಗಳಲ್ಲಿ ದಲಿತರ ಮನೆಗೆ ಅಂಚೆ ಇಲಾ... ಪತ್ರಗಳು ತಲುಪುವುದಿಲ್ಲ, ಏಕೆಂದರೆ ಅವರ ಮನೆಗಳಿಗೆ ಅಲ್ಲಿಯ ... ಹೋಗುವುದಿಲ್ಲ.
- ಶೇ. 48.4 ರಷ್ಟು ಹಳ್ಳಿಗಳಲ್ಲಿ ದಲಿತರು ಸಾರ್ವಜನಿಕ ನಲ್ಲಿಗಳಲ್ಲಿ ... ಪಡೆದುಕೊಳ್ಳುವಂತಿಲ್ಲ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ... ಕಾಯ್ದೆ 1989 ರ ಅನ್ವಯ ದಾಖಲಾದ ಪ್ರಕರಣಗಳಲ್ಲಿ ಇತ್ಯರ್ಥವಾಗಿ... ಕೇವಲ ಶೇ. 15.71. ಇನ್ನೂ ಇತ್ಯರ್ಥವಾಗದೇ ಉಳಿದಿರುವ... 85.37.

ನೋಡಿದಿರಾ ನಮ್ಮ ಸಾಧನೆಯನ್ನು! ನಾಚಿಕೆಯಾಗುತ್ತಿದೆಯಲ್ಲವೇ... ಅಂಬೇಡ್ಕರರ ಹೆಸರಿನಲ್ಲಿ, ಅವರು ತೋರಿಸಿಕೊಟ್ಟ ದಾರಿಯಲ್ಲಿ ... ನಾವು ಸಾಧಿಸಿದ್ದಾದರೂ ಏನು? ಶಿಕ್ಷಣ, ನೌಕರಿ, ಚಮಚಾಗಿರಿ, ... ಮಕ್ಕಳು, ಬಂಗಲೆ, ಕಾರು, ಐಷಾರಾಮಿ ಜೀವನ. ಆದರೆ ಬಾಬಾಸಾ... ಕನಸು ಏನಾಗಿತ್ತು? ನಮ್ಮ ದಲಿತ ಸಹೋದರರಿಗೆ ದಾರಿ ತೋರುವುದ... ಅವರನ್ನು ನಮ್ಮಂತೆಯೇ ಮೇಲೆತ್ತುವುದಾಗಿತ್ತು, ಆದರೆ ನಾವು ಇದುವ... ಮಾಡಿರುವ ಅಪರಾಧವನ್ನು ಮೇಲಿನ ವರದಿ ಕೂಲಂಕಷವಾಗಿ ತಿಳಿಸ...

ಇಂದಿನಿಂದಲೇ ನಾವು ಮಾಡಬೇಕಾಗಿರುವ ಮೊದಲ ಕೆಲಸವೇ... ಬಾಬಾಸಾಹೇಬರ ಹೋರಾಟದ ರಥವು ಸರಿಯಾದ ದಾರಿಯಲ್ಲಿದೆಯೇ ... ಪರಿಶೀಲಿಸುವುದಾಗಿದೆ. ನಮ್ಮ ಸಹೋದರರಿಗೆ ಧೈರ್ಯ ಕೊಡುವುದ...

- ವಿಕಾಸ ಆರ್ ಮೌರ್ಯ, ಬೆಂಗ...

...ಜವಾನಿ, ಜೋಷ್ ಜೋಕಾಲಿ

...ಇತ್ತೀಚಿನ ರೀಲು ರಂಗೀಲಗಳಲ್ಲಿ ಬಹುಶಃ ಹರೆಯದ ಹುಡುಗರ ...ದನೇ ಸುತ್ತೋದು ಜಾಣ-ಜಾಣೆಯರಿಗೆ ತಿಳಿಯದ್ದೇನು ಅಲ್ಲ, ಯೌವನಿಗರ ..., ರೀಲು ಸುತ್ತಿಕೊಂಡು ದೇಶದಲ್ಲಿ ಎಷ್ಟು ಡಜನ್ ಸಿನಿಮಾಗಳು ರಜತ ...ದೆಯ ಮೇಲೆ ಬಚ್ಚಿಕೋತವೆ ಅಂತ ನಂಗಂತು ಲೆಕ್ಕ ಗೊತ್ತಿಲ್ಲ, ಆದರೆ ...ಧಿನಗರದ ರೀಲು ರಂಗೀಲದ ಲೆಕ್ಕಾಚಾರ ನೋಡಿ. ಪ್ರತಿ ಶುಕ್ರವಾರ ...ಳ್ಳೋದು ಜವಾನಿ ಜೋಷಿನ ರೀಲೇ. ಪ್ರೀತಿ, ಪ್ರೇಮ, ಲಾಂಗು, ಮಚ್ಚು ...ಯಾವುದಾದರೆ ಏನಂತೆ! ಹೀರೋನ ನಿಜವಾದ ವಯಸ್ಸು ಎಷ್ಟಾದ್ರೂ ... ಬುದ್ಧಿ ಅವನು ಮಾಡೋ ಪಾತ್ರ ಮಾತ್ರ ಯುವಕಂದೇ. ಹೀರೋಯಿನಿ ...ರ್ಸ್-ಬೀದರ್ ಕಡೆ ನಾಯಕಿರನ್ನ ಹಿಂಗೆ ಗುರುತಿಸೋದು) ಮಾತ್ರ ...ವಲ್ಲೂ, ರೀಲಿನ ರಂಗೀಲಾದಲ್ಲೂ ಹರೆಯದವಳೇ ಇರ್ತಾಳಲ್ಲ, ಮತ್ತೇನು ...ನು! 'ಹಲ್ಕಟ್ ಜವಾನಿ..' ಅನ್ನೋ ಕರೀನ, 'ಸಮ್ ತಿಂಗಮ್, ...ಂಗಮ್..' ಅನ್ನೋ ರಾಣಿ ಒಂಚೂರೇ ಚೂರು ಓಲ್ಡು ಅಷ್ಟೇ. ನೋಡಿ ...ನಿಗಳ ಮಾತು ಬಂದ್ರೆ ಮಾತು ಎಲ್ಲೆಲ್ಲೊ ಜೋಕಾಲಿ ಹೊಡಿತದೆ. ...ಹೇಳ್ಬೇಕು ಅಂತಿರೋದು ಬೇರೆ ಬಗೆಯ ಯೌವನಿಗರ ಬಗ್ಗೆ.

...ಲೈ 28, 2012ರಂದು ಮಂಗಳೂರಿನ ಪಡೀಲಿನಲ್ಲಿರೋ 'ಮಾರ್ನಿಂಗ್ ... ಹೋಂ ಸ್ಟೇ'ಯಲ್ಲಿ ಹುಟ್ಟುಹಬ್ಬದ ಆಚರಣೆಗೆ ಸೇರಿದ್ದವರೂ ...ಯದವರು; ಅವರನ್ನು ಹೊಡೆದು ಬಟ್ಟೆ ಎಳೆದು ಧಾಳಿ ಮಾಡಿದ ...ೂ ಹರೆಯದವರು; ಅದನ್ನು ವರದಿ ಮಾಡಿ ನಮಗೆಲ್ಲರಿಗೂ ತಿಳಿಸಿದ ...ಕ್ಕೇ ಇವತ್ತು ಮಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ...ಯಾಗಿ ಕೂತಿರೋ ಗೆಳೆಯ ನವೀನ್ ಸೂರಿಂಜೆ ಕೂಡ ಒಬ್ಬ 'ಜವಣೆ' ...ಯದವ-ತುಳು). ಅವನನ್ನ ನೋಡ್ಲಿಕ್ಕೆ ಅಂತ ಮೊನ್ನೆ ಹೋದಾಗ ನನ್ನ ... ಇದ್ದವರು ಮುನೀರ್ ಕಾಟಿಪಳ್ಳ ಎಂಬ ಚಳವಳಿಗಾರ ಯುವಕ ... ನಾಲ್ಕು ಜನ ಮಂಗಳೂರಿನ ಯುವ ಮಾಧ್ಯಮ ಮಿತ್ರರು. ಯೌವನಿಗರು ... ಸೀನೇ ಚೇಂಜಾಗಿಬಿಡ್ತದೆ ಸಾರ್. ನಾವು ಅಲ್ಲಿದ್ದ ...ಲು ಗಂಟೆ, ಕಂಬಿಯ ಆಚೆಬದಿ ನವೀನ್, ಈಚೆಬದಿ ... ಆರು ಜನ. ನಾವು ಅವನ ಜೊತೆ ಗಂಭೀರವಾದ ... ಚರ್ಚಿಸಲಿಲ್ಲ, ಒಂದು ಚಾ ದುಕಾನಿನಲ್ಲಿ ಕೂತು ...ೋ ಹಾಗೆ ಬರಿ ತಮಾಷೆ, ವ್ಯಂಗ್ಯ, ನಮ್ಮ ಸಮಯ ...ದು ಹೊರಡೋವಾಗ ನವೀನ್, ತುಂಬ ಶಿಸ್ತಿನ ... ಗೇಟಿನ ಒಳ ಬದಿ ನಿಂತ ಮಗುವಿನ ಹಾಗೆ ... ಅಂತ ಕೈಮಾಡಿದಾಗ ಮಾತ್ರ ನಂಗೆ ಕರುಳು ... ಅಂದು ನಾವಿರೋದು ಜೈಲು ಅಂತ ಅನಿಸಿದ್ದು ... ಜವಾನಿಯ ಜೋಷ್ ಹಿಂಗೇ ಅಂತ ಅಂದುಕೊಳ್ತ ... ಗೇಟಿನ ಹೊರಗೆ ಬಂದರೆ, ಎದುರಿನ ಕಾಂಪ್ಲೆಕ್ಸ್ ...ದೆ ಹರೆಯದ ಹುಡುಗರ ಮಾರಾಮಾರಿ ಹೊಡೆದಾಟ ... ಎಲ್ಲವೂ ಪಕ್ಕದ ಕಾಲೇಜು ಹೈಕ್ಳು. ಅದು ಸಿನಿಮಾದಲ್ಲಿ ... ಹೊಡೆದಾಟ ಅಲ್ಲವೇ ಅಲ್ಲ ಕಣ್ರಿ. ಒಬ್ಬನನ್ನ ... ಹುಡುಗರು ಹಿಡಿದು ಮುಖ ಮೋರೆ ನೋಡ್ದೆ ...ದು. ಚಚ್ಚೋ ಗ್ಯಾಂಗಿನವರು, ಚಚ್ಚಿಸ್ಕೋತ್ತಿದ್ದವನ ...ಗಿನವರೂ ಎದುರಾಬದುರಾ ನಿಂತು ಬೈಕೊಳೋದು. ಪಟ್ಟು ...ಲವಾದದ್ದೇ, ಪೆಟ್ಟು ತಿಂದ ಹುಡುಗ ಮುಖದ ತುಂಬಾ ರಕ್ತ ...ಕ್ಕೊಂಡು ಈಚೆ ಬಂದದ್ದೇ, ಅವನ ಗ್ಯಾಂಗಿನವರು ಎದುರಾಳಿ ಗ್ಯಾಂಗಿನ ...ನನ್ನು ಹಿಡಿದು ಅದೇ ತರ ಚಚ್ಚೋದು.. ಅದೇ ಸೀನು ರಿಪಿಟ್. ...ೀರ್ ಚಳವಳಿಗಾರ, ಯುವಕ ಬೇರೆ, ಗುಂಪಿನ ಮಧ್ಯೆ ನುಗ್ಗಿ ಹೊಡೆಯೋವ್ನನ್ನ ..., ಗುಂಪನ್ನು ದೂರ ಮಾಡಿ ಈಚೆಗೆ ಒಂಚೂರು ಬಂದ್ನೋ ಇಲ್ವೋ, ... ಅದೇ, ಮತ್ತೆ ಇವನ ಮಧ್ಯಪ್ರವೇಶ. ಇದೆಲ್ಲ ನಡೆದದ್ದು ಒಂದು ... ನಿಮಿಷದಲ್ಲಷ್ಟೇ. ಹೊಡೆದಾಟ ನಿಭಾಯಿಸಿ ಬಂದ ಮುನೀರ್ ಬರೀ ...ಕ ಅಲ್ಲ, ಮದುವೆಯಾಗಿರೋ ಸಂಸಾರಸ್ಥ ಕೂಡ. ನನ್ನನ್ನ ಜೈಲಿಗೆ ...ಂಡು ಹೋಗಿ, ನವೀನನನ್ನ ಭೇಟಿ ಮಾಡಿಸಿ, ಒಂದು ಮದುವೆ ...ಾರಂಭಕ್ಕೆ ಹೊರಟೋನು. ಒಳ್ಳೆ ಸ್ಮಾರ್ಟ್ ಹುಡುಗ. ಬಿಳಿ ಅಂಗಿ ...ಕೊಂಡು ಬಂದಿದ್ದ. ಹುಡುಗರನ್ನ ಚೆದುರಿಸಿ 'ಕೋಮು ಕಲಹ ಅಲ್ಲ' ...ಯಲ್ಲಿ ಇದು ಸಾಮಾನ್ಯ, 'ಹುಡಿಗೀರ ವಿಷಯದಲ್ಲಿ ಜಗಳ' ಅಂತ ... ಬರೋ ಹೊತ್ತಿಗೆ ಅವನ ಬಿಳಿ ಅಂಗಿ ಮೇಲೆ ರಕ್ತದ ಕಲೆ. ನನ್ನ ...ಕ್ಕೆ ಕೈಹಾಕಿ ನೀರಿನ ಬಾಟ್ಲಿ ತಕ್ಕೊಂಡು, ರಕ್ತದ ಕಲೆಯನ್ನ ನೀರು ಹಾಕಿ ... ಉಜ್ಜಾ 'ಇನ್ನು ಹಿಂಗೇ ಮದುವೆಗೆ ಹೋಗೋದ ನಾನು.. ಸಾವು..' ... ಬೈಕೋತ ಇದ್ದ. 'ನನ್ನ ಅಂಗಿ ಬಿಚ್ಚಿಕೊಡ್ತೀನಿ ಹಾಕ್ಕೊ' ಅಂದ್ರೆ ಅವನು ...ಗಿ! ಹಾ..ಹ..ನೀರು ಕೊಟ್ಟಿದ್ದೀರಲ್ಲಾ.. ಥ್ಯಾಂಕ್ಸ್..' ಅಂತ ನಗ್ತಾನೆ.

...ಹಾಗೇ, ನಮ್ಮ ಜೊತೆ ಕೋಮು ಸೌಹಾರ್ದ ವೇದಿಕೆಯಲ್ಲಿ ಐದಾರು ...ನಿಗರಿದ್ದಾರೆ. ಇವರಲ್ಲಿ ಮಂಗಳೂರಿನ ಇಸ್ಮತ್, ಆಸಿಫ್, ಇಸ್ಮಾಯಿಲ್ ... ತಮ್ಮ ಯೌವನದೊಳಗೆ ನಂಗು ಒಂದು ಥರ್ಟಿ ಬೈ ಥಾರ್ಟಿ ಸೈಟು ...ರೊ ಒಳ್ಳೆ ದೋಸ್ತ್‌ಗಳು. ನಾನು ಅವರನ್ನ ಏಕವಚನದಲ್ಲೂ ಅವರು ... ಬಹುವಚನದಲ್ಲೂ ಮಾತಾಡಿಸೋದು ವಾಡಿಕೆಯಾದ್ರು, ಮಾತಲ್ಲಿ ... [illegible] ಫ್ರೆಂಡ್. ಈ ಹುಡುಗರು ನನ್ನ ಅವರ ಸಮವಯಸ್ಕ ... ಹಾಗೆ ಎದೆ ಒಳಗೆ ಬಿಟ್ಕೊಂಡಿದ್ದಾರೆ. ಒಟ್ಟಾದ್ರೆ ಲಂಗುಲಗಾಮಿಲ್ಲದ ...ಷೆ, ವ್ಯಂಗ್ಯ ತಮಾಷೆ ಮಾಡ್ಕೊಂಡಿರೊ ಈ ಹುಡುಗರು ವಹಿಸಿದ ... ಮಾತ್ರ ಯಾವುದೇ ತೋರಿಕೆ, ಬಡಿವಾರವಿಲ್ಲದೆ ಸೈಲೆಂಟಾಗಿ ...ರೆ. ನಮ್ಮ ಜೊತೆ ಉಡುಪಿಯಲ್ಲಿ ಮ್ಯಾಂದಿ, ಜಾಂದಿ ಮತ್ತು ತಮ್ಮಿ ... ಮೂರು ಹುಡುಗರಿದ್ದಾರೆ ಸಾರ್. ಅವರ ಹೆಸರನ್ನು ಕೇಳಿ ಮೂಗು ...ೇಡಿ. ಆ ಮೂರೂ ಹುಡುಗರು ನಮಗೆ ಮುನ್ನೂರು ಆನೆ ಬಲ ... ಯಾವುದೇ ಗಾಂಭೀರ್ಯ ಇಲ್ಲದ ಸೈಲೆಂಟಾಗಿರೊ ಈ ಹುಡುಗ್ರು ...ವಿಲ್ಲದ ಯೋಚಿಸಲಾಗದ್ದನ್ನು ಮಾಡಬಲ್ಲರು. ಕರಾವಳಿಯಲ್ಲಿ ಸುಳ್ಯದಿಂದ ...ವರೆಗೆ ತುಳು ಜನರಾಡುವ ಭಾಷೆ. ಇಷ್ಟಿದ್ದೂ ಇಲ್ಲಿನ ಪ್ರಗತಿಪರ ...ಗಳ ಬೀದಿ ಮೆರವಣಿಗೆ, ಗಲ್ಲಿ ಭಾಷಣಗಳಲ್ಲಿ ಎಲ್ಲರೂ ಕನ್ನಡದಲ್ಲಿ ...ತೋದು. ಈ ಸಾರಿಯ ಅಂಬೇಡ್ಕರ್ ಜಯಂತಿಯ ನಮ್ಮ ವಾಡಿಕೆಯ ...ಗೆ ಹಾಗು ಗಲ್ಲಿ ಸಭೆಗೆ ತುಳುವಿನಲ್ಲಿ ಘೋಷಣೆ, ಪ್ಲಕಾರ್ಡ್

'ಬರಿರಲೇ ನೋಡಾಣ.. ಬರಿ ತಲೆಹರಟೆ ಮಾಡ್ತೀರ..' ಅಂತ ಸವಾಲು ಹಾಕ್ಕಿ ಅರ್ಧ ದಿನದಲ್ಲಿ ಎರಡು ಡಜನ್ ಲವಲವಿಕೆಯ ತುಳು ಘೋಷಣೆಗಳನ್ನು ಬರೆದು ತಂದು ಹಾಕಿದ್ದು ಗೊತ್ತ! ಈ ಹುಡುಗರ ಪ್ರೀತಿಯ ಗೆಳೆತನವಿಲ್ಲದಿದ್ದರೆ ಅನೇಕ ಉತ್ತಮ ಸಿನಿಮಾಗಳು, ಬರಹಗಳು ಮತ್ತು ಇಂಟರ್ನೆಟ್ ಲೋಕ ನಂಗೆ ಗೊತ್ತಾಗ್ತಾನೆ ಇರಲಿಲ್ಲ. ಈ ಹುಡುಗರು ತಮಗಿಂತ ಎರಡುಪಟ್ಟು ವಯಸ್ಸಾಗಿರೋ ನನ್ನನ್ನು ತಮ್ಮ ಸ್ನೇಹಕ್ಕೆ ಲಾಯಕ್ಕು ಅಂತ ಸ್ವೀಕರಿಸಿ, ತಮ್ಮ ಹುಡುಗಾಟದಲ್ಲಿ ನಾನು ನನ್ನ ದೈನಂದಿನ ಜೀವನದಲ್ಲಿ ಕಾಣಲಾಗದ ಒಳಲೋಕ ಒಂದನ್ನು ನನಗೆ ಅನಾಯಾಸವಾಗಿ ತೋರಿಸಿಕೊಡುತ್ತಾರೆ. ಹಿಂಗೆ ತಮ್ಮ ಯೌವನಿಗರ ತೆವಲು, ಧಿಮಾಕು, 'ಡೋಂಟ್ ಕೇರ್' ಮನೋಭಾವದಿಂದ ನನ್ನನ್ನು ಸದಾ ಜಗತ್ತಿನ ಅನೇಕ ಮಗ್ಗಲುಗಳಿಗೆ ತೆರೆದು ನಿಲ್ಲಿಸುವ ಸ್ವಾಮಿ, ಅನಿ, ಚೇ ಇವರುಗಳು ಜೀವನಾರ್ಥ ದೂರದೂರುಗಳಲ್ಲಿದ್ದರೂ, ಬಿಡದೆ ತಮ್ಮ ಜವಾನಿ ಜಗತ್ತಲ್ಲಿ ನಂಗೆ ಜಾಗಮಾಡಿಕೊಟ್ಟು ಗೊಡ್ಡಾಗದೆ ಪೊರೆಯುತ್ತಿರುವ ಪೋಕರಿಗಳು. ಇವರನ್ನೆಲ್ಲಾ ನಾವು ರೀಲುರಂಗೀಲಾದಲ್ಲಿ ಸಾಧಾರಣವಾಗಿ ಕಾಣಲಾರೆವು. ಈ ಪೋಕರಿಗಳು ಯಾವೂ ಸಂಘಟನೆ, ಚಳವಳಿ ಅಂತ ಸೀರಿಯಸ್ಸಾಗಿ ತೊಡಗಿಸಿಕೊಂಡಂತೆ ತೋರುವುದಿಲ್ಲ, ಉದ್ದುದ್ದ ಮಾತಾಡೋದಿಲ್ಲ, ಆದರೆ ಉದ್ದುದ್ದ ಮಾತುಗಳನ್ನು ಸೂಕ್ಷ್ಮವಾಗಿ, ತೀಕ್ಷ್ಣವಾಗಿ ಗ್ರಹಿಸಿ ಲೇವಡಿ ಮಾಡಬಲ್ಲರು. ಸಂಘಟನೆಗೆ ಬೇಕಾದ ಪುಡಿಕೆಲಸಗಳನ್ನು ಯಾವ ತೋರಿಕೆ ಇಲ್ಲದೆ ಮಾಡಬಲ್ಲರು. ಯೌವನಿಗರಿಗೆ ಸಹಜವಾದ, ಎಂಥಾದ್ದನ್ನೂ ಹುಡಿ ಹಾರಿಸಿಬಿಡಬೇಕೆಂಬ ಗುಣದಿಂದ (ಇಂಗ್ಲಿಷಲ್ಲಿ ಅನಾರ್ಕಿ ಅಂತರಲ್ವ) ನನ್ನಂಥವರಿಗೆ ನಮ್ಮ ಬೆನ್ನು ತೋರಬಲ್ಲರು. ದಣಿದ ಮಾತಿಗೆ ಹೊಸ ಲವಲವಿಕೆ ತರಬಲ್ಲರು.

ಇಂತಿರುವಾಗ, 'ಅಂಟಿ, ಅಂಕಲ್' ಅಂತ ಕರೆಸಿಕೊಳ್ಳುವ ವಯಸ್ಸಾಗಿದ್ದರೂ ಎಂಥದ್ದನ್ನೂ ಹುಡಿ ಹಾರಿಸುವ ಯೌವನಿಗರ ಜಿಗುಟನ್ನು ಜಾಗೃತವಾಗಿಟ್ಟುಕೊಂಡು, ತನ್ನ ಮಾತಿನಷ್ಟೇ, ಮೌನದಿಂದಲೂ ಚುಚ್ಚಿ ಎಚ್ಚರಿಸುವ ವ್ಯಕ್ತಿತ್ವದ ನನ್ನ ಒಳ್ಳೆ



ಗೆಳೆಯರೊಬ್ಬರು 'ಚೆಂದಾಗಿದೆ ನೋಡ್ರಿ' ಅಂತ ಒಂದು ಯುಟ್ಯೂಬ್ ವಿಡಿಯೊದ ಲಾಡಿಯನ್ನು ಕಳಿಸಿಕೊಟ್ಟರು.. (www.youtube.com/watch?v=aKucPh9xHtM). ಇದು ರಫೀಫ್ ಜಿಯದಹ್ ಎಂಬ ಪ್ಯಾಲಸ್ತೈನಿನ 'ಆಡು ಕಾವ್ಯ ಕಲೆಗಾರ್ತಿ' ತನ್ನ 'ಆಡು ಪದ್ಯ' ಒಂದನ್ನು 'ಆಡಿ ತೋರುವ' ವಿಡಿಯೊ. ಆಡು ಕಾವ್ಯ ಎಂದರೆ ಹಾವಭಾವ, ಧ್ವನಿಯ ಏರಿಳಿತ, ನಿಟ್ಟುಸಿರು ಸಹಿತ ನಾಟಕದಲ್ಲಿನಂತೆ ಬಾಯಲ್ಲಿ ಆಡುವುದಕ್ಕೆಂದು ರಚಿಸಿದ ಪದ್ಯಪಾಠ. 28 ವರ್ಷದ ರಫೀಫ ದೇಶಭ್ರಷ್ಟಳಾಗಿ ಕೆನಡದಲ್ಲಿ ನೆಲೆಸಿರುವ ಪ್ಯಾಲಸ್ತೀನಿ ಕಲೆಗಾರ್ತಿ ಮತ್ತು ಪ್ಯಾಲಸ್ತೈನಿನ ಸ್ವಾತಂತ್ರ್ಯ ಚಳವಳಿಗೆ ಯುವಕರನ್ನು ಸಂಘಟಿಸುತ್ತಿರುವ ಚಳವಳಿಗಾರ್ತಿ. ಪ್ಯಾಲಸ್ತೈನಿ ಸ್ವಯಂ ಆಡಳಿತವಿರುವ ಗಾಜಾ ನಗರದ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸುತ್ತಿರುವಾಗ ರಫೀಫ ಅಲ್ಲಿ ಚಳವಳಿಯ ವಕ್ತಾರೆಯಾಗಿದ್ದಳು. ಟೀವಿ ಮಾಧ್ಯಮದವನೊಬ್ಬ ಆಕೆಗೆ ಕೇಳಿದ ಒಂದು 'ಸೌಂಡ್ ಬೈಟ್'ನ (ಚುಟುಕು ಪ್ರತಿಕ್ರಿಯೆ-ಶಬ್ದ ತುಂಡು) ಧಿಮಾಕು ಆಕೆಯನ್ನು ಕೆರಳಿಸಿತು. ಆ ಸಂದರ್ಭದಲ್ಲಿ ಆಕೆ ರಚಿಸಿದ ಆಡು ಪದ್ಯ 'ವಿ ಟೀಚ್ ಲೈಫ್ ಸಾರ್'. ಈ ಪದ್ಯ ಯೌವನಿಗರ ಜಿಗುಟು, ಪ್ರತಿರೋಧದ ಗುಣ, ಆ ಮೂಲಕ ಅಧಿಕಾರ ವಿರೋಧಕ್ಕೆ ದಕ್ಕುವ ಹೊಸ ಬಗೆಯ ಗತ್ತು ಲವಲವಿಕೆಗಳಿಗೆ ಒಂದು ಒಳ್ಳೆ ಉದಾಹರಣೆಯಾಗಿದೆ. ಸಾಧ್ಯವಿದ್ದವರು ಮೇಲಿನ ಲಾಡಿ ಹಿಡಿದು ವಿಡಿಯೊ ನೋಡಿರಿ. ಸದ್ಯಕ್ಕೆ ಅದರ ಬಿರು ಬೀಸಿನ ಕನ್ನಡ ಅನುವಾದವನ್ನು ಗಟ್ಟಿಯಾಗಿ ಆಡಿಕೊಳ್ಳಿ. ಜವಾನಿ ಜೋಷ್‌ಗೆ ಒಂದು ಸಲಾಮ್ ಹೇಳಿ.

ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್

ಇಂದು ನನ್ನ ದೇಹ ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ

ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ ಶಬ್ದ ತುಂಡು ಪದಮಿತಿಗಳ ಚೌಕಟ್ಟಲ್ಲಿ ಕೂತಿದೆ


ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ ಶಬ್ದ ತುಂಡು ಪದಮಿತಿಗಳ ಚೌಕಟ್ಟಲ್ಲಿ ಕೂತಿದೆ ಸಮತೂಕದ ಮಾತ ಹಣೆಯಲು ಅಂಕಸಂಖ್ಯೆ ತುಂಬಲಾಗಿದೆ

ನಾನು ನನ್ನ ಇಂಗ್ಲಿಷನ್ನು ಹುರಿಮಾಡಿಕೊಂಡೆ, ವಿಶ್ವ ಮಂಡಳಿಯ ನ್ಯಾಯವನ್ನು ಉರು ಹಚ್ಚಿಕೊಂಡೆ

ಇಷ್ಟಾದರೂ ಅವನು ಕೇಳುತ್ತಾನೆ, ಮಿಸ್ ರಿಜಿಯದಹ್, ನೀವು ನಿಮ್ಮ ಮಕ್ಕಳಿಗೆ ಹಗೆಯ ಪಾಠ ಕಲಿಸೋದು ನಿಲ್ಲಿಸಿದರೆ ಎಲ್ಲಾ ತಂಟಾನೆ ನಿಲ್ಲುತ್ತೇ ಅನಿಸೋಲ್ವೆ?

ಅರೆಗಳಿಗೆ ನೀರವ

ಅಂತರಂಗದಿಂದ ಚಾಲಾಯತ್ತೇನೆ ಎಲ್ಲಿಟು ಸಂಯಮ ಚಿತ್ತ ಎಲ್ಲಿರುತ್ತದೆ ಶಾಂತ ಪಟ್ಟಣ ಗಾಝಾ ಪಟ್ಟಣದ ಮೇಲೆ ಬಾಂಬು ಮಳೆಗರೆಯುತ್ತಿರುವಾಗ ಸಾವಧಾನ ಈಗಷ್ಟೇ ಜಾರಿಕೊಂಡಿದೆ.



ಅರೆಗಳಿಗೆ ನೀರವ. ಮಂದಹಾಸ.

ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್

ರಫೀಫ, ಮಂದಹಾಸ ಮರಿಬೇಡ.

ಅರೆಗಳಿಗೆ ನೀರವ

ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್

ನಾವು ಪ್ಯಾಲಸ್ತೀನಿಯರು, ಅವರು ಆಕಾಶದ ಕೊನೆಯಂಚಿನವರೆಗಿನ ನಮ್ಮ

ನೆಲವನ್ನು ಆಕ್ರಮಿಸಿಕೊಂಡಿರುವಾಗಲೂ ನಾವು ಬದುಕಿನಪಾಠ ಕಲಿಸುತ್ತೇವೆ

ದಿಗಂತಾಚೆಗೆಗೂ ಅವರು ವಸತಿ ಪ್ರದೇಶಗಳನ್ನು ಕಟ್ಟಿ ಮತಭೇದದ ಅಡ್ಡಗೋಡೆ ನೆಟ್ಟ ನಂತರವೂ ನಾವು ಬದುಕಿನ ಪಾಠ ಕಲಿಸುತ್ತೇವೆ.

ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್.

ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ ಶಬ್ದ ತುಂಡು ಪದಮಿತಿಗಳ ಚೌಕಟ್ಟಲ್ಲಿ ಕೂತಿದೆ

ನೋಡು ಒಂದು ಮನಕರಗುವ ಕಥೆ ಹೇಳಬಾರದೆ

ರಾಜಕೀಯ ಎಲ್ಲಾ ಯಾಕಮ್ಮ

ನೀನು ಮತ್ತು ನಿಮ್ಮ ಜನರ ಬಗ್ಗೆ ಲೋಕಕ್ಕೆ ತಿಳಿಸೋದು ಬೇಡವೇ, ಒಂದು ಮನಕರಗುವ ಕಥೆ ಹೇಳು

"ಮತಭೇದ" "ಆಕ್ರಮಣ" ಇಂಥ ಮಾತೆಲ್ಲ ಯಾಕಮ್ಮ

ಇಲ್ಲಿ ರಾಜಕೀಯ ಸಲ್ಲ ಕಣಮ್ಮ

ವರದಿಗಾರ ನಾನು, ನನಗೆ ಆಸರೆಯಾಗು, ರಾಜಕೀಯದ ಸುಳಿವಿನಿತೂ ಇರದ ಕತೆಯನ್ನೊಂದ ನಿನಗೆ ಹೊಸೆದು ಕೊಡುವೆ

ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ

ಗಾಝಾ ಪಟ್ಟಣದಲ್ಲಿ ಮದ್ದಿಗಾಗಿ ಹಪಹಪಿಸುವ ಹೆಂಗಸಿನ ಕಥೆ ಹೇಳಬಾರದೇ?

ನಿನ್ನ ಕಥೆಯನ್ನೇ ಯಾಕೆ ಹೇಳಬಾರದು?

ಸೂರ್ಯನಿಗೆ ಗ್ರಹಣ ಹಿಡಿಸೋಷ್ಟು ರಾಶಿ ಮುರಿದ ಮೂಳೆಗಳ ಕಥೆ ನಿನ್ನ ಬಳಿ ಇಲ್ಲವ?

ಸಾವಿರದಿನ್ನೂರು ಪದಗಳ ಮಿತಿ ಮೀರದಂತೆ ನಾಮಾಂಕಿತ ಸಹಿತವಾಗಿ ಸತ್ತವರ ಪಟ್ಟಿ ಕೊಡು.

ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ ಶಬ್ದ ತುಂಡು ಪದಮಿತಿಗಳ ಚೌಕಟ್ಟಲ್ಲಿ ಕೂತಿದೆ ಭಯೋತ್ಪಾದಕರ ನೆತ್ತರ ಬಗ್ಗೆ ಮರುಕವಿಲ್ಲದವರನ್ನು ಕೊಂಚ ಅಲ್ಲಾಡಿಸು

ಅವರಿಗೂ ದುಃಖವಾಗಿದೆ ಕಣಮ್ಮ

ಸತ್ತ ಜಾನುವಾರುಗಳ ಕಂಡು ಅವರಿಗೂ ದುಃಖವಾಗಿದೆ.

ಹೀಗಾಗಿ, ನಾನು ಅವರಿಗೆ ವಿಶ್ವಮಂಡಳಿಯ ನಿರ್ಣಯಗಳನ್ನೂ, ಅಂಕಿ ಸಂಖ್ಯೆಗಳನ್ನೂ ಉಣಿಸುತ್ತೇನೆ, ನಾವು ಖಂಡಿಸುತ್ತೇವೆ, ನಾವೂ ಖೇದ ವ್ಯಕ್ತಪಡಿಸುತ್ತೇವೆ ಮತ್ತು ನಿರಾಕರಿಸುತ್ತೇವೆ.

ಆಕ್ರಮಣಕಾರರು ಮತ್ತು ಆಕ್ರಮಿತರು: ಸಮಬಲದವರೇನಲ್ಲ

ನೂರು ಮಂದಿ ಸತ್ತಿದ್ದಾರೆ, ಇನ್ನೂರು ಮಂದಿ ಸತ್ತಿದ್ದಾರೆ, ಸಾವಿರಾರು ಜನ ಸತ್ತಿದ್ದಾರೆ.

ಯುದ್ಧಾಪರಾಧ, ರಾಶಿ ಕಗ್ಗೊಲೆಗಳ ನಡುವೆ, ನಾನು ಪದಗಳನ್ನು ಕಕ್ಕುತ್ತೇನೆ, "ರಮಣೀಯ"ವಲ್ಲದ, "ಭಯೋತ್ಪಾದಕ"ವಲ್ಲದ ಮಂದಹಾಸದಲ್ಲಿ,

ಮತ್ತೆ ಮರುಎಣಿಕೆ, ಸತ್ತವರು ನೂರು,ಸತ್ತವರು ಸಾವಿರ.

ಯಾರಿದ್ದೀರಲ್ಲಿ? ಯಾರಿಗಾದರೂ ಕೇಳುತ್ತಿದೆಯ?

ಸತ್ತವರ ಬಳಿ ಕೂತು ಗೋಳಿಡಬೇಕೆಂದು ಎಷ್ಟು ಆಸೆ ಗೊತ್ತಾ ನನಗೆ.

ಬರಿಗಾಲಲ್ಲಿ ನಿರಾಶ್ರಿತ ಶಿಬಿರದ ಮೂಲೆಮೂಲೆಗೋಡಬೇಕು, ಒಂದೊಂದು ಮಗುವನ್ನು ಎತ್ತಿಕೊಂಡು, ನಮ್ಮ ಕಿವಿಗಪ್ಪಳಿಸುತ್ತಿದ್ದಂತೆ ಇನ್ನೆಂದೂ ಬಾಂಬುಗಳ ಶಬ್ಧ ಅವುಗಳಿಗೆ ಕೇಳದಂತೆ ಕಿವಿ ಮುಚ್ಚಬೇಕು- ಅಂತ ಆಸೆಯಾಗುತ್ತೆ ಗೊತ್ತಾ,

ಟೀವಿಯಲ್ಲಿ ಸೆರೆಹಿಡಿದ ರಾಶಿಕಗ್ಗೊಲೆ ನನ್ನ ದೇಹ.

ಈಗ ಹೇಳಿಯೇಬಿಡುತ್ತೇನೆ ಕೇಳಿ, ನಿಮ್ಮ ವಿಶ್ವಮಂಡಳಿಯ ನ್ಯಾಯ ತೀರ್ಪುಗಳು ಕಗ್ಗೊಲೆಗಳ ತಡೆದಿಲ್ಲ

ಯಾವ ಶಬ್ದದ ತುಂಡು, ನನ್ನ ಬಾಯಿಂದ ಹೊರಡುವ ಯಾವುದೇ ಶಬ್ದದ ತುಂಡೂ, ಎಷ್ಟೇ ಚೆಂದವಿರಲಿ ನಾನಾಡುವ ಇಂಗ್ಲಿಷ್


ಯಾವ ಶಬ್ದದ ತುಂಡು, ಯಾವ ಶಬ್ದದ ತುಂಡು, ಯಾವುದೇ ಯಾವುದೇ ಶಬ್ದದ ತುಂಡೂ ಅವರಿಗೆ ಮರುಜೀವ ನೀಡದು

ಶಬ್ದದ ತುಂಡಿಗೆ ಆ ಶಕ್ತಿ ಇಲ್ಲ

ನಾವು ಬದುಕನ್ನು ಕಲಿಸುತ್ತೇವೆ, ಸಾರ್.

ನಾವು ಬದುಕನ್ನು ಕಲಿಸುತ್ತೇವೆ, ಸಾರ್.

ನಾವು ಪ್ಯಾಲಸ್ತೀನಿಯರು ಪ್ರತಿ ಮುಂಜಾವಿನಲ್ಲೆದ್ದು ಇಡಿ ಜಗತ್ತಿಗೆ ಬದುಕುಳಿಯೊ ಪಾಠ ಕಲಿಸುತ್ತೇವೆ, ಸಾರ್.



ಫೈಜ್: ಪ್ರೀತಿ ಮತ್ತು ಕ್ರಾಂತಿ ಕವಿ

ರಾಜಕಾರಣಿ ಫೈಜ್ ಆಗಲೀ ಕವಿ ಫೈಜ್ ಆಗಲೀ ಎಂದೂ ದಾರಿ ತಪ್ಪಲಿಲ್ಲ. ಅಷ್ಟೇ ಅಲ್ಲ, ಅವರ ಬದುಕು ಬರಹದಿಂದ ಆಸ್ತಿಕ ಜೀವವಿರೋಧಿಯಾಗಬಲ್ಲ ಹಾಗೂ ನಾಸ್ತಿಕ ಮನುಷ್ಯ ಪ್ರೇಮಿಯಾಗಿರಬಲ್ಲ ಎನ್ನುವುದು ಸಾಬೀತಾಗುತ್ತದೆ. ಹೀಗಾಗಿ ಫೈಜ್ ಬರೀ ಪಾಕಿಸ್ತಾನದ ಕವಿಯಾಗಿ ಉಳಿಯಲಿಲ್ಲ. ಇಂದು ರಾಜಕಾರಣದಲ್ಲಿ ಸಾಹಿತಿಗಳೂ ಸಾಹಿತ್ಯ ಕ್ಷೇತ್ರದಲ್ಲಿ ರಾಜಕಾರಣಿಗಳೂ ಪ್ರವೇಶಿಸಿದ್ದಾರೆ. ಇದರ ಪರಿಣಾಮ ಮನುಷ್ಯ ಬದುಕಿನ ಮಹತ್ವದ ಎರಡೂ ಕ್ಷೇತ್ರಗಳು ಗಬ್ಬೆದ್ದು ಹೋಗಿವೆ. ಇಂತಹ ಸಂದರ್ಭದಲ್ಲಿ ಫೈಜ್ ಬದುಕು ಬರಹವನ್ನು ಮೆಲುಕು ಹಾಕುವುದು ಆವಶ್ಯವೂ ಅಪೇಕ್ಷಣೀಯವೂ ಆಗಿದೆ

ಪಾಕಿಸ್ತಾನದಲ್ಲಿ ಕೇವಲ ಮೂರ್ನಾಲ್ಕು ವರ್ಷಗಳಲ್ಲೇ ಧರ್ಮದ ಆಧಾರದ ಮೇಲೆ ರಾಷ್ಟ್ರ ಕಟ್ಟುವ ಅಬ್ಬರ ತಣ್ಣಗಾಗತೊಡಗಿತ್ತು. ಅಧಿಕಾರ ಹೆಚ್ಚುಕಡಿಮೆ ಮಿಲಿಟರಿ ಕೈಗೆ ಹೋಗಿತ್ತು. ಜಮೀನುದಾರರು, ಬಂಡವಾಳದಾರರು ಮತ್ತು ಮುಲ್ಲಾ ಮೌಲವಿಗಳು ಆಡಳಿತದ ಮೇಲೆ ಬಲವಾದ ಹಿಡಿತ ಸಾಧಿಸಿದ್ದರು. ಸಾಮಾಜಿಕ ನ್ಯಾಯದ ಬಗ್ಗೆ ಮಾತ್ರ ದಿವ್ಯ ನಿರ್ಲಕ್ಷ? ಎಲ್ಲಾ ಅಲ್ಲಾಹ್‌ನ ಇಚ್ಛೆ! ಹೌದು, ಹೀಗಿತ್ತು ಧರ್ಮರಾಜ್ಯದ ಅವಸ್ಥೆ!

ಹರಿತವಾದ ವ್ಯಂಗ್ಯಕ್ಕೆ ಹೆಸರಾದ ಪಾಕಿಸ್ತಾನದ ಖ್ಯಾತ ಹಾಸ್ಯ ಸಾಹಿತಿ ಇಬ್ನೆ ಇನ್ಶಾ ಆ ಧರ್ಮರಾಜ್ಯದ ಪೂರ್ವಾಪರ ವಿದ್ಯಮಾನಗಳನ್ನೆಲ್ಲ ಒಳಗೊಳ್ಳುವಂತೆ ಕಥಾರುವಾಕ್ಯಾಗಿ ಹೀಗೆ ಗ್ರಹಿಸಿದ್ದಾರೆ: "ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಬನಿಯಾಗಳು ಹಾಗೂ ಬಂಡವಾಳದಾರರು ನಮ್ಮನ್ನು ಸುಲಿಯುತ್ತಿದ್ದರು. ಇನ್ನು ಈ ತರದ ಶೋಷಣೆ ನಿಲ್ಲುವಂತಾಗಲಿ ಎಂದು ನಾವು ಅಲ್ಲಾಹ್‌ನಲ್ಲಿ ಮೊರೆಯಿಟ್ಟೆವು. ಅಲ್ಲಾಹ್ ನಮ್ಮ ಅಳಲನ್ನು ಕೇಳಲಿಲ್ಲ. ಅಲ್ಲಾಹ್‌ನ ಆಡಳಿತ ನಮಗೆ ಬೇಕು. ಈ ಹಿಂದೂಗಳ ಸಹವಾಸವೇ ಬೇಡ. ಹಿಂದೂ ಬನಿಯಾಗಳು ಮತ್ತು ಬಂಡವಾಳದಾರರು ನಮ್ಮನ್ನು ಸುಲಿಯಬೇಕೆ? ನಮ್ಮನ್ನು ಮುಸಲ್ಮಾನ್ ಬನಿಯಾಗಳು ಮತ್ತು ಬಂಡವಾಳದಾರರು ಸುಲಿದರೂ ಅಡ್ಡಿ ಇಲ್ಲ. ನಮಗೆ ಇಸ್ಲಾಮೀ ರಾಜ್ಯ ದಯಪಾಲಿಸು ಎಂದು ನಾವು ಅಲ್ಲಾಹ್‌ನಲ್ಲಿ ಮತ್ತೆ ಮೊರೆ ಇಟ್ಟೆವು. ಕೊನೆಗೂ ಅಲ್ಲಾಹ್ ನಮ್ಮ ಮೊರೆ ಆಲಿಸಿದ! ಈಗ ನಾವು ಅಲ್ಲಾಹ್‌ನಿಗೆ ವಿಧೇಯರಾಗಿದ್ದೇವೆ, ಪಿಟ್ಟೆನ್ನುತ್ತಿಲ್ಲ." ಇಂತಹ ಉಸಿರುಗಟ್ಟಿಸುವ ಪರಿಸರದಲ್ಲಿ ಬಂಡುಕೋರ ಕವಿ ಫೈಜ್ ಅಹಮದ್ ಫೈಜ್ ವ್ಯವಸ್ಥೆಯನ್ನು ಪ್ರಶ್ನಿಸತೊಡಗಿದರು. ಇತಿಹಾಸದಿಂದ ಪಾಠ ಕಲಿಯದೆ ಹೋದರೆ ದುರಂತಗಳ ಪುನರಾವರ್ತನೆಯಾಗುತ್ತದೆ ಎನ್ನುವುದೂ ನಮ್ಮ ಅರಿವಿಗೆ ಬಾರದೇ ಹೋಗುತ್ತದೆ. ಹಾಗಾಗಿ ಜನಜಾಗೃತಿ ಅನಿವಾರ್ಯವಾಗುತ್ತದೆ. ಜನಸಾಮಾನ್ಯರ ನೋವು ನಲಿವಿನಲ್ಲಿ ಪಾಲ್ಗೊಳ್ಳಬೇಕೆಂದರೆ ನಾವು ಈ ದಂತಗೋಪುರದಿಂದ ಹೊರ ಬರಲೇಬೇಕು ಎಂದ ಫೈಜ್ ಪ್ರಾಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿದರು. ಜನಪರ ಆಂದೋಲನಗಳಲ್ಲಿ ತೊಡಗಿಸಿಕೊಂಡರು. 1930ರ ದಶಕದಲ್ಲೇ ಕಾರ್ಲ್ ಮಾರ್ಕ್ಸ್‌ನಿಂದ ಪ್ರಭಾವಿತರಾಗಿದ್ದ ಬುದ್ಧಿಜೀವಿಗಳು, ಸಾಹಿತಿಗಳು ಹಾಗೂ ಕಲಾವಿದರು 'ತರಕ್ಕೀ ಪಸಂದ್ ತಹರೀಕ್' (ಪ್ರಗತಿಶೀಲ ಸಾಹಿತ್ಯ ಚಳವಳಿ) ಹುಟ್ಟು ಹಾಕಿದರು. ಫೈಜ್ ಚಳವಳಿಯ ಮುಂಚೂಣಿಯ ನಾಯಕರಾದರು. ಮೂಲತಃ ಮಾನವತಾವಾದಿಯಾಗಿದ್ದ ಫೈಜ್ ಪ್ರಭುತ್ವಕ್ಕೆ ದೊಡ್ಡ ಸವಾಲಾದರು.

"Oh that bloody communist! He should be executed. If I were you I should keep away from him" ಎನ್ನುವ ಪ್ರಭುತ್ವದ ಬೆದರಿಕೆಯ ಮಾತುಗಳನ್ನು ಫೈಜ್ ಲೆಕ್ಕಿಸಲಿಲ್ಲ. ಅಸಂತುಷ್ಟ ಸೇನಾಧಿಕಾರಿಯೊಬ್ಬ ಸರ್ಕಾರವನ್ನು ಉರುಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿದ್ದ. ಅವನು ಮತ್ತು ಅವನ ಕೆಲ ಸಂಗಾತಿಗಳ ಸಂಚು ರಾವಳಪಿಂಡಿ ಸಂಚು ಎಂದು ಪ್ರಸಿದ್ಧವಾಯಿತು. ಆ ಸಂಚಿನಲ್ಲಿ ಪಾಲ್ಗೊಂಡಿದ್ದರೆನ್ನುವ ಆರೋಪ ಹೊರಿಸಿ ಅನೇಕ ಕಮ್ಯುನಿಸ್ಟ್ ಬುದ್ಧಿಜೀವಿಗಳನ್ನು ಜೈಲಿಗಟ್ಟಲಾಯಿತು. ಫೈಜ್ ಸಹ ಜೈಲು ಪಾಲಾದರು. ಹಸನ್ ನಾಸಿರ್‌ನಂತಹ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ಕವಿಯನ್ನು ಜೈಲಿನಲ್ಲೇ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು.

ದೇಶಾದ್ಯಂತ ಅಲ್ಲೋಲಕಲ್ಲೋಲ ಉಂಟಾಯಿತು. ಅತ್ತ ದಮನವನ್ನೇ ಅಸ್ತ್ರವನ್ನಾಗಿಸಿಕೊಂಡ ಪ್ರಭುತ್ವಕ್ಕಾಗಲಿ ಇತ್ತ ಸಾಹಿತ್ಯಲೋಕದ 'ಭಾಗ್ಯವಿಧಾತರೇ' ಆಗಿದ್ದ ವಿಮರ್ಶಕರಿಗಾಗಲಿ ಅಂಜದೆ ಅಳುಕದೆ ತಾವೊಬ್ಬ ಬದ್ಧ ಕಮ್ಯುನಿಸ್ಟ್ ಎಂದು ಫೈಜ್ ಸಾರಿ ಹೇಳಿದರು. ಹೀಗೆ ಪಾಕಿಸ್ತಾನದ ಪಾಬ್ಲೊ ನೆರೂದಾನಾಗಿ ಫೈಜ್ ಜ್ವಾಲಾಮುಖಿಯಂತಹ ತಮ್ಮ ಕಾವ್ಯಕ್ಕೆ ಕಲೆಗಾರಿಕೆಯ ಕೊರತೆಯಾಗದಂತೆ ನೋಡಿಕೊಂಡರು.

ಫೈಜ್ ಬಗ್ಗೆ ಎಲ್ಲೆಡೆ ಅನುಕಂಪ ಮತ್ತು ಬೆಂಬಲ ವ್ಯಕ್ತವಾಯಿತು. ಪ್ರಭುತ್ವಕ್ಕೆ ದಿಕ್ಕು ತೋಚದಾಯಿತು. ಎದುರು ಮೃತ್ಯು, ಸುತ್ತಲೂ ಕತ್ತಲೆ. ಆದಾಗ್ಯೂ ಮಹಾ ಆಶಾವಾದಿಯಾಗಿದ್ದ ಫೈಜ್ ತಮ್ಮ ಜೀವಕ್ಕಾಗಿ ಯಾರಿಗೂ ಗೋಗರೆಯುವಷ್ಟು ಹೇಡಿಯಾಗಿರಲಿಲ್ಲ. ಕೈಯಲ್ಲಿನ ಲೇಖನಿಯನ್ನೇ ಝಳಪಿಸಿದ ಕವಿಗೆ ಎಲ್ಲಿಲ್ಲದ ಆತ್ಮವಿಶ್ವಾಸ.

"ಯಾರೂ ಕಸಿದುಕೊಳ್ಳದಂತೆ ಬಚ್ಚಿಟ್ಟಿರುವೆ ಲೇಖನಿಯನ್ನ ದಾಖಲು ಮಾಡಲೇಬೇಕಲ್ಲ ಈ ನೋವು ಯಾತನೆಯನ್ನ" ಎಂದು ದಮನಕ್ಕೆ ಜಗ್ಗದೆ ಪುಟಿದೆದ್ದರು.

ಈ ಶತಮಾನದ ಮಹಾಕವಿ ಎನಿಸಿಕೊಂಡ ಫೈಜ್ ಇಡೀ ಮನುಕುಲದ ನೋವುನಲಿವು ತಮ್ಮದೆಂದು ಭಾವಿಸಿದರು, ವ್ಯವಸ್ಥೆಯ ವಿರುದ್ಧ ಸಿಡಿದೆದ್ದರು. ಅವರು ತಾವು ನಂಬಿದ ತತ್ವ ಸಿದ್ಧಾಂತಗಳೊಂದಿಗೆ ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಕ್ರಾಂತಿ ಕವಿ ಫೈಜ್ ಜೈ[ಲಿಗೆ] ಹೋಗಿರದಿದ್ದರೆ ಮಹಾಕವಿ ಎನಿಸಿಕೊಳ್ಳುತ್ತಿರಲಿಲ್ಲವೇ ಎನ್ನುವವರಿದ್ದಾರೆ.

> ಕಂಡೇ ಕಾಣುವೆವು ನಾವು
> ಕಾಣಲೇಬೇಕು ನಾವು ಸಹ
> ಆ ದಿನ ಕಾಣುವ ಭಾಗ್ಯ ನಮ್ಮದು
> ಅದು ವಿಧಿಲಿಖಿತ

ಎನ್ನುವ ಅವರ ಕವನ ಪಾಕಿಸ್ತಾನದಲ್ಲಿ ಅಷ್ಟೇ ಹೊರಗೂ ಅನುರಣಿಸಿತು. ಮೇಲ್ನೋಟಕ್ಕೆ ಅದೊ[ಂದು] ಅಪ್ಪಟ ಧಾರ್ಮಿಕ ಭಾವನೆಗಳ ಅಭಿವ್ಯಕ್ತಿ ಎಂದೇ ಅ[...] ತ್ತಿತ್ತು. ಬುದ್ಧಿಜೀವಿಯೊಬ್ಬ ಪರಿಸರವನ್ನು ಅರ್ಥ[...] ಕೊಂಡರಷ್ಟೇ ಸಾಲದು ಅದನ್ನು ಬದಲಾಯಿಸು[...] ಸಹ ಅವನ ಕರ್ತವ್ಯ ಎಂದಿದ್ದ ಮಾರ್ಕ್ಸ್ [...] ರಾತ್ರೋರಾತ್ರಿ ಆದು ಸಾಧ್ಯವಿದ್ದಿರಲಿಲ್ಲ. ತಮ್ಮ ಮಿತಿಗ[...] ಅರ್ಥ ಮಾಡಿಕೊಂಡಿದ್ದ ಕವಿಯ ಕವನಗ[...] ಬದಲಾವಣೆಯ ಅವರ ತುಡಿತವನ್ನು ಗುರುತಿಸಬಹು[...] ಧರ್ಮನಿಷ್ಠರನ್ನು ರೋಮಾಂಚನಗೊಳಿಸುವಂತಹ ಸಾಲು[...] ಕವನದಲ್ಲಿವೆ. ಜೈಲಿನಲ್ಲಿ ಆ ಕವನ ಕೇಳಲು ಜ[...] ಅಧಿಕಾರಿಗಳು ಸಹ ಚಡಪಡಿಸುತ್ತಿದ್ದರು.

> 'ಜಬ್ ಅರ್ಜೆ ಖುದಾಕೇ ಕಾಬೇಸೆ
> ಸಬ್ ಬುತ್ ಉಠವಾಯೆ ಜಾಯೇಂಗೆ
> ಹಮ್ ಅಹ್ಲೆಸಫಾ ಮರ್ದೂದೆ ಹರಮ್
> ಮಸನದ್‌ಪೆ ಬಿಠಾಯೆ ಜಾಯೇಂಗೆ'.

ಅಲ್ಲಾಹ್‌ನ ಭೂಲೋಕದಲ್ಲಿನ ಕಾಬಾದೊಳಗಿಂದ ವಿಗ್ರಹಗಳನ್ನು ಹೊರಹಾಕಲಾಗುವುದು. ಅಲ್ಲಾ[ಹ್‌ನ] ಮನೆಯಿಂದ ಹೊರದೂಡಲ್ಪಟ್ಟ, ಅಹರ್ನಿಶಿ ಅಲ್ಲಾ[ಹ್‌ನ] ನಾಮ ಜಪಿಸುವ ನಮ್ಮನ್ನು ಗದ್ದುಗೆಯಲ್ಲಿ ಕೂರಿಸ[ಲಾಗು]ವುದು. ಇದು ಈ ಸಾಲುಗಳ ಅರ್ಥ. ಆದರೆ ಮು[...] ಎರಡು ಸಾಲುಗಳು ಆಳರಸರಿಗೆ ಬರಸಿಡಿಲಾಗಿ [...]ವಂತಹವು:

> ಸಬ್ ತಾಜ್ ಉಛಾಲೆ ಜಾಯೇಂಗೆ
> ಸಬ್ ತಖ್ತ್ ಗಿರಾಯೆ ಜಾಯೇಂಗೆ
> (ಕಿತ್ತೆಸೆಯಲಾಗುವುದು ಕಿರೀಟಗಳನ್ನ
> ಉರುಳಿಸಲಾಗುವುದು ಸಿಂಹಾಸನಗಳನ್ನ)

ಫೈಜ್ ವ್ಯವಸ್ಥೆಯ ವಿರುದ್ಧದ ತಮ್ಮಲ್ಲಿನ ರೊ[...] ಇಡೀ ದಮನಿತ ಶೋಷಿತ ಸಮುದಾಯದ ರೊಚ್ಚ[...] ಮಾರ್ಪಡಿಸುವ ವಿಧಾನ ಅನನ್ಯವಾದದ್ದು.

> ಉಳಿಯಲಿರುವುದು ಬರಿ ಅಲ್ಲಾಹ್‌ನ ನಾಮ
> ಅವನು ಅಮೂರ್ತವೂ ಹೌದು ಮೂರ್ತವೂ ಹ[...]
> ಅವನು ವೀಕ್ಷಕನೂ ಹೌದು ನೋಟವೂ ಹ[...]
> ಮೊಳಗಲಿದೆ ಅನಲ್ ಹಕ್ ಘೋಷಣೆ
> ಅದು ನಾನೂ ಹೌದು ನೀನೂ ಹೌದು
> ಮನುಜರೆಲ್ಲ ಅಲ್ಲಾಹ್‌ನ ಸೃಷ್ಟಿ
> ಬರಲಿದೆ ಅವರದೇ ರಾಜ್ಯ
> ಅದು ನಾನೂ ಹೌದು ನೀನೂ ಹೌದು

ಹೀಗೆ ಫೈಜ್ ಸಮಾನತೆಯನ್ನಾಧರಿಸಿದ ಸಮಾ[ಜಕ್ಕಾಗಿ] ಹಂಬಲಿಸುತ್ತಾರೆ. ಸಮಾನತೆಯನ್ನಾಧರಿಸಿದ ಅಲ್ಲಾ[ಹ್‌ನ] ರಾಜ್ಯದ ಕನಸು ನನಸಾಗುವುದನ್ನು ಕ್ರಾಂತಿ ಕವಿ ಬಣ್ಣಿಸು[...] ಧಾರ್ಮಿಕ ಮನೋಭಾವದ ಜನತೆಗೆ ಆಪ್ಯಾಯ[ಮಾನ]ವೆನಿಸುತ್ತದೆ.

ಫೈಜ್ ಕಾವ್ಯ ಕೃಷಿಗೆ ತೊಡಗಿದಾಗ ಉರ್ದು ಕಾ[...] ಗಜಲ್ ಪ್ರಕಾರ ಇನ್ನೂ ತನ್ನ ಪ್ರಾಬಲ್ಯ ಮೆರೆಯತೊಡ[...] ಉರ್ದು ಕಾವ್ಯವೆಂದರೆ ಗಜಲ್. ಗಜಲ್ ಬಿಟ್ಟರೆ ಅ[...] ಇನ್ನೇನಿಲ್ಲ ಎನ್ನುವಂತಹ ಪರಿಸರ. ಗಜಲ್ ಪದದ ಅ[...] ನಲ್ಲೆಯೊಂದಿಗೆ ಸಲ್ಲಾಪ. ಪ್ರೀತಿಪ್ರೇಮವೇ ಗಜಲ್‌ನ ಮ[...] ಬಲ್ಲದು ಎನ್ನುವುದು ಕವಿಗಳ ಬಲವಾದ ನಂಬಿಕೆಯಾ[...] "ಗಜಲ್ ಬರೆಯಬೇಕೆಂದರೆ ಪ್ರೀತಿಸಲೇಬೇಕು. ಇಲ್ಲ[...] ಬರೆಯುವ ಗೊಡವೆಗೇ ಹೋಗಕೂಡದು" ಎಂದು [...] ಅವರೇ ಕಿರಿಯ ಕವಿಗಳಿಗೆ ಕಿವಿಮಾತು ಹೇಳಿದ್ದ[...]

ಪ್ರೀತಿ ಪ್ರೇಮ ಕತ್ತಲು ಕೋಣೆಗೇ ಸೀಮಿತವಾಗಿರ[...] ಎಂದು ಭಾವಿಸಿದಂತಿದ್ದ ಪುರೋಹಿತಶಾ[...] ಮನೋಭಾವವನ್ನು ಲೇವಡಿ ಮಾಡುವ ಉದ್ದೇಶವಿದ್ದಿರ[...] ಫೈಜ್‌ಗೆ. ವ್ಯವಸ್ಥೆಯ ವಿರುದ್ಧ ಬಂಡೇಳಲು ಪ್ರೀತಿಸ[...] ಪ್ರೀತಿಸಿ ಬದುಕನ್ನು ಬಗೆದು ನೋಡಬೇಕು ಎ[...] ಫೈಜ್ ತಾವೊಬ್ಬ ರೊಮ್ಯಾಂಟಿಕ್ ಕವಿ ಎಂದೇ ಭಾವಿ[...] ವಾಸ್ತವದಲ್ಲಿ ಪ್ರಿಯತಮೆಯನ್ನು ಕದ್ದು [...] ಭೇಟಿಯಾಗುವುದೇ ಒಂದು ಸಾಹಸ. ಪ್ರತಿಯೊಂದು [...] ಸಫಲವಾಗುವುದೆಂದು ಹೇಳಲಾಗದು. ಹೀಗೆ

ಫೈಜ್ ನೆನಪಿನಲ್ಲಿ

ಸೆರೆಮನೆ ಸಂವೇದನೆ ಮತ್ತು ಸಾಹಿತ್ಯ

ವಿಚಾರಗೋಷ್ಠಿ ಮತ್ತು ಕಾವ್ಯಮೇಳ

ದಿನಾಂಕ 9.12.12 ಬೆಳಗ್ಗೆ 10 ಗಂಟೆಗೆ

ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು

ವಿಚಾರಗೋಷ್ಠಿ

ಸ್ವಾಗತ	:	ಗೌರಿ ಲಂಕೇಶ್
ಪ್ರಸ್ತಾವನೆ	:	ಎಚ್.ವಿ. ವಾಸು
ಕ್ರಿಯಾಶೀಲ ಹೋರಾಟ ಮತ್ತು ಸಾಹಿತ್ಯ	:	ಎಚ್.ಎಸ್. ರಾಘವೇಂದ್ರರಾವ್
ಕನ್ನಡ ಸಾಹಿತ್ಯ-ಬಂಧನದ ಪರಿಕಲ್ಪನೆ	:	ರಹಮತ್ ತರೀಕೆರೆ
ಫೈಜ್ ನೆನಪು	:	ಎಸ್. ಬಾಗೇಶ್ರೀ

ಪ್ರತಿಸ್ಪಂದನೆ

ಜ.ನಾ. ತೇಜಶ್ರೀ	ಎಸ್.ಎ.ಎಂ. ಇಸ್ಮಾಯಿಲ್
ಬಿ. ಪೀರ್ ಬಾಷಾ	ಅರುಣ್ ಜೋಳದಕೂಡ್ಲಿಗಿ
ನಗರಿ ಬಾಬಯ್ಯ	ಕುಮಾರ್ ಸಮತಳ

ಅನುವಾದಿತ ಕಾವ್ಯಮೇಳ

ಲಕ್ಷ್ಮೀಪತಿ ಕೋಲಾರ, ನಗರಗೆರೆ ರಮೇಶ್, ದು ಸರಸ್ವತಿ, ಎಂ.ಆರ್. ಕಮಲ, ಎಸ್. ಗಂಗಾಧರಯ್ಯ, ಕೃಷ್ಣಮೂರ್ತಿ ಬಿಳಿಗೆರೆ, ಕವಿತಾ ರೈ, ರಾಮಲಿಂಗಪ್ಪ ಟಿ. ಬೇಗೂರು, ಎಚ್.ಎಸ್. ಆರತಿ, ವಿಕ್ರಮ್ ವಿಸಾಜಿ, ರವಿಕೃಷ್ಣಾ ರೆಡ್ಡಿ, ರಂಗನಾಥ ಕಂಟನಕುಂಟೆ, ವಿ.ಎಂ. ಮಂಜುನಾಥ, ವಿ.ಆರ್. ಕಾರ್ಪೆಂಟರ್, ಚೀಮನಹಳ್ಳಿ ರಮೇಶಬಾಬು, ವಡ್ಡಗೆರೆ ನಾಗರಾಜಯ್ಯ, ಚಂದ್ರಶೇಖರ ಐಜೂರು, ಮಂಜುನಾಥ್ ಲತಾ, ಕೆ. ಮಲರ್‌ವಿಳಿ, ಲಕ್ಕೂರು ಸಿ. ಆನಂದ, ಶಿವಲಿಂಗಂ, ವೆಂಕಟೇಶ ನೆಲ್ಲುಕುಂಟೆ, ಜಯಶಂಕರ್ ಹಲಗೂರ್, ಎಸ್. ಕುಮಾರ್, ಡಿ.ಕೆ. ರಮೇಶ್

ಸಮಾರೋಪ ನುಡಿ: ಬಂಜಗೆರೆ ಜಯಪ್ರಕಾಶ

ಪರಸ್ಪರ ಬಳಗ — ಗೌರಿ ಲಂಕೇಶ್ ಪತ್ರಿಕಾ ಬಳಗ

ಎಲ್ಲರಿಗೂ ಪ್ರೀತಿಯ ಸ್ವಾಗತ

ನನದಲ್ಲಿ ಒಬ್ಬ ಯುವತಿಯನ್ನು ಮನಸಾರೆ ಪ್ರೀತಿಸಿ ಹೃದಯಿಯಾದ ಯುವಕವಿ ಸುತ್ತಾ ಬದುಕು, ಮಾನವರ ಗೋಳಿನ ಮುಂದೆ ತನ್ನ ವೈಯಕ್ತಿಕ ನೋವು ಮುಖ್ಯವಾಗಬಾರದೆಂದು ತೀರ್ಮಾನಿಸಿದರು.

ಆದರೆ ಪ್ರೀತಿಯ ನೋವು ಉರ್ದು ಕಾವ್ಯದ ಕೈಸ್ ಪರಂಪರೆಗೆ ಬುನಾದಿ ಹಾಕಿತ್ತು. ಉರ್ದು ಕಾವ್ಯಲೋಕದ ಸಹ ತನ್ನ ಪ್ರಿಯತಮೆಯ ದರ್ಶನಕ್ಕಾಗಿ 'ಲೈಲಾ, ' ಎಂದು ದಿಕ್ಕೆಟ್ಟು ಅಲೆದಾಡಿದ. ಲೈಲಾಳ ದರ್ಶನವೇ ಪಾಲಿಗೆ ಅಲ್ಲಾಹ್‌ನ ದರ್ಶನ ಎನ್ನತೊಡಗಿದ ಈ ನಿಗೆ ಪುರೋಹಿತಶಾಹೀ 'ಮಜನೂ' (ಹುಚ್ಚ) ಎನ್ನುವ ದು ನೀಡಿತು. ಮಾನಸಿಕ ಅಸ್ವಸ್ಥತೆ ಒಬ್ಬ ವ್ಯಕ್ತಿಯನ್ನು ಹುಚ್ಚನನ್ನಾಗಿಸಬಹುದು ಇಲ್ಲವೆ ಅತ್ಯಂತ ಸೃಜನಶೀಲನನ್ನಾ ಗಿಸಬಹುದು. ಅವನು ಒಂದು ಪರಂಪರೆಯನ್ನೇ ಹುಟ್ಟುಹಾಕಬಲ್ಲನು. ಈ ಕೈಸ್ ಪಂಥದ ಮೇಲ್ಪಂಕ್ತಿಯ ಎನಿಸಿಕೊಂಡ ಫೈಜ್ ಪ್ರೇಮದ ಹಾಡನ್ನೂ ದರು ಕ್ರಾಂತಿಯ ಕಹಳೆಯನ್ನೂ ಊದಿದರು.

ಬದುಕಿನ ಅನುಭವಗಳಿಗೆ ತನ್ನ ಮುದ್ರೆಯೊತ್ತಿ ಗಳನ್ನು ಮರಳಿಸುವುದೇ ಕವಿಯ ಕರ್ತವ್ಯ ಎಂದಿದ್ದರು ನಲ್ಲೆಯ ತೊಂಡೆಹಣ್ಣಿನಂತಹ ತುಟಿಯ ಮೇಲೆ ವ ನಗುವು, ಜೀವಕಾಂತಿ ಹೊಮ್ಮಿಸುವ ಕಣ್ಣು ಮಲ್ ತೋಳು. ... ಈ ಪ್ರೇಮದ ಸುಂದರ ಚಿ ಆಸೆಗಳ ಮಸಣ, ಹಸಿವನ್ನು ಬೆಳೆವ ನೆಲ, ರಕ್ತ ಗುವ ಕೊಳಕು ಮೈ, ಮಾರುಕಟ್ಟೆಯಲ್ಲಿ ಾಟವಾಗುವ ಮನುಷ್ಯ ದೇಹ ಹಾಗೂ ಮನಸ್ಸು ನ್ನು ಕಾಡತೊಡಗಿದವು. ಬದುಕಿನ ಈ ಕರಾಳನೋಟ ತನ್ನ ಮನದನ್ನೆಯೆದುರು ಬಿಚ್ಚಿಟ್ಟು ಕವಿ ಮನಸ್ಸು ಮಾಡಿಕೊಂಡರು. ಅದು ಅವರ ಪ್ರಸಿದ್ಧ ಕವನ ಮುಸೆ ಪಹಲೀಸಿ ಮೊಹಬ್ಬತ್ ನ ಮಾಂಗ್...' ಮೂಲಕ ಾಯಿತು.

"ಇಂದಿಗೂ ಇದೆ ಚುಂಬಕ ಶಕ್ತಿ ನಿನ್ನ ಚೆಲುವಿಗೆ
ಪ್ರೀತಿ ಜತೆ ಬೇರೆ ನೋವು ಸಹ ಇದೆ ಲೋಕದಲ್ಲಿ
ನನ್ನಿಂದ ಮೊದಲಿನಂತಹ ಒಲವನ್ನು
ಬಯಸದಿರು ಓ ನನ್ನ ನಲ್ಲೆ" ಎಂದು ಬದುಕಿನ

ವಾಸ್ತವಕ್ಕೆ ಮುಖಾಮುಖಿಯಾಗಿದ್ದ ಫೈಜ್‌ಗೆ ಪ್ರೇಮದ ಅನಿವಾರ್ಯವಾಯಿತು. ಹೀಗೆ ಜಗವ ಬುದುಮ್ಮಾನವನ್ನು ತನ್ನದಾಗಿಸಿಕೊಂಡು ಜೀವನ ಂತ ದಮನಿತರು ಮತ್ತು ಶೋಷಿತರಿಗೆ ಅವರು ಒತ್ತಾಸೆಯಾಗಿ ನಿಂತರು. ಶೋಷಿತ ಸಮುದಾಯ ತನಗೆ ಉಜ್ವಲ ಭವಿಷ್ಯವಿದೆಯೆನ್ನು ವುದನ್ನು ಯುದಂತಾಗಬಾರದು ಎನ್ನುವುದನ್ನು ಫೈಜ್ ಒತ್ತಿ ುತ್ತಿದ್ದರು.

ಇಲ್ಲಿಯೇ ಉರ್ದು ಕಾವ್ಯದ ಇನ್ನೊಂದು ಪಂಥ ಸೂರ್ ಪರಂಪರೆ'ಯೊಂದಿಗೆ ಫೈಜ್ ಬೆರೆತುಹೋಗು ಉರ್ದು ಕಾವ್ಯದಲ್ಲಿ ಮತ್ತೆ ಹೆಚ್ಚು ಪ್ರಭಾವಶಾಲಿಯಾಗಿ ದುನಿಂತ ಈ ಪರಂಪರೆಗೆ ಫೈಜ್ ಕೊಡುಗೆ ನಾರ್ಹವಾದದ್ದು. 'ಅನಲ್ ಹಕ್' (ನಾನೇ ಅಲ್ಲಾಹ್) ವ ಮನ್ಸೂರ್ ಹಲ್ಲಾಜ್‌ನ ಸೂಕ್ತಿಯೇ ಮನ್ಸೂರ್ ಪರೆಯ ಧ್ಯೇಯವಾಕ್ಯವಾಯಿತು. 'ನಮ್ಮ ಹಣೆಬರಹ ಕೈಯಲ್ಲಿದೆ' ಎನ್ನುವ ನಂಬಿಕೆ ಹೊಸ ಸಮಾಜ ಬಲ್ಲದು ಎಂದು ಫೈಜ್ ಸಾರಿದರು. ಫೈಜ್‌ರಿಗೆ ತಿಯೇ ಲೈಲಾ. ಈ ಲೈಲಾಳಿಗಾಗಿಯೇ ಅವರು ಸದಾ ಲಿಸಿದ್ದು.

ಹೀಗೆ ಫೈಜ್ 'ಕೈಸ್' ಮತ್ತು 'ಮನ್ಸೂರ್' ಪರೆಗಳನ್ನು ಮೇಳೈಸಿ ಉರ್ದು ಕಾವ್ಯಕ್ಕೆ ಹೊಸ ಮ ನೀಡಿದ್ದಾರೆ. ಉರ್ದು ಕಾವ್ಯದಲ್ಲಿ ಅಲಂಕಾರದ ಮಗಾರಿಕೆಯನ್ನು ಗಮನಿಸಿದ ಫೈಜ್ ಆದಷ್ಟು ಸರಳ ಗೂ ನೇರವಾದ ಶೈಲಿಯಲ್ಲಿ ಶ್ರೋತೃಗಳ ಮನಸೂರೆಗೊಯ್ಯುವಂತೆ ಕಾವ್ಯ ರಚಿಸುವುದಕ್ಕೆ ಬದಲಾಗಿ ಸಾಂಪ್ರದಾಯಿಕ ಕಾವ್ಯಶೈಲಿಯನ್ನೇ ಹೆಚ್ಚು ಪರಿಣಾಮಕಾರಿಯಾಗಿ ಮಾಡಿದರು. ರಾಶಿರಾಶಿ ಸಾಹಿತ್ಯ ಕೃಷಿ ಮಾಡಿದವರು ಹೆಸರಿಗಾಗಿ ಪರದಾಡಿ ಕಡೆಗೂ ಇತಿಹಾಸದ ಪುಟದಲ್ಲಿ ಒಂದು 'ಕ್ಲಾಮಾ' ಕೂಡ ಆಗಿ ಉಳಿಯಲಿಲ್ಲ. ಫೈಜ್ ಬರೆದದ್ದು ಬಹಳೇನಲ್ಲ, ಆದರೆ ಅವರು ಒಂದು ವೈಚಾರಿಕ ಪರಂಪರೆಯನ್ನು ಹುಟ್ಟು ಹಾಕಿದರು.

ಎಂಥ ಘೋರ ಆಪತ್ತನ್ನೆದುರಿಸಿದಾಗಲೂ ಎದೆಗುಂದದೆ ಯಾರ ಕುಚೇಷ್ಟೆಗೂ ಅನವಶ್ಯಕವಾಗಿ ರೇಗದೆ ಕೊನೆಯತನಕ ಫೈಜ್ ತಮ್ಮ ಸೌಮ್ಯ ಸ್ವಭಾವ ಉಳಿಸಿಕೊಂಡು ಬಂದರು. ಅಂತಹವರು ಸೇನೆಯಲ್ಲಿ ಭರ್ತಿಯಾಗಿದ್ದರು ಎಂಬುದು ಎಷ್ಟೋ ಜನರಿಗೆ ಆಶ್ಚರ್ಯದ ಸಂಗತಿ ಎನಿಸುತ್ತದೆ. ಮಹಾಯುದ್ಧದ ಹೊತ್ತಿಗೆ ಅವರು ಲೆಫ್ಟಿನೆಂಟ್ ಕರ್ನಲ್ ಆಗಿ ಎಂ.ಬಿ.ಇ ಪ್ರಶಸ್ತಿಗೆ ಭಾಜನರಾದರು. ಸೇನೆಯಿಂದ ನಿವೃತ್ತರಾಗಿ ಬಂದಮೇಲೆ ಅವರು 'ಪಾಕಿಸ್ತಾನ್ ಟೈಮ್ಸ್', 'ಇಮ್ರೋಜ್' ಮತ್ತು 'ಲೈಲೊ ನಹ್ರ' ಪತ್ರಿಕೆಗಳ ಸಂಪಾದಕರಾದರು.

ಪಾಕಿಸ್ತಾನ್ ಕಾರ್ಮಿಕ ಸಂಘಗಳ ಒಕ್ಕೂಟದ ಉಪಾಧ್ಯಕ್ಷರಾಗಿದ್ದ ಫೈಜ್ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಪಾಕಿಸ್ತಾನವನ್ನು ಎರಡು ಸಲ ಪ್ರತಿನಿಧಿಸಿದ್ದರು. ಅವರ ಪ್ರತಿಭೆ ಮತ್ತು ಸೇವೆಯನ್ನು ಮನ್ನಿಸಿ ಅವರಿಗೆ 1962ರಲ್ಲಿ ಲೆನಿನ್ ಶಾಂತಿ ಪ್ರಶಸ್ತಿ ನೀಡಲಾಯಿತು. ನೊಬೆಲ್ ಪ್ರಶಸ್ತಿಗೂ ಅವರ ಹೆಸರನ್ನು ಪರಿಗಣಿಸಲಾಯಿತು. ಪಾಕಿಸ್ತಾನದ ಸರ್ವಾಧಿಕಾರಿಗಳೆಲ್ಲ ಭಾರತದ ವಿರುದ್ಧ ನಡೆಸಿದ ದುರುಳತನದ ಪ್ರಚಾರವನ್ನು ಫೈಜ್ ಬಲವಾಗಿ ಖಂಡಿಸಿದ್ದರು. ಭಾರತದ ಜೊತೆಗಿನ ಸಂಬಂಧಗಳು ಸುಧಾರಣೆಯಾದಾಗೆಲ್ಲ ಅವರು ಭಾರತಕ್ಕೆ ಆಗಮಿಸುತ್ತಿದ್ದರು. ಅವರನ್ನು ಕಂಡು ಅವರ ಕಾವ್ಯವಾಚನದಿಂದ ಅವರ ಅಭಿಮಾನಿಗಳೆಲ್ಲ ರೋಮಾಂಚಿತರಾಗುತ್ತಿದ್ದರು.

1984ರಲ್ಲಿ ಹಾಡು ಹಕ್ಕಿ ಫೈಜ್ ಭಾರತಕ್ಕೆ ಮತ್ತೆ ಭೇಟಿ ನೀಡುವ ಸುದ್ದಿ ವಸಂತದ ಆಗಮನದ ಸೂಚಕವಾಗಿತ್ತು. ತಮ್ಮ ನೆಚ್ಚಿನ ಕವಿಯನ್ನು ಕಾಣಲು ಹಾಗೂ ಅವರ ಕಾವ್ಯವನ್ನಾಲಿಸಲು ಅವರ ಅಭಿಮಾನಿಗಳು ಚಡಪಡಿಸತೊಡಗಿದರು. ಅಷ್ಟರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಹತ್ಯೆ ನಡೆಯಿತು. ನಂತರ ಭುಗಿಲೆದ್ದ ವ್ಯಾಪಕ ಹಿಂಸಾಚಾರದಿಂದಾಗಿ ಅವರು ತಮ್ಮ ಭೇಟಿಯನ್ನು ಮುಂದೂಡಿದರು. ಇದ್ದಕ್ಕಿದ್ದಂತೆ ಹೃದಯಾಘಾತಕ್ಕೀಡಾದ ಫೈಜ್ ತಮ್ಮ ಪ್ರತೀಕ್ಷೆಯಲ್ಲಿದ್ದ ಕಾವ್ಯ ಪ್ರೇಮಿಗಳನ್ನು ನಿರಾಶಗೊಳಿಸಿದರು. ಪ್ರೀತಿ ಮತ್ತು ಕ್ರಾಂತಿಯ ಕವಿಯ ಮರಣಕ್ಕೆ ಜಗತ್ತಿನಾದ್ಯಂತ ಮಾನವೀಯ ಕನಸುಗಾರರು ಕಣ್ಣೀರು ಮಿಡಿದರು.

ರಾಜಕಾರಣಿ ಫೈಜ್ ಆಗಲೀ ಕವಿ ಫೈಜ್ ಆಗಲೀ ಎಂದೂ ದಾರಿ ತಪ್ಪಲಿಲ್ಲ. ಅಷ್ಟೇ ಅಲ್ಲ ಅವರ ಬದುಕು ಬರಹದಿಂದ ಆಸ್ತಿಕ ಜೀವವಿರೋಧಿಯಾಗಬಲ್ಲ ಹಾಗೂ ನಾಸ್ತಿಕ ಮನುಷ್ಯ ಪ್ರೇಮಿಯಾಗಿರಬಲ್ಲ ಎನ್ನುವುದು ಸಾಬೀತಾಗುತ್ತದೆ. ಹೀಗಾಗಿ ಫೈಜ್ ಬರೀ ಪಾಕಿಸ್ತಾನದ ಕವಿಯಾಗಿ ಉಳಿಯಲಿಲ್ಲ. ಅವರ ಜನ್ಮಶತಮಾನೋತ್ಸವವನ್ನು ಪಾಕಿಸ್ತಾನದಲ್ಲಿ ಅಷ್ಟೇ ಅಲ್ಲ ಭಾರತ ಮೊದಲು ಮಾಡಿ ಜಗತ್ತಿನ ಅನೇಕ ದೇಶಗಳಲ್ಲಿ ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ಇಂದು ರಾಜಕಾರಣದಲ್ಲಿ ಸಾಹಿತಿಗಳೂ ಸಾಹಿತ್ಯಕ್ಷೇತ್ರದಲ್ಲಿ ರಾಜಕಾರಣಿಗಳೂ ಪ್ರವೇಶಿಸಿದ್ದಾರೆ. ಇದರ ಪರಿಣಾಮ ಮನುಷ್ಯ ಬದುಕಿನ ಮಹತ್ವದ ಎರಡೂ ಕ್ಷೇತ್ರಗಳು ಗಬ್ಬೆದ್ದು ಹೋಗಿವೆ. ಇಂತಹ ಸಂದರ್ಭದಲ್ಲಿ ಫೈಜ್ ಬದುಕು ಬರಹವನ್ನು ಮೆಲುಕು ಹಾಕುವುದು ಅವಶ್ಯವೂ ಅಪೇಕ್ಷಣೀಯವೂ ಆಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ.

■ ಹಸನ್ ನಯೀಂ ಸುರಕೋಡ


ಉಡಾಳ ಉಡುಗನ ದಿನಚರಿಯ ಪುಟಗಳು

ಗದಗ ಜಿಲ್ಲೆ ರೋಣ ತಾಲೂಕಿನ ರಾಜೂರಿನ ಗೆಳೆಯ ಟಿ.ಎಸ್.ಗೊರವರ 'ಭ್ರಮೆ' ಎನ್ನುವ ತಮ್ಮ ಮೊದಲ ಸಂಕಲನದಲ್ಲೇ ಭರವಸೆಯನ್ನು ಹುಟ್ಟಿಸಿ ಗಮನ ಸೆಳೆದವರು. ಹಲವು ಸ್ಪರ್ಧೆಗಳಲ್ಲಿ ಕಥೆಗಾಗಿ ಬಹುಮಾನ ಗಳಿಸಿ ಈ ಭರವಸೆಯನ್ನು ಮತ್ತಷ್ಟು ಗಟ್ಟಿಗೊಳಿಸಿದವರು. ಇದೀಗ ಬಾಲ್ಯದ ಅನುಭವ ಕಥನವನ್ನು ಕಟ್ಟಿಕೊಡುವ ಅವರ 'ಆಡು ಕಾಯೋ ಹುಡುಗನ ದಿನಚರಿ' ಹಲವು ಕಾರಣಗಳಿಗೆ ಬಹಳ ಮುಖ್ಯ ಅನ್ನಿಸುತ್ತದೆ. ಉತ್ತರ ಕರ್ನಾಟಕದ ಜನಜೀವನದ ದಿನ ಬದುಕಿನ ನಾಡಿಮಿಡಿತವನ್ನು ತುಂಬಾ ಸಶಕ್ತವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿನ ಅನುಭವಗಳ ಮೈದಡವಿದರೆ ಹಳ್ಳಿಬದುಕಿನ ಘಮಲು, ದುಡಿಮೆಯ ಬೆವರ ವಾಸನೆ, ಜನರ ಬದುಕಿನ ಸಣ್ಣಸಣ್ಣ ಸಂಭ್ರಮಗಳು, ಮುಸುಕಿನ ಗುದ್ದಾಟಗಳು ನವಿರಾಗಿ ನಮ್ಮೊಳಗನ್ನು ಆವರಿಸಿಕೊಳ್ಳುತ್ತವೆ.



ಟಿ.ಎಸ್.ಗೊರವರ

ನೂರು ಪುಟದ ಈ ಪುಸ್ತಕದಲ್ಲಿ ಹದಿನಾರು ಕಂತುಗಳ ಬರಹವಿದೆ. ಉಡಾಳ ಉಡುಗನ ದಿನಚರಿಯಿಂದ ಆರಂಭವಾದದ್ದು ಕನಸಾಗಿ ಕಾಡುವ ಗಂಧವತಿ ಬರಹದಲ್ಲಿ ಧಾರವಾಡಕ್ಕೆ ಎಂ.ಎ ಪತ್ರಿಕೋದ್ಯಮ ಓದಲು ಸೇರಿಕೊಳ್ಳುವತನಕ ಬರಹದ ಪಯಣವಿದೆ. ಈ ಬರಹ ಓದುತ್ತಾಹೋದಂತೆ, ಉತ್ತರ ಕರ್ನಾಟಕದ ಬಾಲ್ಯಕಾಲದ ಸಮೃದ್ಧ ಅನುಭವ ಲೋಕವೊಂದು ತೆರೆದುಕೊಳ್ಳುತ್ತಾ ಹೋಗುತ್ತದೆ. ಜೀತಗಾರನ ಮಗನೊಬ್ಬ ಆಕಸ್ಮಿಕವಾಗಿ ಅಕ್ಷರಲೋಕಕ್ಕೆ ಮುಖ ಮಾಡಿದ್ದರ ಫಲವೇ ಈ ಬರಹ. ಹಾಗಾಗಿಯೇ ಇಲ್ಲಿನ ದಿನಚರಿ ವೈಯಕ್ತಿಕ ಹಿರಿಮೆ ಗರಿಮೆಯನ್ನು ತೂಗಿ ಕೊಡುವಂಥದ್ದಲ್ಲ, ಬದಲಾಗಿ ಇದೊಂದು ಉಡಾಳ ಹುಡುಗನ ದಿನಚರಿ.



ಆಡು ಕಾಯೋ ಹುಡುಗನ ದಿನಚರಿ
(ಅನುಭವ ಕಥನ)
ಲೇಖಕ: ಟಿ.ಎಸ್.ಗೊರವರ
ಪುಟ: 100, ರೂ 80/-, 2011

ಇಲ್ಲಿ ಗೊರವರ ಕಟ್ಟಿಕೊಡುವ ಅನುಭವ ಲೋಕವು ರಾಜೂರು ಸುತ್ತ ಹಬ್ಬಿದ್ದರೂ, ಇದರ ಬೇರುಗಳು ಉತ್ತರ ಕರ್ನಾಟಕದ ಹಳ್ಳಿಗಳೊಳಗೆ ಮೈಚಾಚಿದಂತಿದೆ. ಆ ಕಾರಣಕ್ಕೆ ಇದು ವೈಯಕ್ತಿಕ ಅನುಭವ ಲೋಕದ ಒಳಗಣ ಆಯಾಮ ಸಾರ್ವಜನಿಕ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಎತ್ತು, ಆಡು, ಕುರಿ, ದನ, ಕೋಳಿ ಹೀಗೆ ಪ್ರಾಣಿಪಕ್ಷಿ ಜಗತ್ತಿನೊಂದಿಗೆ ಕೂಡುಕುಟುಂಬ ಸಾಗಿಸುವ ಒಂದು ಬಗೆಯ ನಿಸರ್ಗದ ಜತೆಗಿನ ಸಾವಯವ ಸಂಬಂಧದ ನೆಲೆಯಲ್ಲಿ ಇಲ್ಲಿ ಬದುಕನ್ನು ಗ್ರಹಿಸಲಾಗಿದೆ. ಆಡುವ ಈ ಬರಹದ ಚೈತನ್ಯವೂ ಕೂಡ. ಚೇನುಬಿಡಿಸುವ ಚಾಲಾಕಿತನ, ಲೀಲಾಜಾಲ ಈಜುವಿಕೆ, ಲಂಬಾಣಿಗರ ಭೆಟ್ಟಿ ಇಳಿಸುವ ಚಾಕಚಕ್ಯತೆ, ಚಾಲಕಟ್ಟಿಗೆ ಸುಟ್ಟು ಭಟ್ಟಿಹಾಕಿ ಇದ್ದಿಲು ಮಾಡುವಿಕೆಯಂತಹ ಜನರ ಜ್ಞಾನಪರಂಪರೆಯ ಶೋಧವನ್ನು ನೆನಪುಗಳಲ್ಲಿಯೇ ನವಿರಾಗಿ ಚಿತ್ರಿಸಲಾಗಿದೆ.

ಗೊರವರ ಕಟ್ಟಿಕೊಡುವ ಅಪ್ಪ ಅವ್ವನ ಚಿತ್ರ ನಿಜಕ್ಕೂ ಅಚ್ಚಳಿಯದೆ ಮನಸ್ಸಲ್ಲಿ ಉಳಿಯುತ್ತದೆ. ಬದುಕಿನ ಜಿಗುಟುತನ, ಕಠಿಣವಾದ ಸ್ವಾಭಿಮಾನ, ದಿನಬದುಕಿನ ಕಷ್ಟಕಾರ್ಪಣ್ಯಗಳಿಗೆ ಎದುರಾಗುವ ಎಡರುತೊಡರನ್ನು ಬಿಡಿಸಿಕೊಂಡು ಮುನ್ನಡೆಯುವ ಛಲ ಇವುಗಳು ಹಳ್ಳಿಬದುಕಿನ ಚೈತನ್ಯವನ್ನು ಕಾಣಿಸುತ್ತವೆ. 'ಕಣ್ಣೀರು ಕೌದಿ ತೊಯ್ಸಿಸಿದವು' ಭಾಗದಲ್ಲಿ ತಂದೆಯ ಜೇಬಿನಿಂದ ಹಣ ಕದ್ದು ತೂರುಮುಚ್ಚಿ ಆಡುವಾಗ ಅಪ್ಪನ ಕೈಗೆ ಸಿಕ್ಕು ತಪ್ಪಿಸಿಕೊಂಡ ಘಟನೆಯೊಂದಿದೆ.

ಪುಸ್ತಕ ವಿಮರ್ಶೆ

■ ಡಾ. ಅರುಣ್ ಜೋಳದಕೂಡ್ಲಿಗಿ


ಅಪ್ಪನಿಂದ ಹೊಡೆ ತಿಂದು ಹಗಲೆಲ್ಲಾ ಅಲೆದು ರಾತ್ರಿ ಭಯದಿಂದ ಮನೆಗೆ ಹೋದಾಗ ಅಪ್ಪ ನೀಲಿಗಿರಿ ಮರಕ್ಕೆ ಕಟ್ಟಿ ವಿಪರೀತ ಹೊಡೆಯುತ್ತಾನೆ. ಮಗನಿಗೆ ಅಪ್ಪನ ಮೇಲೆ ಇನ್ನಿಲ್ಲದ ಸಿಟ್ಟು ಆಕ್ರೋಶ ಭುಗಿಲೇಳುತ್ತಿರುತ್ತದೆ. ಆಗ ಅವ್ವ ಕಣ್ಣೀರು ಹಾಕುತ್ತಾ ಹಗ್ಗ ಬಿಚ್ಚಿ ಮಲಗಿಸುತ್ತಾಳೆ. ಸಿಟ್ಟು ಅವಮಾನ ನೆನೆಸಿಕೊಂಡು ನಿದ್ದೆ ಬರದಿದ್ದಾಗ ಅಪ್ಪ ಅವ್ವನ ಹತ್ತಿರ ಹೇಳುವ ಮಾತು ಕೇಳುತ್ತದೆ "ಮುದಿಯಾಗ ಬಾಳ ಬಡಿದೆ. ಅಂವ ಎಷ್ಟು ಬಡೂದ್ರೂ ಉಡಾಳತನ ಬಿಡುವಲ್ಲ. ನಾನರ ಏನು ಮಾಡ್ಲಿ, ಸಿಟ್ಟನ್ಯಾಗ ನುಗ್ಗಳಿ ಹೊಡೆದೆ. ಅವ್ನ ಮೈ ಮುಟ್ಟಿ ನೋಡು ಜ್ವರ ಗಿರ ಬಂದೈತನ" ಎನ್ನುತ್ತಾನೆ. ಈ ಮಾತು ಕೇಳುತ್ತಲೂ ಹುಡುಗನ ಕಣ್ಣುಗಳು ಒದ್ದೆಯಾಗುತ್ತವೆ. ಓದುತ್ತಿರುವ ನಮ್ಮವೂ ಕೂಡ. ಹೀಗೆ ಮನಸ್ಸನ್ನು ಹಿಂಡುವ, ಹಿತಕೊಡುವ ಘಟನಾವಳಿಗಳ ಸರಣಿಯೇ ಇಲ್ಲಿದೆ.

ಇಲ್ಲಿನ ಬರಹ ಆಪ್ತವಾಗುವುದು ಬರಹದ ಪ್ರಾಮಾಣಿಕತೆ ಓದಿನಲ್ಲಿಯೂ ದಾಟುವ ಕಾರಣಕ್ಕೆ. ಎಷ್ಟೋ ಬಾರಿ ಹಳ್ಳಿ ಅನುಭವಗಳನ್ನು ವಿಜೃಂಭಿಸಿಯೋ, ಓದುಗರಲ್ಲಿ ಕರುಣೆ ಉಕ್ಕಲೆಂದು ತೀರಾ ಹೀನಾಯಸ್ಥಿತಿಯನ್ನು ಚಿತ್ರಿಸುವ ಮಾದರಿಗಳು ಸಿಗುತ್ತವೆ. ಆದರೆ ಇಲ್ಲಿ ಗೊರವರ ಬರಹ ಈ ಎರಡೂ ಅತಿಗಳಿಂದ ಮುಕ್ತವಾಗಿದೆ. ಅಕ್ಷರಮಟ್ಟಿಗೆ ಪ್ರಾಮಾಣಿಕವಾಗಿದೆ. ಗೆಳೆಯ ಆರೀಫ್ ರಾಜ ಮಾತನಾಡುತ್ತಾ ಉತ್ತರ ಕರ್ನಾಟಕದ ಜನಜೀವನವನ್ನು ಅರ್ಥಮಾಡಿಕೊಳ್ಳಲು ಶಾಲಾಪಠ್ಯದಲ್ಲಿ ಸೇರಿಸುವಷ್ಟು ಚೆನ್ನಾಗಿದೆ ಎಂದಿದ್ದರು. ಪುಸ್ತಕ ಓದಿದ ನನಗೆ ಇದು ನಿಜವೆನ್ನಿಸಿತು.

ಇಲ್ಲಿನ ಅನುಭವಲೋಕ ಸ್ವಾಭಿಮಾನಕ್ಕಾಗಿ ಜಿಗುಟುತನದ ಬದುಕನ್ನು ಕಟ್ಟಿಕೊಂಡ, ಕಟ್ಟಿಕೊಳ್ಳುವ ಜೀವಗಳದ್ದು. ಈ ಬಗೆಯ ಅನುಭವ ಲೋಕ ಆಯಾ ಭಾಗದ ಅಭಿವೃದ್ಧಿಯ ಬೊಗಳೆ ಬಿಡುವ ರಾಜಕಾರಣಿಗಳ ಮಾತುಗಳನ್ನು, ಸರಕಾರಿ ಲೆಕ್ಕಬುಕ್ಕದಲ್ಲಿ ಅಭಿವೃದ್ಧಿಗಾಗಿ ಖರ್ಚು ಮಾಡಿದ ಲೆಕ್ಕಪತ್ರಗಳ ಹುಸಿತನವನ್ನು ಬಯಲು ಮಾಡುತ್ತದೆ. ಸುದ್ದಿಮಾಧ್ಯಮಗಳು ಬಿತ್ತರಿಸುವ ಉತ್ತರ ಕರ್ನಾಟಕದ ಚಿತ್ರಕ್ಕಿಂತ ಬೇರೆಯದೇ ಆದ ಮಾನವೀಯ ಅಂತಃಕರಣದ ಚಿತ್ರವನ್ನು ಈ ಕೃತಿ ಕಟ್ಟಿಕೊಡುತ್ತದೆ. ಗೊರವರ ವೃತ್ತಿಯಲ್ಲಿ ಪತ್ರಕರ್ತನಾದರೂ ವೃತ್ತಿಸಹಜ ವರದಿಗಾರಿಕೆಯ ಗುಣ ಈ ಬರಹಕ್ಕೆ ಸುಗ್ಗಿಲ್ಲ. ಬದಲಾಗಿ ಕಥೆಗಾರನ ಕಥನಗಾರಿಕೆ ಇಲ್ಲಿ ಮೈದಾಳಿದೆ. ಈ ವಿವರಗಳು ಲೇಖಕನೊಳಗೆ ಇನ್ನಷ್ಟು ಶೋಧಕ್ಕೆ ಕಾರಣವಾದರೆ ಗೊರವರ ಕಾದಂಬರಿ ಬರೆಯಬಲ್ಲಷ್ಟು ಅನುಭವ ದಟ್ಟವಾಗಿದೆ. ಈ ಕೃತಿ ಅವರ ಕಾದಂಬರಿ ರಚನೆಗೆ ಪ್ರೇರಕವಾಗಲಿ ಎನ್ನುವ ಹಾರೈಕೆ.

ಬೆಂಗಳೂರು ಇನ್ನೊಮ್ಮೆ ಮೈನೆರೆಯುತ್ತಿದ

ರೆಡ್ಡಿಗಳ ಬದಲಿಗೆ ಕಂಪೆನಿಗಳು ಕಸ ಗುಡಿಸಲಿದ್ದಾ



ಜವಹರ್‌ಲಾಲ್ ನೆಹರೂ ಅವರು 'ಡಿಸ್ಕವರಿ ಆಫ್ ಇಂಡಿಯಾ' ಬರೆದಾಗ, ಭಾರತದ ಅತ್ಯಂತ ಮಹತ್ವದ ಇತಿಹಾಸಕಾರ ಡಿ.ಡಿ.ಕೊಸಾಂಬಿ ಒಂದು ಲೇಖನವನ್ನು ಬರೆದಿದ್ದರು. ಅದರ ಶೀರ್ಷಿಕೆ 'ಭಾರತದ ಬಂಡವಾಳಶಾಹಿ ಮೈನೆರೆಯಿತು' ಎಂದು. ಭಾರತದ ಬಂಡವಾಳಶಾಹಿ ವ್ಯವಸ್ಥೆ ಯೂರೋಪ್‌ನಂತಲ್ಲ, ಇದು ತನ್ನದೇ ಭಿನ್ನರೀತಿಯಲ್ಲಿ, ಭಿನ್ನ ಕಾಲಘಟ್ಟದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಅದು ಸಂಪೂರ್ಣವಾಗಿ ಪ್ರವರ್ಧಮಾನಕ್ಕೆ ಬಂದಿದೆಯೇ ಇಲ್ಲವೇ ಎಂಬುದರ ಕುರಿತು ಭಿನ್ನ ಗ್ರಹಿಕೆಗಳಿವೆ. ಆದರೆ ಡಿ.ಡಿ.ಕೊಸಾಂಬಿಯವರು "ನೆಹರೂ ಅವರ ಡಿಸ್ಕವರಿಯ ಮೂಲಕ, ಭಾರತದ ಬಂಡವಾಳಶಾಹಿಯು ತನ್ನದೇ ಗ್ರಹಿಕೆಯ ಇತಿಹಾಸವನ್ನು ಕಟ್ಟಿಕೊಳ್ಳಲೆತ್ನಿಸಿದೆ. ಅದು ಇಡೀ ದೇಶವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಮಾನಸಿಕವಾಗಿ ಸನ್ನದ್ಧವಾಗುತ್ತಿರುವ ಸೂಚನೆ" ಎಂದು ವಿಶ್ಲೇಷಿಸಿ ಬರೆದ ಲೇಖನ ಅದು.

ಬೆಂಗಳೂರಿನ ಬಂಡವಾಳಶಾಹಿಯು ಹಲವು ಸಾರಿ ಮೈನೆರೆದಿದೆ. ಕಳೆದ ತಿಂಗಳ ಒಂದು ವಿದ್ಯಮಾನ ಗಮನಿಸಿದರೆ ಅದು ಇನ್ನೊಮ್ಮೆ ಮೈನೆರೆಯುತ್ತಿದೆ. ಈ ರಾಜ್ಯದ ರಾಜಕೀಯಾರ್ಥಿಕ ವ್ಯವಸ್ಥೆಯು ಪಡೆದುಕೊಳ್ಳುತ್ತಿರುವ ಮಹತ್ವದ ತಿರುವಿಗೆ ಇದು ಒಂದು ಪ್ರಮುಖ ಸಾಕ್ಷಿಯಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳು ಇವೆ. ಅದು ಕೇವಲ ಬೆಂಮಪಾ ಆಗಿದ್ದಾಗ 100 ವಾರ್ಡ್‌ಗಳಿದ್ದವು. ಉಳಿದವು ನಗರಸಭೆ ಮತ್ತು ಒಂದು ಯಲಹಂಕ ಪುರಸಭೆ ವಿಲೀನವಾದ್ದರಿಂದ ಬಂದು ಸೇರಿಕೊಂಡವು. ಆಗಿನಿಂದಲೂ ಬೆಂಗಳೂರಿನ ಕಸ ಗುಡಿಸುವ ಗುತ್ತಿಗೆ ಇದ್ದದ್ದು ಪ್ರಧಾನವಾಗಿ ಸುಮಾರು 35ರಷ್ಟಿದ್ದ ಸ್ಥಳೀಯ ಗುತ್ತಿಗೆದಾರರ ಕೈಯ್ಯಲ್ಲಿ. ಸ್ಥಳೀಯ ಎಂದರೆ, ಅವರಲ್ಲಿ ಕನ್ನಡ ಮಾತಾಡುವವರು ಇಬ್ಬರು ಇದ್ದರು ಅಷ್ಟೆ. ಅದಲ್ಲದೇ ರವಿ ನಾಯ್ಡು ಎಂಬ ನಾಯ್ಡು. ಅದು ಬಿಟ್ಟರೆ ಮಿಕ್ಕವರೆಲ್ಲರೂ ರೆಡ್ಡಿಗಳು.

ಆಂಧ್ರ ಮತ್ತು ಕರ್ನಾಟಕದ ಗಡಿ ಜಿಲ್ಲೆಗಳ ಪ್ರಭಾವಿ ಜಾತಿಯಾಗಿರುವ ರೆಡ್ಡಿ ಸಮುದಾಯದಿಂದ ಹಲವು ಜನಪರ ಚಿಂತಕರು, ಹೋರಾಟಗಾರರು, ಇನ್ನಿತ್ಯಾದಿ ವಲಯಗಳ ಪ್ರಮುಖರು ಬಂದಿದ್ದಾರೆ. ಕೃಷಿಯೇ ಪ್ರಧಾನವಾಗಿ ಮಾಡುತ್ತಿದ್ದ, ಕೃಷಿ ಭೂಮಿಯ ಒಡೆತನವೇ ರಾಜಕೀಯ ಹಾಗೂ ಆರ್ಥಿಕ ಮೇಲ್ತನಕ್ಕೆ ತಳಹದಿಯಾಗಿದ್ದ ಸಮುದಾಯವಿದು. ಸಣ್ಣ ರೈತರು, ವ್ಯಾಪಾರಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಸಾಮಾನ್ಯವಾಗಿ ರೆಡ್ಡಿ ಎಂದರೆ 'ದೊಡ್ಡ ರೆಡ್ಡಿ'ಗಳೇ ಕಣ್ಣಮುಂದೆ ಬರುತ್ತಾರೆ. ಆ ಭಾಗದ ರಾಜಕಾರಣದ ನಾಯಕತ್ವ, ಹಳ್ಳಿಯ ಮೇಲಿನ ಹಿಡಿತ, ಮಿಕ್ಕ ಜಾತಿಗಳನ್ನು ಮೂಲೆಗುಂಪು ಮಾಡುವುದು, ದಲಿತರ ಮೇಲಿನ ದೌರ್ಜನ್ಯ ಇತ್ಯಾದಿಗಳಿಗೂ ಈ ಜಾತಿ ಹೆಸರಾಗಿದೆ. ಅದರ ಜೊತೆಗೆ ಬೆಂಗಳೂರಿನ ರಿಯಲ್ ಎಸ್ಟೇಟ್‌ನಲ್ಲಿ ಹಣ ಮಾಡಿರುವವರಲ್ಲೂ ಗಣನೀಯ ಸಂಖ್ಯೆಯಲ್ಲಿದ್ದು, ಬೆಂಗಳೂರಿನ 28 ಕ್ಷೇತ್ರಗಳ ಪೈಕಿ ಅರ್ಧದಷ್ಟು ಕ್ಷೇತ್ರಗಳಲ್ಲಿ ಶಾಸಕರಾಗಿದ್ದಾರೆ. ಮೂರ್ನಾಲ್ಕು ಬೆರಳುಗಳಿಗೆ ಉಂಗುರ, ಕತ್ತಿನಲ್ಲಿ ಬೆರಳು ಗಾತ್ರದ ಬಂಗಾರದ ಚೈನ್ ಅವರಲ್ಲಿ ಹಲವರ ಟ್ರೇಡ್‌ಮಾರ್ಕ್.

ಇಂತಿಪ್ಪ ದೊಡ್ಡ ರೆಡ್ಡಿಗಳಲ್ಲಿ ಕೆಲವರು ಬಿಬಿಎಂಪಿಯ ಕಸವಿಲೇವಾರಿಯ ಗುತ್ತೇದಾರಿಕೆ ಹಿಡಿದಿದ್ದರು. ಇದ್ದ 35 ಗುತ್ತಿಗೆದಾರರಲ್ಲಿ, ಹೆಚ್ಚುಕಡಿಮೆ 30 ಜನ 2-3 ಕುಟುಂಬದವರೇ ಆಗಿದ್ದರು. ಇವರುಗಳಲ್ಲಿ ಕೆಲವರು ಆಂಧ್ರದ ರಾಯಲಸೀಮ, ಚಿತ್ತೂರು, ಕಡಪಾ ಜಿಲ್ಲೆಗಳ ಭೂಮಾಲೀಕರು. ಅವರ ಮನೆ-ಹೊಲಗಳಲ್ಲಿ ಜೀತ ಮಾಡುತ್ತಿದ್ದವರು ಮಾದಿಗ ಜಾತಿಯ ದಲಿತರು. ಮಾಲೀಕರ ಕಿರುಕುಳಕ್ಕೆ ಹಲವು ಆಯಾಮಗಳಿದ್ದವು. ಜೊತೆಗೆ, ಈ ಮೂರು ದಶಕಗಳಲ್ಲಿ ಎಲ್ಲಾ ಕಡೆಯಂತೆ ಹಳ್ಳಿಗಳು ಪುಷ್ ಮಾಡಿದವು, ನಗರಗಳು ಪುಲ್ ಮಾಡಿದವು. ಬೆಂಗಳೂರಿಗೂ ಓಡಿಬಂದರು. ಬಂದವರು ಇಲ್ಲಿ ತಮ್ಮ ಪೂರ್ವಸೂರಿಗಳ ನೆಂಟಸ್ತಿಕೆಯ ಲಿಂಕ್ ಹಿಡಿದುಕೊಂಡು ವಿವಿಧ ಸ್ಲಂಗಳಲ್ಲಿ ಸೇರಿಕೊಂಡರು. 'ಪೌರಕಾರ್ಮಿಕರು' ಎಂಬ ಹೆಸರಿನಲ್ಲಿ ಗುತ್ತಿಗೆ ಆಧಾರದ ಮೇಲೆ ಬಿಬಿಎಂಪಿಯ ಕಸ ಗುಡಿಸಲು ಶುರು ಹಚ್ಚಿಕೊಂಡರು. 'ಪಿಕೆ' ಎಂಬ ಸಂಕ್ಷಿಪ್ತ ರೂಪದಲ್ಲಿ ಕರೆಯುವುದು ಮುನಿಸಿಪಾಲಿಟಿಗಳ ಭಾಷಾಕೋಶ ಪರಿಚಯವಿದ್ದವರೆಲ್ಲರಿಗೂ ಗೊತ್ತು.

ಸರ್ಕಾರ ನಿಗದಿಪಡಿಸಿದ್ದ 5,000 ಚಿಲ್ಲರೆ ಕನಿಷ್ಠ ವೇತನ ಪಡೆಯಲು ಹತ್ತು ಹಲವು ರೀತಿಯ ಹೋರಾಟಕ್ಕೆ ಇವರೆಲ್ಲರನ್ನೂ ಸೇರಿಸಲು, ಆಯಾ ಸಂಘಗಳು ಬಹಳ ಪಡಿಪಾಟಲು ಬೀಳಬೇಕಾಯಿತು. ಹಲವು ಸುತ್ತಿನ ಪ್ರಯತ್ನದ ನಂತರ 2011ರ ಫೆಬ್ರವರಿಯಲ್ಲಿ ಸರ್ಕಾರದ ಪ್ರಕಟಣೆ ಹೊರಬಿದ್ದಿತು. ಆದರೆ ಜಾರಿಗೆ ಬಂದಿದ್ದು ಮೇ 2012ರಲ್ಲಿ! ಅದೂ ಬಹಳ ಪ್ರಯಾಸದ ನಂತರ. ಈ ರೀತಿ ಸಂಬಳ ಹೆಚ್ಚಾದದ್ದು ಗುತ್ತಿಗೆದಾರರಿಗೆ ಬಹಳ ಖುಷಿ ಉಂಟುಮಾಡಿತು. ಏಕೆಂದರೆ ಅದರಿಂದ ಒಮ್ಮೆಗೇ ಅವರ ಲಾಭ 2 - 3 ಪಟ್ಟು ಹೆಚ್ಚಾಯಿತು. ಅದು ಹೇಗೆಂದರೆ, ಒಟ್ಟು ಬೆಂಗಳೂರಿನಲ್ಲಿ ಕನಿಷ್ಠ 3,000 ಪೌರಕಾರ್ಮಿಕರನ್ನು ಹೆಚ್ಚು ತೋರಿಸಿ ಅವರೆಲ್ಲರ ಸಂಬಳ ಗುತ್ತಿಗೆದಾರರೇ ನುಂಗುತ್ತಿದ್ದರು. ಇದಲ್ಲದೇ, ಗೈರುಹಾಜರಾಗುವ ಕಾರ್ಮಿಕರ ಸಂಬಳ ಕಡಿತ ಮಾಡಲಾಗುತ್ತದೆ; ಆದರೆ ಹಾಜರಾತಿ ರಿಜಿಸ್ಟರ್‌ನಲ್ಲಿ ಬಂದಿದ್ದರು ಎಂದು ತೋರಿಸಿ ಆ ಹಣವನ್ನೂ ಜೇಬಿಗಿಳಿಸುತ್ತಾರೆ. ಸಂಬಳ 3,000 ರೂ.ಗಳಷ್ಟು ಹೆಚ್ಚಾದದ್ದರಿಂದ ಅಷ್ಟು ಲಾಭವೂ ಹೆಚ್ಚಾಗುತ್ತದೆ. ಆದರೆ ಚೆಕ್ ಮೂಲಕವೇ ಪಾವತಿ ಮಾಡಬೇಕೆಂಬುದು ಸಂಘಟನೆಗಳ ಒತ್ತಾಯವಾದ್ದರಿಂದ ಗುತ್ತಿಗೆದಾರರಿಗೆ ಪೀಕಲಾಟಕ್ಕಿಟ್ಟುಕೊಂಡಿತು. ಅದರಿಂದ ತಮ್ಮ ಕಳ್ಳತನ ಬಯಲಾಗುತ್ತದೆಂದು ಕಳೆದ ಆರು ತಿಂಗಳಲ್ಲಿ ಬಹಳ ಸರ್ಕಸ್ ನಡೆಸಿದ್ದಾರೆ. ಬೆಂಗಳೂರಿನ ಹೆಚ್ಚಿನ ಭಾಗದಲ್ಲಿ ಇನ್ನೂ ಮೂರು ತಿಂಗಳ ಸಂಬಳವನ್ನೇ ಕೊಟ್ಟಿಲ್ಲ. ಇಎಸ್‌ಐ, ಪಿಎಫ್,.ಕೈ ಗ್ಲೌಸ್, ಮಾಸ್ಕ್, ಶೌಚಾಲಯ, ಕ್ಯಾಂಟೀನ್

ಹಿಂದೆ ಇದ್ದ ಗುತ್ತಿಗೆದಾರರ ಹೆಸರುಗಳ ಪಟ್ಟಿ

ಪಿ.ಗೋಪಿನಾಥ ರೆಡ್ಡಿ, ರಾಮಚಂದ್ರ ರೆಡ್ಡಿ, ಕವಿತಾ (ರೆಡ್ಡಿ), ಬಾಲಸುಬ್ರಮಣಿಯಂ, ಪಾಂಡುರಂಗ, ವಿಜಯದೇವ ರೆಡ್ಡಿ, ಬಾಬು ರೆಡ್ಡಿ, ದಾಮೋದರ್, ವೆಂಕಟೇಶ್, ಆನಂದವರ್ಧನ ರೆಡ್ಡಿ, ಇ.ಆರ್.ಸಂತೋಷ್, ಪಿ.ವಿದ್ಯಾನಾಥ ರೆಡ್ಡಿ, ರಾಜು, ಇ.ರಮಣ ರೆಡ್ಡಿ, ಎ.ರಾಮಕೃಷ್ಣ ರೆಡ್ಡಿ, ಪಿ.ವಿಠಲನಾಥರೆಡ್ಡಿ, ಪಿ.ವಿಷ್ಣುವರ್ಧನ ರೆಡ್ಡಿ, ಪಿ.ವಿಕ್ರಮದೇವ ರೆಡ್ಡಿ, ವೆಂಕಟೇಶ ರೆಡ್ಡಿ, ಮುನಿಯಪ್ಪ, ಗಿರಿಜಾ, ಬಿ.ಆರ್.ಗಣೇಶ್, ವೀರನಾರಾಯಣಚಾರ್, ಆರ್.ಹರೀಶ್, ಭಾನುಮೂರ್ತಿ, ಕೆ.ಆರ್.ಶ್ರೀನಿವಾಸ ರೆಡ್ಡಿ, ರವಿ ನಾಯ್ಡು, ಎ.ಎಲ್.ಸತೀಶ್ ಕುಮಾರ್, ಪುರಂದರ ರೆಡ್ಡಿ,

ಕಸ, ಕಸ, ಕಸ ಮಸಲತ್ತೇನು?

ಕಳೆದೆರಡು ತಿಂಗಳಿಂದ ಬೆಂಗಳೂರಿನಲ್ಲಿ ಕಸದ್ದೇ ಸುದ್ದಿ. ಕಸವನ್ನು ವಿಲೇವಾರಿ ಮಾಡುತ್ತಿದ್ದ ಜಾಗದ
ಸಮಸ್ಯೆಯಿಂದಾಗಿ ಇದು ದೊಡ್ಡ ಸಮಸ್ಯೆಯಾಗಿದೆ ಎಂದು ಬಿಬಿಎಂಪಿ ಹೇಳುತ್ತಿರುವುದರಲ್ಲಿ ನಿಜವೂ ಇರಬಹುದು
ಆದರೆ ಬೆಂಗಳೂರಿನಿಂದ ಎತ್ತಿಕೊಂಡು ಹೋದ ಟನ್‌ಗಟ್ಟಲೆ ಕಸವನ್ನು ಎಲ್ಲಿ ಸುರಿಯುವುದು ಎನ್ನುವುದರ ಕುರಿತಾಗಿಯೂ
ಎಲ್ಲಾ ಚರ್ಚೆ ನಡೆಯಿತು. ಹೈಕೋರ್ಟ್ ಸಹ ಛೀಮಾರಿ ಹಾಕಿತು. ಸರಿಯಾಗಿ ಇದೇ ಸಂದರ್ಭದಲ್ಲಿ ಹಳೆಯ
ಪುಡಿ ಕಂಟ್ರಾಕ್ಟರ್‌ಗಳಿಂದ ಕಾರ್ಪೋರೇಟ್ ಕಂಪೆನಿಗೆ ಕಸ ಎತ್ತುವುದು ಮತ್ತು ವಿಲೇವಾರಿ ಮಾಡುವ ಗುತ್ತಿ
ಬದಲಾವಣೆಯಾಯಿತು.

ಆದರೆ ಇಡೀ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಸುಮಾರು 17,000 ಕಾರ್ಮಿಕರ ವಿಚಾರದ ಬಗ್ಗೆ ಇಲ್ಲಿ ಚರ್ಚೆಯೆ
ನಡೆಯಲಿಲ್ಲ. ಹಾಗಾಗಿಯೇ ಹೊಸ ಕಂಪೆನಿಯು ಅಷ್ಟು ಸಲೀಸಾಗಿ 9,000 ಜನರನ್ನು ಕಿತ್ತುಹಾಕುತ್ತೇನೆ ಎಂದ
ಹೊರಟಿದೆ. ಬೆಂಗಳೂರು ಪಾಲಿಕೆಯ ಇಡೀ ಇತಿಹಾಸದಲ್ಲೇ ಮೊದಲ ಬಾರಿಗೆ ಗುತ್ತಿಗೆ ಪೌರಕಾರ್ಮಿಕರಿಗೆ ಕನಿ
ವೇತನ ಜಾರಿಯಾದ ಸಂದರ್ಭದಲ್ಲೇ ಇದು ನಡೆದಿದೆ ಎನ್ನುವುದು ಅನುಮಾನಕ್ಕೆ ಕಾರಣವಾಗಿದೆ. ಕಂಪೆ
ದೊಡ್ಡದಾದಷ್ಟೂ ಅವರು ಧರಿಸುವ ಮುಖವಾಡದ ಬಣ್ಣ ಹೆಚ್ಚು ವರ್ಣರಂಜಿತವಾಗಿರುತ್ತದೆ. ಆದರೆ ಅ
ದುಡಿಯುವ ಕಾರ್ಮಿಕರ ಗತಿ ಕುಸಿಯುತ್ತಿರುತ್ತದೆ ಎನ್ನುವುದಕ್ಕೆ ಇತ್ತೀಚಿನ ಮಾನೇಸರ್‌ವರೆಗೆ ಹಲವು ಉದಾಹರಣೆಗಳಿವ
ಬೆಂಗಳೂರಿನ ಕಸದ ಗುಡ್ಡೆಯಲ್ಲೂ ಅಂತಹುದೇ ಕಾರ್ಮಿಕ ವಿರೋಧಿ ನೀತಿ ಅಡಗಿರುವ ಸಾಧ್ಯತೆಗಳಿವೆ.

ಸೌಲಭ್ಯ ಈ ಯಾವುದನ್ನೂ ಕೇಳುವ ಹಾಗೇ ಇಲ್ಲ.

ಹಾಗೆಂದು ಪೌರಕಾರ್ಮಿಕರು ಉಪವಾಸ ಬಿದ್ದಿಲ್ಲ. ಕಸ ಗುಡಿಸುವ ಮನೆ ಮನೆಗಳಿಂದ 5 ರೂ., 10 ರೂ. ಕೇಳುತ್ತಾರೆ. ಹಣ ಕೊಡದಿದ್ದರೆ ಹಿಂದಿನ ದಿನ ಉಳಿದಿರುವುದನ್ನು ತಿನ್ನಲು ಕೊಡುತ್ತಾರೆ. ಇದಲ್ಲದೇ ಅವರಿವರ ಮನೆ ಟಾಯ್ಲೆಟ್ ತೊಳೆದೋ, ಏನೋ ಒಂದು ಮಾಡಿಯೋ ಬದುಕು ಸಾಗಿಸುತ್ತಾರೆ. ಅಂದರೆ ಭಾರೀ ಬೃಹತ್ ಪಾಲಿಕೆಯು ತನ್ನ ಉದ್ಯೋಗಿಗಳನ್ನು ಭಿಕ್ಷೆಗೆ ದೂಡಿದೆ. ಮೂರು ತಿಂಗಳು ಸಂಬಳ ಕೊಡದಿದ್ದರೂ ಅದು ಆಕ್ರೋಶವಾಗಿ ಸ್ಫೋಟಗೊಳ್ಳುತ್ತದೆಂದು ಹೇಳುವಂತಿಲ್ಲ. ಸಾಮಾಜಿಕ ಹಾಗೂ ರಾಜಕೀಯ ಹಿಂದುಳಿದಿರುವಿಕೆಯು ಅವರನ್ನು ಕಟ್ಟಿಹಾಕಿದೆ.

ಹಿಂದಿನ ಅವಸ್ಥೆಯ ಹಲವು ಗುಣಲಕ್ಷಣಗಳನ್ನು ನಂ
ಅವಸ್ಥೆಯಲ್ಲೂ ಹೊಂದಿರುತ್ತದೆ. ಹಾಗಾಗಿಯೇ
ಬಂದರೂ ಜಾತಿ ಕೆಲಸ ಮಾಡುತ್ತದೆ ಮತ್ತು ಭೂಮಾ
ಹಿನ್ನೆಲೆಯ ವ್ಯಕ್ತಿಗಳೇ ಗುತ್ತಿಗೆಯನ್ನು ಹಿಡಿದು ಇನ್ನೊ
ರೂಪದ ಜೀತ ಜಾರಿಯಲ್ಲಿಟ್ಟಿರುತ್ತಾರೆ.

ಆದರೆ ಈಗ ಹಾಗಿಲ್ಲ. ಬಿಬಿಎಂಪಿ ಕಸದ ರಾಶಿ
ಅದು ಇನ್ನೊಮ್ಮೆ ಮೈನೆರೆದಿರುವ ಲಕ್ಷಣ
ಗೋಚರಿಸುತ್ತಿವೆ. ಇನ್ನು ಮುಂದೆ 35
ಕಂಟ್ರಾಕ್ಟರ್‌ಗಳಿರುವುದಿಲ್ಲ; 2-3 ಕಾರ್ಪೋರೇಟ್ ಕಂಪೆನಿ
ಇರುತ್ತವೆ. ಅದರಲ್ಲಿ ಶೇ.60ರಷ್ಟು ವಾರ್ಡ್‌ಗ
ತನ್ನದಾಗಿಸಿಕೊಂಡಿರುವ ಬಿವಿಜಿ ಕಂಪೆನಿಯ ಪ



ಕಾರ್ಪೋರೇಟರ್, ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಅದೇ ಜಾತಿಯ ಮೇಸ್ತ್ರಿಗಳು, ಬಿಬಿಎಂಪಿಯ ಅಧಿಕಾರಿಗಳು ಎಲ್ಲರೂ ಒಳಗೊಂಡ ವ್ಯವಸ್ಥೆ ಆ ರೀತಿ ಆಗಲು ಬಿಡುವುದಿಲ್ಲ. ಅದನ್ನು ಮೀರಿ ಹೆಚ್ಚೇನಾದರೂ ಸಮಸ್ಯೆ ಮಾಡಿದರೆ ಫ್ಯೂಡಲ್ ರೆಡ್ಡಿಗಳು ತಮ್ಮ ಪಾಳೇಗಾರಿಕೆ ಪ್ರದರ್ಶಿಸುತ್ತಾರೆ.

ಆದರೆ ಪಾಳೇಗಾರಿಕೆ, ಫ್ಯೂಡಲ್ ಎನ್ನುವುದು ಹಳೆಯ ಕಾಲದ ಉಳಿಕೆಗಳು. ಸಮಾಜ ಅಲ್ಲಿಂದ ಸಾಕಷ್ಟು ಮುಂದಕ್ಕೆ ಬಂದಿದೆ. ಹಾಗೆ ನೋಡಿದರೆ, ಮಾಲೀಕರು-ಕಾರ್ಮಿಕರು, ಗುತ್ತಿಗೆ ಪದ್ಧತಿ, ಪೌರಕಾರ್ಮಿಕ ಎನ್ನುವ ಪದ ಎಲ್ಲವೂ ಆಧುನಿಕ ಕಾಲದ್ದೇ. ಬೆಂಗಳೂರು ಒಮ್ಮೆ ಮೈನೆರೆದು ತನ್ನ ಹಳೆಯ ಪದ್ಧತಿಯಿಂದ ಕಳಚಿಕೊಂಡು, ದೇಶದ ಉಳಿದ ನಗರಗಳ ಸಾಲಿಗೆ ಸೇರಿದಾಗ ಅವೆಲ್ಲವೂ ಜಾರಿಗೆ ಬಂದಿದ್ದವು. ಬಿಎಂಪಿ, ಬಿಬಿಎಂಪಿ ಆಯಿತು. ಸಾಫ್ಟ್‌ವೇರ್ ಪಾರ್ಕ್‌ಗಳು ಬಂದವು. ಗಾರ್ಮೆಂಟ್ ಫ್ಯಾಕ್ಟರಿಗಳು ಅಪಾರೆಲ್ ಪಾರ್ಕ್ ಎಂಬ ಹೆಸರು ಪಡೆದುಕೊಂಡವು. ಎಲ್ಲೆಂದರಲ್ಲಿ ಫ್ಲೈಓವರ್‌ಗಳು ಬಂದವು; ಮೆಟ್ರೋ, ಮಾಲ್, ಮಲ್ಟಿಪ್ಲೆಕ್ಸ್‌ಗಳು ಹೀಗೇ ಏನೇನೋ ಬಂದವು. ವಿವರಗಳು ನಿಮ್ಮೆಲ್ಲರಿಗೂ ಗೊತ್ತು. ಅಂದರೆ ಬೆಂಗಳೂರಿನ ಬಂಡವಾಳಶಾಹಿ ತನ್ನ ಕೌಮಾರ್ಯದಂತಹ ಅವಸ್ಥೆಯಿಂದ ಯೌವ್ವನಕ್ಕೆ ಜಾರಿತ್ತು.

ಆದರೆ ಈ ದೇಶದಲ್ಲಿ ಸಂಪೂರ್ಣವಾಗಿ ಬಂಡವಾಳಶಾಹಿ ವ್ಯವಸ್ಥೆ ಬಂದಿಲ್ಲವೆಂತಲೂ, ಅದು ಇನ್ನೂ ಕೃಷಿ ಪ್ರಧಾನವಾದುದೆಂತಲೂ, ಜಾತಿಯ ರೂಪದಲ್ಲಿ, ಹಳ್ಳಿಗಳ ಹಿಡಿತ ಭೂಮಾಲೀಕ ವರ್ಗಗಳ ಕೈನಲ್ಲೇ ಇದೆಯೆಂತಲೂ ಕೆಲವು ಸಮಾಜ ಶಾಸ್ತ್ರಜ್ಞರು ವಾದಿಸುತ್ತಾರೆ. ಅಂದರೆ ಈ ಬದಲಾವಣೆ ಒಂದೇ ಸಾರಿಗೆ ಬರುವುದಲ್ಲ.

ದೊಡ್ಡದು. ಅದರ ಬೆಂಗಳೂರು ಉಸ್ತುವಾರಿಯನ್ನು ಆ
ಕನ್ನಡ ಮೂಲದ ಎಂಬಿಎ ಪದವೀಧರ
ವಹಿಸಿಕೊಂಡಿದ್ದಾನೆ. ಇನ್ನು ಮುಂ
ಪೌರಕಾರ್ಮಿಕರಿರುವುದಿಲ್ಲ. ಹೌಸ್ ಕೀಪಿಂಗ್ ವರ
ಇರುತ್ತಾರೆ. ಕಸ ಗುಡಿಸುವುದು, ಕಸದರಾಶಿ ಹಾಕುವು
ಸುಡುವುದು ಇತ್ಯಾದಿ ಇರುವುದಿಲ್ಲ. ಸಾಲಿಡ್ ವ
ಮ್ಯಾನೇಜ್‌ಮೆಂಟ್ ಇರುತ್ತದೆ. ಕಾರ್ಪೋರೇಟ್ ಕಂಪೆನಿ
ಕೇವಲ ಪೆಪ್ಸಿ, ಕೋಕಾಕೋಲ, ಮೊಬೈಲ್, ಲ್ಯಾಪ್‌ಟ
ತಯಾರಿಕೆಗೆ ಮಾತ್ರವಲ್ಲ, ಚಿಲ್ಲರೆ ವ್ಯಾಪಾರಕ್ಕೂ ಬರು
ಅಕ್ಕಿ, ಬೇಳೆ, ತರಕಾರಿ ಮಾರುತ್ತಾರೆ ಎಂದು ಹೇಳ
ಕಾಲ ಆಗಿಹೋಯಿತು. ಅವರು ಕಸವನ್ನೂ ಗುಡಿ
ಬಂದಿದ್ದಾರೆ.

ಇಎಸ್‌ಐ, ಪಿಎಫ್, ತರಬೇತಿ, ಯೂನಿಫಾರಂ, ಗ
ಗುರುತಿನ ಚೀಟಿ, ತಿಂಗಳಿಗೊಮ್ಮೆ ಸಂಬಳ ಎಲ್ಲವ
ಅವರು ಖಾತ್ರಿ ಮಾಡುತ್ತೇವೆಂಬ ಉಮೇದಿನಲ್ಲಿ
ಆದರೆ ಹಾಲಿ ಇರುವ 17,000 ಪೌರಕಾರ್ಮಿಕರ
9,000 ಜನರನ್ನು ಕೆಲಸದಿಂದ ಕಿತ್ತು ಹಾಕುತ್ತಾರೆ. ಎ
ಸಾವಿರ ಜನರನ್ನು ಹೌಸ್‌ಕೀಪಿಂಗ್ ವರ್ಕರ್ಸ್ ಮಾಡು
ಅವರಲ್ಲಿ ಕೆಲಸ ಮಾಡಲು ಸುಮಾರು 20 ಬ
ನಿಯಮಗಳನ್ನು ಹೇಳಿದ್ದಾರೆ. ಅದನ್ನು ಪಾಲಿಸುವ
ಕಡ್ಡಾಯವಂತೆ; ಇಲ್ಲದಿದ್ದರೆ ಕಂಪೆನಿಯು ಯಾ
ಬೇಕಾದರೂ ಕಿತ್ತುಹಾಕಬಹುದು. ಉಳಿದದ್ದೆಲ್ಲ ವ
ಕಲ್ಪನೆಗೆ ಬಿಟ್ಟದ್ದು.

ಬೆಂಗಳೂರು ಮತ್ತೊಮ್ಮೆ ಮೈನೆರೆ
ಅಂಚಿನಲ್ಲಿರುವವರಿಂದ ಮತ್ತೆ ಹೋರಾಟ ಶುರುವಾ
ಕೇಂದ್ರದಿಂದಾಚೆಗಿನ ಪರಿಧಿಯಲ್ಲಿ ಬೇರೆ ಬೇರೆ
ಇರುವವರು ಜೊತೆ ಸೇರಬೇಕಿದೆ.

ಫ್ಯಾಸಿಸ್ಟ್ ಕಾರ್ಪೋರೇಟ್ ಕಂಪೆನಿಗಳ ಜೊತೆಗಿನ ಯುದ್ಧದಲ್ಲೂ ನೀವಿರಬೇಕು

ಈ ವರ್ಷದ ಏಪ್ರಿಲ್ 13 ಮತ್ತು 14ರಂದು ಬಿಬಿಎಂಪಿ ಕೇಂದ್ರ ಕಚೇರಿಯ ಮುಂದೆ ಗುತ್ತಿಗೆ ಪೌರಕಾರ್ಮಿಕರಿಗೆ ಸರ್ಕಾರವೇ ನಿಗದಿಪಡಿಸಿದ ಕನಿಷ್ಠ ವೇತನ ಜಾರಿಯಾಗಬೇಕೆಂದು ಹೋರಾಟ ನಡೆಯಿತು. ಪೌರಕಾರ್ಮಿಕರೊಂದಿಗೆ ಹಲವಾರು ಸಂಘಟನೆಗಳ ಮುಖಂಡರು, ಸಾಹಿತಿಗಳು ಇದ್ದರು. ಇಂತಹ ಹಲವು ಕಾರಣಗಳು ಸೇರಿಕೊಂಡು ಮೇ ತಿಂಗಳಿಂದ ಕನಿಷ್ಠ ವೇತನದ ಚೆಕ್ ದೊರೆಯಲಾರಂಭಿಸಿತು. ಆದರೆ ಇಷ್ಟೂ ವರ್ಷಗಳ ಕಾಲ ಅದಕ್ಕಾಗಿ ಹೋರಾಡಿ, ಈಗ 5,000 ರೂ. ಸಂಬಳ ಪಡೆಯುವ ಹೊತ್ತಿಗೆ ಅರ್ಧಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸವನ್ನೇ ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಅವರೆಲ್ಲರ ಪರವಾಗಿ ಈ ಅಪೀಲು.

ಕನಿಷ್ಠವೇತನ ನೀಡಲು ಆದೇಶವಾದಾಗ ನೀವಿದ್ದಿರಿ, ಈಗ ವೇತನ ಪಡೆಯಬೇಕೆಂದರೆ ಕೆಲಸದಲ್ಲಿ ಉಳಿದುಕೋಬೇಕು. ಅದಕ್ಕೆ ನಿಮ್ಮ ಸಾಥ್ ಬೇಕು.

ಸತ್ತ ಸರ್ಕಾರಕ್ಕೆ ಸಭೆ ಬೇರೆ ಕೇಡು!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಇದ್ದಕ್ಕಿದ್ದಂತೆ ಮೋಡ ಕವಿದುಕೊಂಡು ತೆಳ್ಳಗೆ ಸೋನೆ ...ಳೆಯಾಯ್ತು. ವತ್ತಾರೆ ಎದ್ದ ಹೆಂಗಸರು ಅಟ್ಟಿ ಬಾಗಿಲಿಗೆ ...ಹಾಕುವುದನ್ನು ತಪ್ಪಿಸಿದಂತಿದ್ದ ಆ ಮಳೆಯಿಂದ ...ಗಬೇಕಾದ್ದೇನೂ ಇರಲಿಲ್ಲ. ಬದಲಿಗೆ ಹೊಲ ಕುಯ್ದು ...ನ ಕಟ್ಟಿದವರಿಗೆ ರೇಜಿಗೆ ಮಾಡಿತ್ತು. ಅಂತ ಟೈಮಿನಲ್ಲಿ "ಈ ಸ್ವಾನೆ ಮಳಿಂದ ಏನಾಯ್ತದೆ ಮಾವ" ಎಂದ ...ಗ್ರಿ.

"ಏನೂ ಆಗದಿಲ್ಲ ಕಂದ್ಯ. ಒಂದು ತಿಂಗಳು ಮದ್ಲೆ ...ದಿದ್ರೆ ಕಾಳಗಟ್ಟುತಾಯಿದ್ದ ಪೈರಿಗೆ ನೇರ್ಪಾಗದು. ...ಗ ಬಂದ್ರೇನುಪಯೋಗ?" ಎಂದ ಕಾಳಮಾವ.

"ಆ ಬಯಲಲ್ಲಿ ನೀರ ಕೇಳಕ್ಕೆ ಅಂತ ಬಂದಿದ್ದಲ್ಲ? ...ದು ಬುಟ್ರೆ" ಎಂದ ಸೀರ.

"ಕೋರ್ಟು ಮುಖಾಂತರ ಬುಡಿಸಿಗಂಡ್ರು."

"ತಗಳಪ್ಪ ಅದು ಕ್ವಡತೆ. ಆ ಕೋರ್ಟಿಗೇನು ...ಲವೇನ್ಲ, ಬಂದು ಕನ್ನಂಬಾಡಿ ನೋಡಕ್ಕೇನಾಗ್ಯದೆ?" ...ದ ಸೀರ.

"ಕೋರ್ಟು ಯಾವಾಗ್ಲು ಕಾನೂನ ನೋಡ್ತದೆ ಕಣೊ ...ದ ಮಾವ. ಈಗ ನೀನು ನಿನ್ನೆದ್ದಿ ಬುದ್ದಿ ಅಂತ ...ಗೊ."

"ನಾನ್ಯಾಕ್ ಬುಡನ್ಲ?"

"ಅಲ್ಲ ಮಾತಿಗೇಳಿದೆ. ಕೋರ್ಟು ಅವುಳಿಗೆ ತಿಂಗಳಿಗೆ ...ದು ಸವುರ ಕೊಡು ಅಂತ ತೀರ್ಪು ಕೊಡ್ತದೆ. ನಿನ್ನ ...ತ್ತಿ ಜೇಬಲ್ಲಿ ಹತ್ತು ರೂಪಾಯಿ ಇರದಿಲ್ಲ ಅಂತ ಆ ...ರ್ಟಿಗೇನು ಗೊತ್ತು. ಇಂತ ಪ್ರಕರಣಕ್ಕೆ ಇಂತ ತೀರ್ಪು ...ವ್ವದಪ್ಪನೇ ನೋಡ್ತದದು."

"ಅಂಗರೆ ಈ ಕೊರಟಗಳ ಬದ್ಲಾಸಬೇಕು ಕಂದ್ಯ."

"ಬದ್ಲಾಸಕ್ಕದೇನು ಗಾಡಿಚಕ್ರ, ನೇಗಲ ಗುಳ ...ವ್ವಕಂಡ್ಯಾ, ಅದಾಟು ಸುಲಬಲ್ಲ. ನಾವು ಮಾಡಿಕಂಡಿದ್ದ ...ವು ಅನುಭವುಸ್ಥ ಹೋಗಬೇಕು."

"ಇದೊಳ್ಳೆ ಕತಿಯಾಯ್ತಲ್ಲ ಹೇಳು."

"ಕೋರ್ಟು ಅಂಗಿದ್ರು ಒಂದೊಂದು ಸತಿ ವಳ್ಳೆ ಕ್ಯಲಸ ...ಡ್ತವೆ ಕಣೋ. ನೋಡು ಆ ಜನಾರ್ದನ ರೆಡ್ಡಿ ಆಸ್ತಿಯ ...ಟ್ಟಗೋಲಾಯ್ಕಂಡದೆ. ಇದಕೇನೇಳ್ತಿ."

"ಓ ಅಂಗರವುನ ಕತೆ ಮುಗಿತು ಅನ್ನು."

"ಅಷ್ಟು ಸುಲಭಕ್ಕೆ ಮುಗಿಯಿದಿಲ್ಲ, ಆದ್ರು ಇದು ...ಯಾದ ಕ್ವಡತ."

"ಅವುನೆಲ್ಲಿದನ್ನಾ ಈಗ?" ಎಂದಳು ಜುಮ್ಮಿ.

"ಮಾವನ ಮನೆಲವುನೆ ಕಣೆ."

"ಮಾವನ ಮನೆ ಎಲ್ಲಿದ್ದತೂ?"

"ಆಂಧ್ರಪ್ರದೇಶದ ಜೈಲಿನ ಹಿಂಭಾಗದಲ್ಲದೆ" ಎಂದು ...ಗ್ರಿ ನಕ್ಕ.

"ಮತ್ತೆ ಜೈಲಲ್ಲವುನೆ ಅಂತಿದ್ರು?"


"ಅವುನು ಜೈಲಿಗೋಗಿ ವರುಸದ ಮ್ಯಾಲೆ ಯರಡು ...ಗಳಾಯ್ತು ಕಣೆ. ಈಗ ಅಲ್ಲಿದ್ದಗಂಡೆ ಯಲಕ್ಷನ್ನಿಗೆ ನಿಂತಗಂಡನಂತೆ."

"ಅಂಗಾದ್ರ ಗೆಲ್ತನೆ ಬುಡು" ಎಂದ ಸೀರ.

"ಅದ್ಯಂಗೇಳ್ತಿಯೋ?"

"ಸಾಮಾನ್ಯವಾಗಿ ಜೈಲಲ್ಲಿದ್ದೊರು ಗೆಲ್ತರೆ ಕಂದ್ಯ. ಆಗೊಂದು ಸತಿಯ ಜಾರ್ಜ್‌ಫರ್ನಾಂಡಿಸ್ ಜೈಲಲ್ಲಿದ್ದ ಕಂಡೆ ಗೆದ್ದಿದ್ದ ಗೊತ್ತೆ."

"ಅವುನು ಎಮರ್ಜೆನ್ಸಿ ವಿರುದ್ಧ ಹೋರಾಡಿ ಜೈಲು



ಸೇರಿದ್ದ. ಈ ರೆಡ್ಡಿ ಅಕ್ರಮ ಆಸ್ತಿ ಮಾಡಿ ಸಿಗಾಯ್ಕಂಡು ಜೈಲು ಸೇರ್‍ವುನೆ ಗೊತ್ತೆ."

"ಆದ್ರೂ ನಮ್ಮ ಜನಗಳು ಒಂಥರಾ ಕಂದ್ಯ."

"ನೀನೇಳದು ನಿಜ ಕಣೊ. ನೋಡು ಪಾಕೀಸ್ತಾನದಿಂದ ಬಂದು ಬಂಬಾಯಿಲಿ ಸಿಕ್ಕಿಸಿಕ್ಕಿದೋರ ವ್ಯಾಲ್ಯಲ್ಲ ಗುಂಡಾರಿಸಿ, ನೂರಾರು ಜನ ಸಾಯಿಸಿದ್ದ ಕಸಬ್ ಅನ್ನೋನ್ನ ಜೈಲಿಗಾಕಿ, ಈಗ ನ್ಯಾಣಾಕಿದ್ರು."

"ನ್ಯಾಣಾಕಿದ್ರೆ ಹೋಗ್ಲಿ ಬುಡವುನವುನ್ ಜಾತಿನ್ನಾಡ."

"ನೋಡು ನಿನ್ನ ಬಾಯಿಲಿ ಯಂತ ಮಾತು ಬತ್ತದೆ. ಆದ್ರೆ ಕೆಲವು ಜನ ಪಾಪ ಅಂದು ಬುಟ್ರು. ಕೆಲುವುರು ನನ್ನ ತಮ್ಮ ಅಂದ್ರು. ಪಾಪ ವಟ್ಟಗಿಲ್ದೆ ಇಂತ ಕ್ಯಲಸ ಮಾಡ್ತು ಬಡುವುರುಡುಗ ಅಂದ್ರು. ಅದೇ ಅವುರ ಮನೆತ್ಯಾರಾರ ಅವ್ವುನ ಗುಂಡೇಟಿಗೆ ಸಿಕ್ಕಿ ಸತ್ತಿದ್ರೆ ಅಂಗಂತಿದ್ರೆ? ಆಗೊ ಅಂಗೆ ರೆಡ್ಡಿ ಪಾಪ ಜೈಲಲ್ಲವುನೆ ಈಚೆಗೆ ಬರ್ಲಿ ಅಂತ ಜನ ಓಟು ಮಾಡಿದ್ರೆ ಏನು ಮಾಡಕ್ಯಾಯ್ತದೆ? ಈ ನ್ಯಲದಲ್ಲಿ ಏನಾದ್ರೂ ಆಗಬವುದು" ಎಂದು ಉಗ್ರಿ ನಿಟ್ಟುಸಿರುಬಿಟ್ಟ. ಆಗ ಕಾಣೆಸಿಕೊಂಡ ವಾಟಿಸ್ಸೆ,

"ಯಡಾಕ್ರಪ್ಪ ಯಲ್ಲ ಸೈಲೆಂಟಾಗಿದ್ದಿರಿ?" ಎಂದ.

"ಬೆಳಗಾವಿಗೋಯ್ತಿನಿ ಅಂದೋನು ಇಲ್ಲೆ ಇದ್ದಿಯಲ್ಯಾ?" ಎಂದಳು ಜುಮ್ಮಿ.

"ಯಾರೂ ಕರಕಂಡೋಗಲಿಲ್ಲ ಕಣಕ್ಕ."

"ಅಲ್ಲಿಗೇನು ಮಾಡಕ್ವಂಟಿದ್ಯಾ?"

"ಅಲ್ಲಿ ವಿಧಾನಸಭೆ ನ್ಯಡೀತಾ ಅದೆ ದೊಡ್ಡಪ್ಪ ಅದ್ಯೆ ಯಂಗೆ ನ್ಯಡಿತದೆ ನೋಡನಾ ಅಂತ ವಂಟಿದ್ದೆ. ಯಾರೂ ಕರಕಂಡೋಗಲಿಲ್ಲ."

"ಅಂಗರಿನ್ನ ಮ್ಯಾಲೆ ವಿಧಾನಸಭೆ ಅಲ್ಲಿ ನ್ಯಡೀತದೆ ಅನ್ನು."

"ಅಂಗಲ್ಲ ದೊಡ್ಡಪ್ಪ, ಅಲ್ಲಿನ ಪ್ರಾಬ್ಲಂಗಳ ಬಗ್ಗೆ ಚರ್ಚೆ ಮಾಡಬೇಕಾದ್ರೆ ಅಲ್ಲಿ ನ್ಯಡೀತದೆ. ಇನ್ನುಳಿದಂಗೆ ಬೆಂಗಳೂರಲ್ಲಿ ನ್ಯಡೀತದೆ."

"ಒಹೊ ಅಂಗೆ ಅನ್ನು, ಅಂಗರೆ ನಾಕಾ ಮೂಲಿಗೂ ಇದಾನಸೌಧ ಕಟ್ಟತರೆ ಅನ್ನು."

"ಅಂಗಾಗದಿಲ್ಲ ದೊಡ್ಡಪ್ಪ, ಯಾವನೊ ತಿಕ್ಲ ಬೆಳಗಾಂ ಸಮಸ್ಯೆ ಅಲ್ಲಿ ವಿಧಾನಸೌಧ ಕಟ್ಟಿದ್ರೆ ಬಗೆ ಹರಿತಿದೆ ಅಂತ ತಿಳಕಂಡು ಅಲ್ಲೊಂದು ಕಟ್ಟನಾ ಅಂತ ಕಟ್ಟಿದ್ನಾ. ಕಟ್ಟಿದ ಮ್ಯಾಲೆ ಅಲ್ಲಿ ಸಭೆ ಮಾಡಬೇಕಲವೆ ಅದ್ಯೆ ಮಾಡ್ತಾ ಅವುರೆ. ಬೆಂಗಳೂರಲ್ಲಿ ಮಾಡಿದ್ರೆ ಏನಾಗಬೇಕಿತ್ತೊ ಅದೇ ಅಲ್ಲೂ ಆಯ್ತದೆ."

"ಅಲ್ಲಾ ಕಣೊ, ಸರಕಾರ ಸತ್ತ ಹ್ಯಣದಂಗಿರುವಾಗ ಅದಕ್ಕೆ ಒಂದು ಅಧಿವೇಶನ ಬ್ಯಾರೆ ಬೇಕೇನೊ?"

"ನಾನು ಅದ್ನೆ ಥಿಂಕ್ ಮಾಡ್ತಾಯಿದ್ದೆ ಕಣೊ ಉಗ್ರಿ. ಪಾಪ ಆ ಜಗದೀಶ್ ಶೆಟ್ಟರ್ ನೋಡಿದ್ರೆ ಕನಿಕರ ಆಯ್ತದೆ. ಅವುನು ಮಂತ್ರಿಯಾಗಿದ್ದಾಗ ಯಾವ ಖಾತೆಗೂ ಜೀವ ಕೊಡಲಿಲ್ಲ, ಅಂಥೋನು ಮುಖ್ಯಮಂತ್ರಿಯಾಗಿ ಏನು ಮಾಡ್ತಾ ಅವುನಪ್ಪ ಅಂದ್ರೆ ಸತ್ತ ಸರಕಾರವ ಸಂಬಂಧಪಟ್ಟೋರಿಗೆ ಶವ ಒಪ್ಪಿಸಿದಂಗೆ ಒಪ್ಪಸಕ್ಕೆ ಕಾಯ್ತಾ ಅವುನೆ. ಅವುನ್ನ ಎದುರಿಗೆ ಕುಂಡ್ರಿಸಿಗಂಡು ಈ ವಿರೋಧ ಪಕ್ಷದವು ಅದೇನು ಮಾತಾಡ್ತರೊ ಏನೂ. ಅಂತೂ ಯಲ್ಲಾ ತಮಾಸಿಯಾಗ್ಯದೆ ಕಣೊ. ಒಂದೊಂದು ಸತಿ ಬೇಜಾರು ಆಯ್ತದೆ ಕಣೊ ಉಗ್ರಿ."

"ಹಾವೇರಿಗಾರ ಹೋಗಿ ಬಾ, ಬೇಜಾರು ಕಳೀತದೆ."

"ಹಾವೇರಿಗೆ ನಾನೋಗದೆ ಇರತಿನೇನೋ? ನಮ್ಮಲ್ಲೂ ವಸಿ ಜನ ಎಡೂರಪ್ಪನ ಅಭಿಮಾನಿಗಳು ಹುಟ್ಟಗಂಡವುರೆ."

"ಅಂಥಾ ರಾಮುಲುಗೆ ಅಭಿಮಾನಿಗಳು ಹುಟ್ಟಗೊಂಡು ಹೋಗಿ ಅವುನ್ನ ಮಾತಾಡಿಸಿ ದುಡ್ಡೀಸಗಂಡು ಬಂದವುರೆ ಕಣೊ."

"ಅದು ನನಿಗೂ ಗೊತ್ತು ಕಣೊ ಉಗ್ರಿ. ಅವುರು ಬಂದು ನನ್ನ ಕರುದ್ರು. ರಾಮುಲು ಅತ್ರಕೆ ಹೋಗಿ ಕಾಸುಕೇಳೊವಷ್ಟು ಗತಿಗೆಟ್ಟಿಲ್ಲ ನಾನು ಬರಲ್ಲ ಅಂದೆ. ಆದ್ರೂ ಅವುರ್‍ಯಲ್ಲ ಹೋಗಿ ಅವುನತ್ರ ದುಡ್ಡೀಸಗೆಂಡು ಬಂದ್ರು. ಅವುನ್ಯಾರೊ ಪೊರ್ಟ್ವಂಟಿ ಯಂಕಟೇಗೌಡ ಅನ್ನೋನ ಫ್ಲೆಕ್ಸ್ ಮಾಡ್ಸಿ ಲೈಟ್ ಕಂಬಕೆ ನ್ಯಾತಾಕ್ಯವುರೆ ಕಣೊ. ಹಳ್ಳಿ ಜನ ವಳ್ಳೆಯೋರು, ಗುಡ್ ಪರಸನ್ಸು, ಇನೋಸೆಂಟು ಅಂತರೆ. ಅಂಥೋರು ರಾಮುಲು ಭೇಟಿಯಾಗಿ ದುಡ್ಡ ತತ್ತರೆ ಅಂದ್ರೆ ಜನ ಏನಾಗ್ಯವುರೆ ಲ್ಯಕ್ಕ ಹಾಕು."

"ನೋಡು ಮತ್ತೆ ಇಂಥಾ ಜನ ಯಾರ ಮಾತ ಕೇಳ್ತರೊ?"

"ಜನ ಸಂಪೂರ್ಣ ಹಗ್ಗ ಮೂಗುದಾರಿಲ್ದಂಗಾಗ್ಯವುರೆ ಕಣೊ ಉಗ್ರಿ."

"ನೀನು ಮಹಾ ಕೊಳ್ಳುರಿ ಮೂಗುದಾರ ಹಾಯ್ಕಂಡು ಗೊಂತಿಗೆ ಬಿಕ್ಕಂತಿದ್ದಿಯೇನ್ಲ? ನಿನ್ನಂಗೆ ಯಲ್ಲವಾ."

"ನೋಡಕ್ಕ, ನನ್ನನ್ನ ಸಾರ್ವಜನಿಕರಿಗೆ ಓಲುಸಬ್ಯಾಡ. ನನಿಗೆ ಒಂದಿಷ್ಟು ನೈತಿಕ ಜವಾಬ್ದಾರಿ ಅದೆ. ಅದಿಲ್ಲದೆ ಇದ್ದಿದ್ರೆ ನಾನೂ ಹೋಗಿ ರಾಮುಲು ಅತ್ರ ಪಾರ್ಟಿ ವಕ್ತಾರ ಆಗಿ ಸೇರಿಕತಿದ್ದೆ ಗೊತ್ತಾ?"

"ಮುಂದಿನ ಯಲಕ್ಷನಿಗೆ ಯಾರ ಕಡಿಕೋಯ್ತಿಲಾ?"

"ಅದೇಳಕ್ಕೆ ಬರದಿಲ್ಲ ಕಣಕ್ಕ. ಯಾಕೆ ಅಂದ್ರೆ ಪಂಚಪಾಂಡವುರ ತರ ಐದು ಕ್ಯಾಂಡೇಟು ಬತ್ತರೆ. ಯಲ್ಲಾ ಬಟಾವಡೆ ಪಾರ್ಟಿನೆ. ಆಗ ನಾನು ವಳ್ಳೆ ಕ್ಯಾಂಡೇಟ್ ಸೆಲೆಕ್ಟ್ ಮಾಡಿಕತ್ತಿನಿ."

"ಎಡೂರಪ್ಪ, ರಾಮುಲು ಪಾರ್ಟಿ ಇಲ್ಲೆಲ್ಲಿ ಇದ್ದತೊ?"

"ಬಿ.ಜೆ.ಪಿನೂ ಇಲ್ಲ ಕಣೊ ಉಗ್ರಿ. ಆದ್ರು ಸ್ಟ್ರಾಂಗ್ ಕ್ಯಾಂಡೇಟ್‌ಗಳಿಗೆ ತೊಂದ್ರೆ ಕೊಡಕ್ಕೆ ಅಂತ ನಿಂತಗತ್ತರೆ. ಅಂದ್ರೆ ನೆಪಕ್ಕೆ ನಿಂತಗುಂಡು ಯಾರನೊ ಸೋಲಿಸಿ ಇನ್ಯಾರನೊ ಗೆಲ್ಲಿಸಿಬುಡ್ತವೆ."

"ಅಂತ ಅಪಾಯಕಾರಿ ಕ್ಯಾಂಡೇಟಾರ ಆಗೊ ಅತ್ತಗೆ."

"ಆಗಬವುದು ಕಣೊ ಉಗ್ರಿ. ಆದ್ರೆ ಈಗಿನ ಸಿಟುಯೇಶನ್ನಲ್ಲಿ ರಾಜಕಾರಣಿಗಳಿಗೆ ಬೆಲೆ ಇಲ್ಲ, ಕನಿಷ್ಠ ನನಗಿರೊ ಬೆಲೆನೂ ಇಲ್ಲ. ಬೆಲೆ ಕೊಟ್ರುವೆ ಅವುನು ಹೋದ ಮ್ಯಾಲೆ ಆಡಿಕತ್ತರೆ. ಅದ್ರಲ್ಲೂ ಮಾಜಿಗಳಾದ್ರೆ ಅವುರ ಕತೆ ಬ್ಯಾಡ. ಪೊಲೀಸ್‌ನೋರು ಮಾತ ಕೇಳದಿಲ್ಲ, ಅಧಿಕಾರಿಗಳು ನೆಗ್ಲೆಟ್ ಮಾಡ್ತರೆ. ಅಂಗಾಗಿ ನಾನು ಸಾರ್ವಜನಿಕವಾಗೆ ಇದ್ದಿನಿ. ರಾಜಕಾರಣ ಉಪಯೋಗಿಸಿಗಳದಾದ್ರೆ ಆ ಟೈಂ ನೋಡನಾ."

"ಬಾಲಿಲ್ಲದ ನರಿ ಕತೆ ಕೇಳಿದಂಗಾಯ್ತು."

"ಅಕ್ಕ, ನರಿಯ ಕಂಡಂ ಮಾಡಬ್ಯಾಡ. ಅದು ಉಪಾಯದಲ್ಲಿ ಬದುಕೊ ಕಲೆ ಕಲ್ತಗಂಡಿರತದೆ. ಕೆಟ್ಟ ಜನಕ್ಕೆ ಬುದ್ದಿ ಕಲುಸ್ತದೆ ಗೊತ್ತಾ."


"ಅಂಗೆ ಅನ್ನು ನೀನು."

"ಯೆಸ್!!" ■

ಕಲಿತವನು, ಅರಿತವನು


ಸೂಕ್ಷ್ಮಜ್ಞನಲ್ಲದವನು ಸುಶಿಕ್ಷಿತನಲ್ಲ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ರಷ್ಯಾದ ನಾಯಕ ಜೋಸೆಫ್ ಸ್ಟಾಲಿನ್‌ಗೆ ರಷ್ಯಾ ಸಾಹಿತ್ಯ ಚೆನ್ನಾಗಿ ಗೊತ್ತಿತ್ತು, ವಿಜ್ಞಾನದ ಪರಿಚಯವಿತ್ತು, ಮಾರ್ಕ್ಸ್‌ನನ್ನು ಓದಿ ಅರಗಿಸಿಕೊಂಡಿದ್ದ. ...ದರೆ ಆತ ಕ್ರೂರಿಯಾಗಿದ್ದ, ತನ್ನ ನಂಬಿಕೆಯೇ ರಷ್ಯಾಕ್ಕೆ ಅನಿವಾರ್ಯ ಎಂದು ತಿಳಿದಿದ್ದ, ತನ್ನ ದೇಶದ ಲಕ್ಷಾಂತರ ...ಜನರನ್ನು ಕೊಂದು ಹಾಕಿದ ಈತನಿಗೆ ತನ್ನ ಕ್ರಿಯೆಯ ಇಂಗಿತ ತಿಳಿಯಲಿಲ್ಲ. ಈತನಿಂದಾಗಿ ...ಮತಾವಾದ ಮತ್ತೆ ಸಾವಿರಾರು ವರ್ಷ ತಲೆಯೆತ್ತದಂತೆ ಆಯಿತು; ಸ್ಟಾಲಿನ್‌ನ ರೋಗಗ್ರಸ್ತ ಮನಸ್ಸು ...ವ ದೃಷ್ಟಿಯಿಂದಲೂ ಸುಶಿಕ್ಷಿತವಲ್ಲ. ಹಾಗೆಯೇ ಸಾರ್ತ್ರ್, ಪಾಸ್ಟ್, ಜಾಕ್ ಲಂಡನ್ ತರಹದವರು; ...ವರಿಗೆ ಓದುಬರಹ ಬಂದರೂ ವಿದ್ಯಾವಂತರಲ್ಲ. ಇದೇ ರೀತಿಯಲ್ಲಿ ಭಾರತಕ್ಕೆ ಸ್ವಪ್ರೇಮದ, ...ಹುಂಬಸ್ವಾಮ್ಯಿಯನ್ನು ನೀಡಿದವರು. ಇವರಿಗೆ ನೂರಾರು ಶ್ಲೋಕಗಳು, ವ್ಯಾಕರಣದ ಗುಟ್ಟುಗಳು, ...ಛಂದಸ್ಸಿನ ರೂಪಗಳು ಗೊತ್ತಿದ್ದರೂ ಇವರನ್ನು ಸುಶಿಕ್ಷಿತರು ಅನ್ನಲಾಗುವುದಿಲ್ಲ.

ಸುಶಿಕ್ಷಿತ ಅಥವಾ ವಿದ್ಯಾವಂತನಾದವನಿಗೆ ಮಾತು ಎಷ್ಟು ಮುಖ್ಯವೋ ಮೌನ ಅಷ್ಟೇ ಮುಖ್ಯ, ಮಾತಿನಲ್ಲಿ ಎಲ್ಲವನ್ನೂ ಹೇಳಲಾಗುವುದಿಲ್ಲ, ಕ್ರಿಯೆಗಳನ್ನು ಸಮರ್ಪಕವಾಗಿ ನಿರೂಪಿಸಲಾಗುವುದಿಲ್ಲ ...ದು ವಿದ್ಯಾವಂತನಾದವನಿಗೆ ಗೊತ್ತು. ವಿದ್ಯಾವಂತನಾದವನು ಕೇವಲ ಮಾನವೀಯ, ಪ್ರೇಮಮಯ ...ಸ್ತ್ರಮುಖ್ಯ; ಆತ ತನ್ನತನವನ್ನು ಅರಿತಿರುವುದರ ಜೊತೆಗೆ ತನ್ನ ಹೊರಗಿರುವ ವ್ಯಕ್ತಿ, ವಿಷಯಗಳ ...ಮುಖ್ಯ ತಿಳಿದಿರುತ್ತಾನೆ. ಇದರಿಂದಾಗಿಯೇ ತನ್ನ ಘನತೆ (dignity) ಇತರರ ಘನತೆಯನ್ನು ...ವಲಂಬಿಸಿರುವುದನ್ನು ತಿಳಿದಿರುತ್ತಾನೆ. ತನ್ನ ಸುತ್ತಾ ಜನರಾದ ಅವಮಾನ ತನಗೂ ಆದ ಅವಮಾನವೆಂದು ...ಂಬರುತ್ತಾನೆ. ಇಲ್ಲದಿದ್ದರೆ ಈತ ತನ್ನ ದುಷ್ಟತನದಿಂದ ಕೂಡಿದ ನೆಮ್ಮದಿಗಾಗಿ (ಒಂದು ಉದಾಹರಣೆ ...ಕೊಡುವುದಾದರೆ) ಜಾತಿಪದ್ಧತಿಯಂಥ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತಾನೆ. ವ್ಯಕ್ತಿಯಾಗಿ ಇನ್ನೊಬ್ಬನ ಅಸಹಾಯಕತೆಯನ್ನು ...ಸುವುದು ಕಷ್ಟವಾದಾಗ ಜಾತಿಪದ್ಧತಿಯ 'ವ್ಯವಸ್ಥೆ'ಯ ರಕ್ಷಣೆಯಲ್ಲಿ ಬೇರೆಯವರಿಗಾದ ಎಂಥ ಅವಮಾನವನ್ನೂ ...ಸುತ್ತಾನೆ. ಇದರಿಂದಾಗಿಯೇ ಜಾತಿಪದ್ಧತಿಯೇ ಒಂದು ಸೆರೆಮನೆಯಾಗುತ್ತದೆ; ಧರ್ಮದ ಕಾವು ಇಲ್ಲದೆ, ಅಂತರಂಗದ ...ಸಹಾನುಭೂತಿ ಇಲ್ಲದೆ ಈ ಜಾತಿಪದ್ಧತಿ ಮನುಷ್ಯನನ್ನು ಭಂಡರನ್ನಾಗಿಸುತ್ತದೆ. ಇಂಥ ಸ್ಥಿತಿ ತಲುಪಿದ ವ್ಯಕ್ತಿಯೊಬ್ಬನೂ ...ವ್ಯಕ್ತಿತ್ವಗಳ ಜೀವ, ಚಲ್ವಿ, ಸ್ವಾತಂತ್ರ್ಯವನ್ನು ಕೂಡ ಹೊಂದಿರುವುದಿಲ್ಲ.



ಸೂಕ್ಷ್ಮಜ್ಞನಾದವನು ಅನೇಕ ಪ್ರಶ್ನೆಗಳಿಗೆ ಉತ್ತರಿಸುವುದೇ ಇಲ್ಲ, ಯಾಕೆಂದರೆ ಆತನ ತಿಳಿವು ಅನೇಕಸಲ ಸ್ಪಷ್ಟವಾಗುವುದಿಲ್ಲ. ಸ್ಪಷ್ಟವಾಗದಿದ್ದರೂ ಅನುಭವವನ್ನು ಥಳಿಕಿನ ಮಾತುಗಳಲ್ಲಿ ಇಟ್ಟುಬಿಡಬಲ್ಲವನು ಅವಿದ್ಯಾವಂತ; ಆತನಿಗೆ ಥಳುಕು ಲಾಭದಾಯಕ.

"ಅಲ್ಲ ಸಾರ್, ಡಿ.ಆರ್. ನಾಗರಾಜ ತರಹದವರು ನಿಮ್ಮನ್ನು ಕೆಟ್ಟದಾಗಿ ಬೈದಿದ್ದರೂ ನೀವು ಅವರ ಬಗ್ಗೆ ನ್ಯಾಯದಿಂದ ಮಾತಾಡಲು ಯತ್ನಿಸುವುದೇಕೆ?" ಎಂದು ಒಬ್ಬ ಕೇಳಿದ. ನಾನು ಯೋಚಿಸಿ ಹೇಳಿದೆ: "ನನ್ನ ಬರಹಗಳಿಂದ ತನಗೆ ಅನ್ಯಾಯವಾಗಿದೆ, ತೊಂದರೆಯಾಗಿದೆ ಎಂದು ನಾಗರಾಜ್ ತಿಳಿದಿರಬಹುದು; ಆದರೆ ಅವನ ಖಂಡನೆಯಿಂದ ನನಗೆ ಹಾಗಾಗಿದೆ ಎಂದು ನನಗೆ ಅನ್ನಿಸುವುದಿಲ್ಲ, ನಾಗರಾಜ ಮಹಾ ಜಾಣನಾದ ಹುಡುಗ; ಬಹಳ ಓದಿಕೊಂಡಿರುವವನು. ಆದರೆ ಆತ ಅನೇಕ ಸಲ ತನ್ನ ಬರವಣಿಗೆಗೆ ಸಾಮಾಜಿಕ ಉದ್ದೇಶ ಇಟ್ಟುಕೊಂಡು ಬರೆದಂತಿರುತ್ತದೆ. ಅಂದರೆ ಯಾರನ್ನೋ ಮೆಚ್ಚಿಸಲು, ಯಾವುದೋ ಅನುಕೂಲಕ್ಕಾಗಿ ಬರೆದಂತಿರುತ್ತದೆ. ಅದು ವಿದ್ಯಾವಂತನಲ್ಲದವರ ಲಕ್ಷಣ. ನಾಗರಾಜ ತನಗೆ ಅನ್ನಿಸಿದ್ದಕ್ಕೆ ಬದ್ಧನಾಗಿ, ತನ್ನ ಸ್ಪಂದನಗಳನ್ನು ಬಿಂಬಿಸುವುದಕ್ಕಾಗಿ ಬರೆಯಲು ಆರಂಭಿಸಬೇಕೆಂಬುದು ನನ್ನ ಇಷ್ಟ, ಬರವಣಿಗೆಯಲ್ಲಿ ಆತ್ಮವಂಚನೆ, ಗಿಲೀಟು, ಸಾಮಾಜಿಕತೆ ಸುಲಭ; ಆದರೆ ಅದನ್ನು ಸೀಳಿಕೊಂಡು ಹೇಳಲು ಯತ್ನಿಸಬೇಕಾದ್ದು ವ್ಯಕ್ತಿಯೊಬ್ಬ ಲೇಖಕನ ಕರ್ತವ್ಯ, ನಾಗರಾಜ್ ಈ ಬಗ್ಗೆಯ ನಿಜವಾದ ಶಿಕ್ಷಣ ಪಡೆಯುತ್ತಾನೆಂದು ಆಶಿಸುತ್ತೇನೆ."



ಬರೆಯುವುದು. ಜೀವವನ್ನು, ಅರ್ಥವನ್ನು ಹಿಡಿದಿಡುವ ಕೆಲಸ; ಬರೆಯುವವನ ಘನತೆಯನ್ನು ಸಾಬೀತುಪಡಿಸುವ ಪ್ರಯತ್ನ. ಅದು ನಿಜವಾದ ವಿದ್ಯಾವಂತನಿಂದ ಮಾತ್ರ ಸಾಧ್ಯ. ದೋಸ್ತೋವ್‌ಸ್ಕಿ ಮೇಲುನೋಟಕ್ಕೆ ಅಸಹ್ಯ ವ್ಯಕ್ತಿಯಂತೆ ಕಂಡರೂ ಆತ ಗ್ರಹಿಸುವ ದ್ವಂದ್ವಗಳು ಮತ್ತು ಬದುಕಿನ ದುರಂತ ನಮಗೆ ಹೊಸ ದೃಷ್ಟಿಯನ್ನು ನೀಡುತ್ತವೆ. ಆತ ನಿಜಕ್ಕೂ ಸುಶಿಕ್ಷಿತ.

• ಮಾರ್ಚ್ 25, 1998

ಕಾಲಿದ್ದಷ್ಟೂ ಮಂಚ ಇರಬೇಕು!

ಸ್ವಾಭಿಮಾನ ಎಂದರೆ ಏನು?

ಕುಮಾರಿ ಜಯಲಲಿತಾ ಅವರನ್ನು ನೋಡಿ ಕಲಿಯಿರಿ!

ಹೀಗೆ ಹೇಳಲು ಕಾರಣ ಇದೆ.

ಕಾವೇರಿ ನದಿ ನೀರು ವಿವಾದ ನಿರಂತರವಾಗಿ ಇರಬೇಕು. ಆಗಲೇ ರಾಜಕಾರಣಿಗಳಿಗೆ ಒಂದು ಇದು ಎನ್ನುವುದು ಬಹಿರಂಗ ಸತ್ಯ! 'ನೀರು ಬಿಡಿ' ಎಂದು ಅವರು ಕೂಗು ಹಾಕಬೇಕು. 'ನೀರೇ ಇಲ್ಲ ಎಲ್ಲಿಂದ ಬಿಡುವುದು' ಎಂದು ಇವರು ಗಂಟಲು ಶೋಷಣೆ ಮಾಡಿಕೊಳ್ಳುವುದು ಲಾಗಾಯ್ತಿನಿಂದಲೂ ಬಂದಿರುವ ಪದ್ಧತಿ.

ನೀರು ಬಿಡಿ ಎಂದರೆ ಹನಿ ನೀರೂ ಬಿಡಲಾರೆವು ಅನ್ನುತ್ತಾರೆ. ಏನು ಮಾಡಬೇಕು ಜಯಲಲಿತಾ?

ಸಂಬಂಧಿಸಿದವರಿಗೆ 6 ಜನ ರವಾನೆ!

ಈ ರವಾನೆ ಭರಾಟೆ ನೋಡಿದರೆ ಅವಶ್ಯಕತೆಯಿಲ್ಲದಿದ್ದರೂ ಅರ್ಜಿ ಗುಜರಾಯಿಸುತ್ತಾರೇನೋ ಅನ್ನುವ ಅನುಮಾನ ಬರುತ್ತೆ. ಬೆಟ್ಟಕ್ಕೆ ಕಟ್ಟಿ ಎಳೆಯೋದು, ಹೋದರೆ ಕಟ್ಟಿದ್ದು ಹೋಯಿತು. ಬಂದರೆ ಬೆಟ್ಟಾನೆ ಬಂತು ಅನ್ನುವ ಮನೋಭಾವ! ಇರಲಿ.

ಸುಪ್ರೀಂಕೋರ್ಟಿಗೂ 'ಅಮ್ಮ' ಅರ್ಜಿ ಭರಾಟೆ ರೇಸಿಗೆ ಹುಟ್ಟಿಸಿರಬೇಕು. ಅಲ್ಲ ಈ ಯಮ್ಮ ಏನು ಪ್ರಧಾನಿ ಅಂದರೆ ನೀರು ಅಂಟಿ ಅಂದುಕೊಂಡಿದ್ದಾಳೋ ಹೇಗೆ. ಇದೊಂದೇ ಕೆಲಸಾನೆ ಅವರಿಗಿರೋದು. ಇವರು ಕೇಳಿಕೇಳಿದಾಗೆಲ್ಲ ಸಭೆ ನಡೆಸೋಕೆ ಸಾಧ್ಯ ಇಲ್ಲ ಅಂತಾನೂ ಯೋಚಿಸಿರಬೇಕು. ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತು ಮಾತುಕತೆಯ ಮೂಲಕ ಒಂದು ನಿರ್ಧಾರಕ್ಕೆ ಬನ್ನಿ ಎಂದು ಸೂಚಿಸಿತು.

ಹಾಗೆ ಸೂಚಿಸಿದ್ದೇ ತಡ ಕುಮಾರಿ ಜಯಲಲಿತಾ ಉರುಫ್ ಅಮ್ಮ ತರಾತುರಿಯಲ್ಲಿ ಬೆಂಗಳೂರಿಗೆ ನಾನೇ ಬರುತ್ತೇನೆ ಎಂಬ ಸುದ್ದಿ ರವಾನಿಸಿದರು. ಜಯಲಲಿತಾ ಆದ ಜಯಲಲಿತಾ ಅವರೇ ಹೀಗೆ ಹೇಳಿದರು ಎಂದಮೇಲೆ ಕರ್ನಾಟಕ ಸರ್ಕಾರ ಪುಳಕಿತಗೊಂಡಿತಂ, ರೋಮಾಂಚನಗೊಂಡಿತು, ಇನ್ನು ಏನೇನುಗೊಂಡಿತೊ ಅದೆಲ್ಲ ಗೊಂಡಿತ್ತು! 'ಲೀಲಾ ಪ್ಯಾಲೇಸ್' ಹೋಟಲಿನಲ್ಲಿ ಸಭೆಗೆ ಸಿದ್ಧತೆ ನಡೆಯಿತು. ಅದು ಯಾಕೆ ಅಲ್ಲೇ ಮಾಡಿದರು? ನಮ್ಮ ಘನ ಸರ್ಕಾರದ ಯಾವ ಕಟ್ಟಡದಲ್ಲೂ ಅನುಕೂಲಕರ ಸಭಾಂಗಣ ಇರಲಿಲ್ಲವೆ ಎಂದರೆ ಇರಲಿಲ್ಲ ಅಂತ ಅಲ್ಲ, ಅಲ್ಲಿ ಸಭೆ ನಡೆಸಿದರೆ ಒಂದು ಇದು. ಅದಕ್ಕೆ ಅಲ್ಲೇ ಮಾಡಿದರು.

'ಅಮ್ಮ' ನಿಗದಿತ ದಿವಸ ವೇಳೆಗೆ ಸರಿಯಾಗಿ ವಿಮಾನದಲ್ಲಿ ಬಂದು ಇಳಿದರು. ಅಲ್ಲಿಂದ ಸಭಾಂಗಣಕ್ಕೆ ಹೋಗಬೇಕಿತ್ತು, ನಡೆದುಹೋಗುವಂತಿಲ್ಲ, ಹಾಗೆ ಮಾಡಿದರೆ ವರ್ಚಸ್ಸಿಗೆ ಧಕ್ಕೆ... ಮಾನಕ್ಕೆ ಇನಾಯಂ. ಕಾರಂ ಬೇಕಂ. ಅದನ್ನು ಒದಗಿಸಲಾರದಷ್ಟು ಬರ ಏನೂ ಕರ್ನಾಟಕ ಸರ್ಕಾರಕ್ಕೆ ಬಂದಿರಲಿಲ್ಲ, ಆದರೆ ಈ ಹಂಗಿನ ಕಾರು ಪ್ರಯಾಣ ಸ್ವಾಭಿಮಾನಿ ಅಮ್ಮಗೆ ಹಿಡಿಸದು. ಚೆನ್ನೈನಿಂದಲೇ ಬುಲೆಟ್ ಪ್ರೂಫ್ ಕಾರು ತರಿಸಿದ್ದರು. ಅದರಲ್ಲೇ ಸಭೆಗೆ ಹೋದರು.

ಸಭೆ ಪ್ರಾರಂಭ ಆಗಬೇಕು. ನಿಂತುಕೊಂಡೇ ಸಭೆ ನಡೆಸುವುದು ಮರ್ಯಾದೆ ಅಲ್ಲ, ಆಸನಗಳು ಬೇಕು. 'ಅಮ್ಮ'ಗೆ ಹೃದಯ ವೈಶಾಲ್ಯತೆ ಇಲ್ಲ ಎಂದು ಕೆಲವರು ಆರೋಪಿಸುತ್ತಾರೆ. ಅದೇನೋ ನನಗೆ ತಿಳಿಯದು. ದೇಹದ ವಿಶಾಲತೆಗೆ ಯಾವ ಕೊರತೆಯೂ ಇಲ್ಲ ಎಂಬುದನ್ನು ಬಲ್ಲೆ, ಅದರ ಆಕಾರಕ್ಕೆ ಸರಿಹೊಂದುವ ಕುರ್ಚಿ ಒದಗಿಸಲು ಸರ್ಕಾರ ಸಿದ್ಧ ಇದ್ದಿರಬಹುದು. ಅದಕ್ಕೆ ಹಿಂಜರಿಯುವುದಿಲ್ಲ ಎಂಬ ಅರಿವೂ ನನಗೆ ಇದೆ. ಯಾಕೆಂದರೆ ಜಾನ್ ಕೆನೆತ್ ಗಾಲ್‌ಬ್ರೈತ್ ಅನ್ನುವ ಏಳು ಅಡಿಯ ಮನುಷ್ಯ ಭಾರತದಲ್ಲಿ



ಅಮೆರಿಕ ರಾಯಭಾರಿ ಆಗಿದ್ದರು. ಅವರು ಕರ್ನಾಟಕಕ್ಕೆ ಭೇಟಿ ನೀಡಿದಾಗ 'ಮಂಚ ಇದ್ದಷ್ಟು ಕಾಲು ನೀಡಿಕೊಳ್ಳಪ್ಪ' ಅಂತ ಏನೂ ಹೇಳಲಿಲ್ಲ, ಕಾಲಿದ್ದಷ್ಟೂ ಮಂಚವೂ ಇರಬೇಕು ಎಂದು ಮಂಚದ ವಿನ್ಯಾಸವನ್ನೇ ಬದಲಾಯಿಸಿತ್ತು ನಮ್ಮ ಸರ್ಕಾರ. ಈಗ ಹಿಂಜರಿಯುತ್ತೆ ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ. ಆದರೆ 'ಅಮ್ಮ' ಕರ್ನಾಟಕದ ಹಂಗಿನಲ್ಲಿರಲು ಸುತರಾಂ ಬಯಸಲಿಲ್ಲ, ಚೆನ್ನೈನಿಂದಲೇ ಮೂರು ಕುರ್ಚಿಗಳನ್ನು ತರಿಸಿದ್ದರು! ಮೂರು ಕುರ್ಚಿ ಯಾಕೆ, ಒಂದು ಕುರ್ಚಿ ಸಾಲದೆ ಎಂದರೆ ಸ್ವಾಭಿಮಾನಿಯ ಮುಂದಾಲೋಚನೆ ಹಾಗಿತ್ತು! ಒಂದು ವೇಳೆ ಒಂದು ಕುರ್ಚಿಗೆ ಏನೋ ಆಯಿತು. ಆಗ ಏನು ಮಾಡಬೇಕು? ಕರ್ನಾಟಕ ರಾಜ್ಯದ ಹಂಗಿನಲ್ಲಿರಬೇಕು. ಎರಡು ಇದ್ದರೆ ಅದನ್ನು ಬದಲಾಯಿಸಿಕೊಳ್ಳಬಹುದು. ಅದು ತೊಂದರೆ ಕೊಟ್ಟಿತು ಅನ್ನಿ, ಮೂರನೆಯದ್ದು ಇದ್ದೇ ಇದೆ! ಮುಂಜಾಗ್ರತೆ ಕ್ರಮ ಅಂದರೆ ಇದು!

ಕುರ್ಚಿಗಳನ್ನು ಅಲ್ಲಿಂದ ತರಿಸಿರುವುದಕ್ಕೆ ಹಲವರು ಹಲವಾರು ಕತೆ ಕಟ್ಟುತ್ತಿದ್ದಾರೆ. ಕುರ್ಚಿಗೆ ಏನೋ ವಿಶೇಷ ಶಕ್ತಿ ತುಂಬಿರಬೇಕು. ಅದರಲ್ಲಿ ಕುಳಿತು ಚರ್ಚಿಸಿದರೆ ಜಯ ಖಚಿತ ಎಂದು ನಂಬಿರಬೇಕು ಎನ್ನುತ್ತಾರೆ. ಹಾಗಲ್ಲ, ಕುರ್ಚಿಯನ್ನು ಅಲ್ಲೇ ಬಿಟ್ಟು ಬಂದರೆ ಮುದಿಯ ಕರುಣಾನಿಧಿ ಅದನ್ನು ಆಕ್ರಮಿಸಿಕೊಂಡಾನು ಎಂಬ ಭಯದಿಂದ ಹೀಗೆ ಮಾಡಿದ್ದಾರೆ ಅನ್ನುತ್ತಾರೆ. ಹೆಣ್ಣುಮಕ್ಕಳು ತೌರಿಗೆ ಬಂದಾಗ ಗಂಡನ ಮನೆಯಲ್ಲಿ ಹೇಗೆ ಮೆರೀತೀನಿ ಎಂದು ಪ್ರದರ್ಶಿಸೋಕೆ ಹೀಗೆಲ್ಲ ಮಾಡಿದ್ದಾರೆ ಎನ್ನುತ್ತಾರೆ. 'ಇದು ಯಾವುದೂ ಅಲ್ಲ ಕಣ್ರೀ, ಅವರ ಸ್ವಾಭಿಮಾನ ಹೀಗೆಲ್ಲ ಮಾಡಿಸಿತ್ತು' ಅಂದರೆ 'ಮಾತುಕತೆ ಮುರಿದು ಬೀಳಿಸಲೆಂದೇ ಬಂದಿದ್ದವರಿಗೆ ಇವೆಲ್ಲ ನಾಟಕ ಆಡುವ ಅವಶ್ಯಕತೆಯಾದರೂ ಏನಿತ್ತು?' ಎನ್ನುತ್ತಾರೆ. ಆಗಲಿ ಅವರ ದೇವರೇ ಮೆರೀಲಿ. ಹೀಗೆಲ್ಲ ಮಾಡದೆ ಇದ್ದರೆ ಸುಪ್ರೀಂಕೋರ್ಟು 'ನಮ್ಮ ಸೂಚನೆ ಮನ್ನಿಸಿದ್ದಾರೆ' ಅಂತ ಸಮಾಧಾನ ಪಟ್ಟುಕೊಳ್ಳಲಿ!

ಮೂಗು ಹಿಡಿದು ಹಣ ಸುರಿಸಿ

'ಪ್ರಶ್ನಿಸುವ ಪ್ರವೃತ್ತಿ ಬೆಳೆಸಿಕೊಳ್ಳಿರೋ' ಎಂದು ಕನ್ನಡ ಪಂಡಿತರು ತಲೆ ತಿನ್ನುತ್ತಿದ್ದರು. ಅದರ ಹಿಂದಿನ ಉದ್ದೇಶ ಏನು ಎನ್ನುವುದು ತಿಳಿದೇ ಇರಲಿಲ್ಲ, ಇತ್ತೀಚೆಗೆ ಅವರ ಮಾತಿನ ಅಂತರಾಳದ ಅರಿವು ಆಯಿತು. ಅದು ಹೇಗೆ ಅಂದರೆ ಸಂಸತ್ತಿನಲ್ಲಿ ಪ್ರಶ್ನೋತ್ತರ ವೇಳೆ ಎಂದು ಇರುತ್ತಲ್ಲವಾ. ಕೆಲವು ಸದಸ್ಯರು ಪ್ರಶ್ನೆ ಕೇಳಬೇಕಾದರೆ ಹಣ ಕೊಡಬೇಕಂತೆ! ಅಂದರೆ ಪ್ರಶ್ನೆ ಕೇಳುವುದರ ಹಿಂದಿನ ಉದ್ದೇಶ 'ಹಣ ಗಳಿಕೆ' ಎಂದು ಅರಿವಾಯಿತು. ಲಾಭದಾಯಕ ಪ್ರವೃತ್ತಿ ಇದು ಎಂಬ ನಿರ್ಧಾರಕ್ಕೆ ಬರುವಷ್ಟರಲ್ಲಿ ಒಂದು ತೊಡಕು ಎದುರಾಯಿತು. ಪ್ರಶ್ನೆ ಕೇಳದಿರಲೂ ಗೌರವಾನ್ವಿತ ಸದಸ್ಯರಿಗೆ ಹಣದ ಆಮಿಷ ಒಡ್ಡಲಾಗುತ್ತಂತೆ. ಯಾರು ಯಾಕೆ ಹೀಗೆ ಬಾಹ್ಯ ಒತ್ತಡ ಹೇರುತ್ತಾರೆ ಅಂದರೆ ಕೆಲವು ಗೌರವಾನ್ವಿತ ಉದ್ಯಮಿಗಳು ಇದ್ದಾರಂತೆ. ಅವರ ಸಂಪತ್ತಿನ ಮೂಲ ಕೆದಕುತ್ತಾ ಹೋದರೆ ಅನಾಚಾರದ ಕಡೆಗೇ ಬೆರಳು ತೋರಿಸುತ್ತಂತೆ. ಹೀಗೆ ಮಾಡುವುದು 'ವ್ಯವಹಾರ ಧರ್ಮ' ಎಂದೇ ಪ್ರಖ್ಯಾತ ನಾಮಿಗಳು ತಿಳಿದಿರುತ್ತಾರಂತೆ. ಈ ಗುಟ್ಟು ಬಯಲಾದರೆ ಅವರ ಗೌರವ ಘನತೆಗೆ ಕುಂದು ಎಂದು ಅವರು ಭಾವಿಸುತ್ತಾರಂತೆ. ಬಯಲಾಗದಂತೆ ಭ್ರಷ್ಟಾಚಾರದಲ್ಲಿ ತೊಡಗಿದರೆ ಅಪರಾಧ ಅಲ್ಲ ಎನ್ನುವುದೇ ಅವರ ಸಿದ್ಧಾಂತವಂತೆ!

ಇದನ್ನೆಲ್ಲ ಹೇಳಲು ಕಾರಣ ಇದೆ. ನಮ್ಮದು ಹಗರಣಗಳ ದೇಶ ಅಲ್ಲವಾ. ಮಹಾಲೇಖಪಾಲರು ಹಗರಣ

ಅಣಕ



• ಎಚ್.ಎಲ್.ಕೇಶವಮೂರ್ತಿ

ಬಯಲು ಮಾಡುವುದು, ದೇಶಕ್ಕೆ ಇಷ್ಟು ಕೋಟಿ ನ... ಆಯಿತೋ ಎಂದು ವಿರೋಧ ಪಕ್ಷಗಳು ಕೂಗಾಡುವು... ಕಾನೂನಿನ ಪ್ರಕಾರವೇ ಎಲ್ಲವನ್ನೂ ಮಾಡಲಾಗಿದೆ ಎಂ... ಆಡಳಿತಾರೂಢ ಸರ್ಕಾರ ಸತ್ಯ ಹರಿಶ್ಚಂದ್ರನ ವೇಷ... ಮೆರೆದಾಡುವುದು ಮಾಮೂಲು ವಿಷಯ ಆಗಿಹೋಗಿ... 'ಕಲ್ಲಿದ್ದಲು ಹಗರಣ' ಬಯಲಾಯಿತು ನೋಡಿ. ಕೆಲ... ಸುದ್ದಿವಾಹಿನಿಗಳು ಅದರ ಆಳಕ್ಕೆ ಇಳಿದವಂತೆ. ಭ್ರಷ್ಟಾಚಾ... ಬ್ರಹ್ಮರಾಕ್ಷಸನ ಆವಾಸಸ್ಥಾನವೇ ಅದು ಅನ್ನುವುದನ್ನು ... ಹಚ್ಚಿದವಂತೆ. ಯಾವ ಯಾವ ವಾಹಿನಿಗಳು ಯಾವ ಯ... 'ಗೌರವಾನ್ವಿತ' ಮೂಗು ಹಿಡಿದು ಹಣದ ಹೊ... ಹರಿಸಿಕೊಂಡವೋ ತಿಳಿಯದು. ಆದರೆ 'ಜೀನ್ಯೂಸ್' ವಾಹಿ... ಮಾತ್ರ ಸುದ್ದಿಯಲ್ಲಿದೆ.

ಅದೇನಾಗಿತ್ತು ಅಂದರೆ ಜಿಂದಾಲ್ ಕಂಪನಿಯವ... ಕಲ್ಲಿದ್ದಲು ಹಗರಣದಲ್ಲಿ ತಗುಲಾಕಿಕೊಂಡಿದ್ದರಂತೆ. ಸುದ್ದಿ ವಾಹಿನಿಯವರು ಅವರನ್ನು ಸಂಪರ್ಕಿಸಿ 'ನೋಡ... ನಿಮ್ ಕತೆ ಹಿಂಗಿಂಗೆ ಅದೆ. ಅದು ಏನಾದರೂ ಟಿವಿ... ಹಾಕಿದರೆ ನಿಮ್ಮ ಮಾನ ಹರಾಜಾಗ್ತದೆ' ಅಂತ ಹೇಳಿದ್ರ... ಅದಕ್ಕೆ ಅವರು 'ಹಂಗೆಲ್ಲ ಮಾಡಬೇಡಿ ಕಣ್ರಿ. ಬ... ಮಾತನಾಡೋಣ' ಅಂದರಂತೆ. 'ಮಾತನಾಡುವುದು' ಅಂ... ಗೊತ್ತಿದೆಯಲ್ಲ, ಟೀವಿಯೋರು ಹೋದರಂತೆ. 'ನೂ... ಕೋಟಿ ಕೊಡಿ' ಅಂತ ಕೇಳಿದ್ರಂತೆ. ಅವರು 'ಅ... ಅಗಲ್ಲ ಕಣ್ರಿ. ಬಾರಿ ದುಬಾರಿ ಆಯಿತು. ಇಪ್ಪತ್ತು ಕೊ... ಮಾಡ್ಕಳಿ' ಅಂದರಂತೆ. ಇವರು ನೂರು ಅನ್ನೋದು ಅವ... ಇಪ್ಪತ್ತು ಅನ್ನೋದು. ಹಗ್ಗ ಜಗ್ಗಾಟ ಆರು ಸಲ ಮಾತು... ಆದರೂ ಹಂಗೇ ಇತ್ತಂತೆ.

'ಎಲ್ಲೋದಾನು ಮಾನಮರ್ಯಾದೆ ಪ್ರಶ್ನೆ ಅಲ್ಲ... ಬಂದೇ ಬತ್ತಾನೆ' ಎಂದುಕೊಂಡು ಇವರು ಅವರ ಫೋ... ನಿರೀಕ್ಷೆಯಲ್ಲೇ ಇದ್ದರಂತೆ. ಆದರೆ ಅವರೇನು ಮಾಡಿದ್ದ... ಅಂದರೆ 'ಸ್ಟ್ರೀಜ್ ಆಪರೇಷನ್' ಅಂತಾ ಮಾಧ್ಯಮಗ... ಮಾಡ್ತಾರಲ್ಲ ಹಂಗೇಯ ಅವರೂವೆ ಸಿಸಿ ಕ್ಯಾಮೆರಾದ... ಎಲ್ಲಾನೂ ರೆಕಾರ್ಡ್ ಮಾಡಿಕೊಂಡುಬಿಟ್ಟಿದಾರಂತೆ!

ಆಮೇಲೆ ಏನು ನಡೆಯುತ್ತದೆಯೋ ಅದೆಲ್ಲ ನಡೆಯಿ... ಜಿಂದಾಲ್ ಸಾಹೇಬರು ಪೊಲೀಸರಿಗೆ ದೂರು ನೀಡಿದ... ಸಾಹೇಬರು ನೀಡಿರೋ ದೂರಲ್ಲವಾ. ಜಿ ಸುದ್ದಿ ವಾಹಿನಿ... ಇಬ್ಬರು ಸಂಪಾದಕರನ್ನು ಜೈಲು ಸೇರಿಸಿದರು.

ಒಳ್ಳೆಯ ಕೆಲಸಾನೆ ಮಾಡಿದಾರೆ ಪೊಲೀಸಿನವ... ಸುದ್ದಿ ವಾಹಿನಿಗಳು ಹೀಗೆ ಬಲವಂತವಾಗಿ ಹಣ ವಸೂ... ಮಾಡುವುದು ಅಪರಾಧಾನೇಯ. ಆದರೆ ಒಂದು. ಜಿಂದಾ... ಸಾಹೇಬರು ಹಗರಣ ಬಯಲು ಮಾಡದಿರಲು ಇಪ್ಪ... ಕೋಟಿ ಕೊಡ್ತೀನಿ ಅಂದಿದ್ದರಲ್ಲ ಅದು ಅಪರಾಧಕಕ್ಷೆ... ಹೊರಗಿದೆಯಾ ಅಂತಾವ....!

ಸೌಜನ್ಯಳ ರೇಪ್ ಮತ್ತು ಮರ್ಡರ್ ಕೇಸನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು

ಧರ್ಮಸ್ಥಳದ ಸೌಜನ್ಯಳ ರೇಪ್ ಮತ್ತು ಮರ್ಡರ್ (ಡಿಸೆಂಬರ್ 5, 2012ರ ಸಂಚಿಕೆ) ಕೇಸನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು. ಯಾಕೆಂದರೆ ಅಂದಿನ ಧರ್ಮಸ್ಥಳ ಇಂದು ಅಧರ್ಮಸ್ಥಳವಾಗುತ್ತಿದೆ. ಅಕ್ಟೋಬರ್ 9 ರಂದು ರಾತ್ರಿ ಧರ್ಮಸ್ಥಳದ ಪ್ರಕೃತಿ ಚಿಕಿತ್ಸಾಲಯದ ಪಕ್ಕದ ದಾರಿಯಲ್ಲಿ ಸೌಜನ್ಯ ಹೋಗುತ್ತಿದ್ದಾಗ ಪಾತಕಿಗಳ ಗ್ಯಾಂಗ್





ಆಕೆಯಂನ್ನು ಎಳೆದಾಡಿ, ಬಲಾತ್ಕಾರವಾಗಿ ರೇಪ್ ಮಾಡಿ, ಮರ್ಮಾಂಗಕ್ಕೆ ಮಣ್ಣು ತುಂಬಿರುವುದು ಆಕೆ ವಿಚಿತ್ರ ಹಿಂಸೆಗೊಳಗಾಗಿರುವುದನ್ನು ಸಾಬೀತುಪಡಿಸುತ್ತದೆ. ನೇತ್ರಾವತಿ ನದಿಯಲ್ಲಿ ಅಸಹಜ ಸಾವುಗಳು ಸಂಭವಿಸುವುದು, ಅನಾಥ ಹೆಣಗಳು ಸಿಗುವುದು ಅಲಿಖಿತ ನಿಯಮ ಎಂಬಂತಾಗಿದೆ. 1987ರಲ್ಲಿ ಕಮ್ಯೂನಿಸ್ಟ್ ನಾಯಕರಾದ ದೇವಾನಂದ ಎಂಬುವವರ ಮಗಳಾದ ಪದ್ಮಲತಾರವರನ್ನು ರೇಪ್ ಮಾಡಿ ಕೊಲೆ ಮಾಡಲಾಗಿತ್ತು, ಆದರೂ ಇಂತಹ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ.

ಇದೆಲ್ಲವನ್ನು ಕುರಿತು ನಿಮ್ಮ ಪತ್ರಿಕೆಯ ವರದಿಗಾರ ವಸ್ತುನಿಷ್ಠ ವರದಿಯನ್ನು ಬರೆದಿದ್ದಾರೆ. ಈ ಪ್ರಕರಣವನ್ನು ತಕ್ಷಣ ಸರ್ಕಾರ ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಪ್ರಗತಿಪರ ಸಂಘಟನೆಗಳು ಒತ್ತಾಯಿಸುತ್ತಿವೆ.

-ಎ.ಐ.ಎಸ್.ಎಫ್ ಸಂಘಟನೆಯ
ಎಲ್.ಪಿ.ಸುಭಾಷ್‌ಚಂದ್ರ, ಅನಿಲ್ ನಾಯ್ಕ್, ಶಿವರಾಜ್ ಮತ್ತು ಕಿಸಾನ್ ಸಭಾ ಸಂಘಟನೆಯ ವಿರೇಶ್ ಜೋಗಿಹಳ್ಳಿ, ಹೊಸಹಳ್ಳಿ ನಾಗರಾಜ್, ವಿರುಪಾಕ್ಷಪ್ಪ ಮತ್ತು ಗಂಗಣ್ಣ


ವೀರೇಂದ್ರ = ವಾಜಪೇಯಿ, ಹರ್ಷೇಂದ್ರ = ಅದ್ವಾಣಿ. ಓಂ ಮಂಜುನಾಥಾಯ ನಮಃ!

-ಓದುಗ, ಎಸ್ ಎಂ ಎಸ್ ಮೂಲಕ

ವಾಸು ಅವರ 'ಅಂಚಿನಿಂದ' ಅಂಕಣ ತುಂಬಾ ಚೆನ್ನಾಗಿದೆ.

ಡಾ. ಎಚ್.ವಿ.ವಾಸು ಬರೆಯುತ್ತಿರುವ 'ಅಂಚಿನಿಂದ' ಅಂಕಣ ಬರಹ ಚೆನ್ನಾಗಿದೆ. ಅದರಲ್ಲೂ 'ಕನ್ನಡನಾಡು ನೆನಪಿಟ್ಟುಕೊಳ್ಳಬೇಕಾದ ಮೂರು ಜೀವಗಳು' ಲೇಖನ (ಡಿಸೆಂಬರ್ 5, 2012ರ ಸಂಚಿಕೆ) ನನ್ನನ್ನು ತುಂಬಾ ಡಿಸ್ಟರ್ಬ್ ಮಾಡಿತು. ಆ ಮೂವರೂ ಅಮರರಾಗಲಿ. ಅವರನ್ನು ಕುರಿತು ಬರೆದದ್ದಕ್ಕೆ ಕೃತಜ್ಞತೆಗಳು.

-ನೆಲಕುಂಟೆ ವೆಂಕಟೇಶ್




ಹಿಂದೆ ಈ ನಾಡಿನ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದ ಮಾಜಿ ಪ್ರಗತಿಪರರು ಇಂದು ಕೆಜೆಪಿ, ಬಿಎಸ್‌ಆರ್ ಸೇರಲು ಹೊರಟಿರುವುದು ಅವರ ಸಾಂಸ್ಕೃತಿಕ ದಿವಾಳಿತನಕ್ಕೆ, ಧನದಾಹಕ್ಕೆ ಹಿಡಿದ ಕೈಗನ್ನಡಿಯಾಗಿದೆ (ಡಾ.ವಾಸು ಅವರ 'ಅಂಚಿನಿಂದ' ಅಂಕಣದಲ್ಲಿ ಪ್ರಕಟವಾದ 'ಒಂದು ಸಾರಿ ಉಫೀ ಅನ್ನಿ', ಡಿಸೆಂಬರ್ 12, 2012 ಸಂಚಿಕೆ). ಇಂತಹ ಭ್ರಷ್ಟ ಅವಕಾಶವಾದಿಗಳನ್ನು ನಾಡಿನ ಪ್ರಾಮಾಣಿಕರೆಲ್ಲರೂ ತಿರಸ್ಕರಿಸದಿದ್ದರೆ ನಮ್ಮ ಕರ್ನಾಟಕಕ್ಕೆ ಉಳಿಗಾಲವಿಲ್ಲವೆಂಬುದನ್ನು ಡಾ. ವಾಸು ಅವರು ತ... 'ಅಂಚಿನಿಂದ' ಅಂಕಣದಲ್ಲಿ ಸ್ಪಷ್ಟವಾಗಿ ನಿರೂಪಿಸಿರುವುದ... ಎಚ್ಚರಿಕೆಯಿಂದ ಪರಿಗಣಿಸಬೇಕಿದೆ.

-ಮುತ್ತುರಾಜ್, ಮಂ...

ಬಾಳ್ ಠಾಕ್ರೆ ಮತ್ತು ಕಸಬ್ ಸಾವು

ಮುಂಬೈ ಮೇಲಿನ ದಾಳಿಯಲ್ಲಿ ತನ್ನ ಸಹೋ... ಮತ್ತು ಭಾವನನ್ನು ಕಳೆದುಕೊಂಡಿದ್ದರೂ ಹಿಂದಿ ... ಅಶೀಶ್ ಚೌಧುರಿ ಅವರು "ಕಸಬ್ ಒಮ್ಮೆ ನನ್ನ ಮಗನ... ಮುಗ್ಧನಾಗಿದ್ದ" (ಡಿಸೆಂಬರ್ 12, 2012 ಸಂಚಿಕೆ) ಎಂ... ಪಾಕಿಸ್ತಾನದ ಭಯೋತ್ಪಾದಕ ಕಸಬ್‌ನನ್ನು ಕುರಿತಂತೆ ಹೇ... ಮಾತುಗಳನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು. ಅಶೀ... ಚೌಧುರಿಯ ಮಾತುಗಳಲ್ಲಿ ಅದೆಷ್ಟು ಮಾನವೀಯತೆ ಇ... ಕ್ರೌರ್ಯ ಮತ್ತು ಗೊಂದಲಗಳೇ ತುಂಬಿರುವ ಪ್ರಸ... ದಿನಗಳಲ್ಲಿ ಚೌಧುರಿ ತರಹದವರ ಹೃದಯದಲ್ಲಿರ... ಮಾನವೀಯತೆಯೇ ನಮ... ಆಶಾಕಿರಣ.



-ರವಿಕುಮಾರ್, ಹಾ...

ಬಾಳ್ ಠಾಕ್ರೆ ಕುರಿ... ಜಿ.ರಾಜಶೇಖರ ಅವರು ಬ... 'ಕೊಲೆಗಡುಕನೊಬ್ಬನ ಸಾ... ವೃತ್ತಾಂತ' ಮತ್ತು ಶಶಿ ಪುತು... ಅವರು ಬರೆದ 'ಠಾಕ್ರೆ ಮಹಾರಾಷ್ಟ್ರಕ್ಕೆ ಸೀಮಿತಗೊಂಡಿ... ದೇಶಕ್ಕಾದ ಬಹುದೊಡ್ಡ ಲಾಭ' ಎಂಬ ಪತ್ರ (ಡಿಸೆಂಬ...

ರಾಯಣ್ಣನಂತಹ ಪಾತ್ರಗಳಿಗೆ ತ್ರೀ ಇಯರ್ ಬ್ರೇಕ್


'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ 50ನೇ ದಿನದತ್ತ ದಾಪುಗಾಲು ಹಾಕುತ್ತಿದೆ. ಈ ಚಿತ್ರದ ಯಶಸ್ಸು ...ಂಧಿನಗರದಲ್ಲಿ ಅನೇಕ ಹೊಸ ಚಿಂತನೆ ಮತ್ತು ಆಲೋಚನೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಉದಾಹರಣೆಗೆ, ...ಂತಹ ಐತಿಹಾಸಿಕ ಮತ್ತು ಪೌರಾಣಿಕ ಚಿತ್ರಗಳನ್ನು ಏಕೆ ಮಾಡಬಾರದು ಎಂದು ಹಲವು ನಿರ್ಮಾಪಕರು ...ಂತಿಸುತ್ತಿದ್ದಾರೆ. ಈ ಚಿತ್ರಕ್ಕಾದ ವೆಚ್ಚ ಮತ್ತು ಅದು ಗಳಿಸಿರುವ ಆದಾಯವನ್ನು ನೋಡಿದರೆ ಕನ್ನಡ ಚಿತ್ರವೊಂದು ...0 ರಿಂದ 35 ಕೋಟಿಯಷ್ಟು ಹಣವನ್ನು ಗಳಿಸುವ ತಾಕತ್ತು ಹೊಂದಿದೆ ಎಂಬುದು ಪ್ರೂವ್ ಆಗಿದೆ.

ಈ ಚಿತ್ರ ಹಿಟ್ ಆದನಂತರ ಇಂತಹದ್ದೇ ಪಾತ್ರಗಳನ್ನು ...ಾಡಬೇಕೆಂದು ನಾಯಕ ನಟ ದರ್ಶನ್ ಅವರಿಗೆ ಅನೇಕ ...ಹ್ವಾನಗಳು ಬಂದಿವೆ. ಈ ಬಗ್ಗೆ ದರ್ಶನ್‌ರನ್ನು ಕೇಳಿದಾಗ ...ವರು ಉತ್ತರಿಸಿದ್ದು ಹೀಗೆ: "ನೋಡಿ ಸ್ವಾಮಿ, ...ಾವುದೇ ಕಾರಣಕ್ಕೂ ಮುಂದಿನ ಮೂರು ...ರ್ಷಗಳ ಕಾಲ ನಾನು ಇಷ್ಟು ದೊಡ್ಡ ...ಜೆಟ್ ಅಥವಾ ಇಷ್ಟು ದೊಡ್ಡ ಸವಾಲಿನ ...ತ್ರವನ್ನು ಒಪ್ಪುವುದಿಲ್ಲ. ಬಹುಶಃ ...ೂರು ವರ್ಷಗಳ ನಂತರ ಇಂತಹ ...ತ್ರ ಮಾಡುವ ಬಗ್ಗೆ ನಾನು ...ತ್ತೊಮ್ಮೆ ...ಯೋಚಿಸಬಹುದು."

"ಆದರೆ ...ಯಣ್ಣನ ಪಾತ್ರ ...ಮಗೆ ಹೆಚ್ಚು ...ಾಪ್ಯುಲಾರಿಟಿಯನ್ನು ...ಂದುಕೊಟ್ಟಿದೆಯಲ್ಲವೆ?" ...ಂದು ಕೇಳಿದರೆ ದರ್ಶನ್ ಉತ್ತರಿಸಿದ್ದು ಹೀಗೆ: ...ಜ! ನನ್ನ ವೃತ್ತಿಜೀವನದಲ್ಲಿ 'ಸಂಗೊಳ್ಳಿ ರಾಯಣ್ಣ' ...ತ್ರ ಖಂಡಿತವಾಗಿಯೂ ದೊಡ್ಡ ಮೈಲುಗಲ್ಲು. ...ಾಗಂತ ಪ್ರತಿ ಬಾರಿಯೂ ನಾನು ಈ ...ಾದರಿಯ ಚಿತ್ರವನ್ನು ಮಾಡಬೇಕೆಂದು ...ರ್ಥವಿಲ್ಲ ತಾನೆ? ಇಂತಹ ಚಿತ್ರ ನಿರ್ಮಾಣ ...ಾಡಲು ಗಂಡೆದೆಯ ನಿರ್ಮಾಪಕ ಬೇಕು. ...ಷ್ಟೇ ಅಲ್ಲ, ಅದಕ್ಕಾಗಿ ಸಾಕಷ್ಟು ಸಮಯವನ್ನು ...ಂಡ ನಾವು ವ್ಯಯಿಸಬೇಕು. ಅದು ...ುಲಭವಲ್ಲ."

ಇಷ್ಟು ಹೇಳಿದ ದರ್ಶನ್ ಸುಮ್ಮನೆ ...ಮಾಷೆಗಾಗಿ "ಮುಂದಿನ ಮೂರು ವರ್ಷಗಳ ...ಲ ಹೊಟ್ಟೆಪಾಡಿಗಾಗಿ ಒಂದಿಷ್ಟು ...ಮರ್ಷಿಯಲ್ ಚಿತ್ರಗಳಲ್ಲಿ ನಟಿಸುತ್ತೇನೆ. ...ನಂತರ ಮನಸ್ಸಿಗೆ ಇಷ್ಟವಾಗುವ ಇಂತಹ ...ಂದು ಚಿತ್ರದಲ್ಲಿ ನಟಿಸುತ್ತೇನೆ" ಎಂದರು.

ಒಬ್ಬ ನಟ ಈ ರೀತಿ ತನ್ನ ...ೃತ್ತಿಜೀವನವನ್ನು ಪ್ಲಾನ್ ಮಾಡುವುದು ...ಎಲ್ಲರೂ ಮೆಚ್ಚುವಂತಹದ್ದು.



ಹೊಸಬರ 'ಪದೇ ಪದೇ'

ಮೊನ್ನೆ 'ಪದೇ ಪದೇ' ಎಂಬ ಹೆಸರಿನ ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. ಈ ಚಿತ್ರದ ನಿರ್ಮಾಪಕ, ನಿರ್ದೇಶಕ ನಾಗರಾಜ್, ನಾಯಕಿಯರಾದ ಅಖಿಲ ಮತ್ತು ಮೃದುಲ, ಸಂಗೀತ ನಿರ್ದೇಶಕ ಸತೀಶ್, ಗೀತರಚನಕಾರ ಎಲ್ಲರೂ ಹೊಸಬರು. ಚಿತ್ರದ ನಾಯಕ ತರುಣ್ ಮಾತ್ರ ಇದ್ದುದರಲ್ಲಿ ಹಳೆಮುಖ ಎಂದು ಹೇಳಬಹುದು.

ಅಂದಹಾಗೆ 'ಪದೇ ಪದೇ' ಚಿತ್ರದ ಹಾಡೊಂದನ್ನು ಈಗಾಗಲೇ ಯೂ ಟ್ಯೂಬ್‌ನಲ್ಲಿ 11 ಲಕ್ಷ ಜನ ವೀಕ್ಷಿಸಿದ್ದಾರೆ. ಹೀಗೆ ಚಿತ್ರ ಬಿಡುಗಡೆಯಾಗುವ ಮೊದಲೇ ಅಥವಾ ಚಿತ್ರದ ಧ್ವನಿಸುರುಳಿ ಬಿಡುಗಡೆಯಾಗುವ ಮೊದಲೇ ಅದನ್ನು ಯೂ ಟ್ಯೂಬ್‌ನಲ್ಲಿ ಬಿಡುಗಡೆ ಮಾಡುವುದು ಹೊಸ ಟ್ರೆಂಡ್ ಆಗಿದೆ. ಇತ್ತೀಚೆಗೆ 'ಗೋವಿಂದಾಯ ನಮಃ' ಚಿತ್ರದ 'ನಂದೂಕೆ ಪ್ಯಾರ್ ಆಗಿಬಿಟ್ಟೈತೆ' ಹಾಡು ಕೂಡ ಚಿತ್ರ ಬಿಡುಗಡೆಯಾಗುವ ಮೊದಲೇ ಅಂತರ್ಜಾಲದಲ್ಲಿ ಎಲ್ಲರ ಮನಸ್ಸನ್ನು ಗೆದ್ದಿತ್ತು.

'ಪದೇ ಪದೇ' ಸಿನಿಮಾದ ವಿಚಾರದಲ್ಲೂ ಈ ಟ್ರೆಂಡ್ ಪದೇ ಪದೇ ಅನಾವರಣ ಆಗುತ್ತದೋ? ಕಾದು ನೋಡೋಣ...




ಕೊಬ್ಬರಿ ಮಂಜುರ ರಾಜಕೀಯ ಕುಲಾವಿ

"ಕೂಸು ಹುಟ್ಟುವ ಮುನ್ನ ಕುಲಾವಿ ಹೊಲಿಸಿದರು" ಎಂಬ ಗಾದೆ ಮಾತನ್ನು ನೀವು ಕೇಳಿರುತ್ತೀರಿ. ಆ ಮಾತು ನಮ್ಮ ಚಿತ್ರರಂಗದಲ್ಲಿ ಸದ್ಯದ ಮಟ್ಟಿಗೆ ನಿರ್ಮಾಪಕ ಕೊಬ್ಬರಿ ಮಂಜ ಅವರಿಗೆ ಸರಿಹೊಂದುತ್ತದೆ. ಏಕೆಂದರೆ ಮೊನ್ನೆ ತುರುವೆಕೆರೆಯಲ್ಲಿ ಅವರ ನಿರ್ಮಾಣದ 'ರಜನಿಕಾಂತ್' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭವನ್ನು ಅವರು ಅದ್ದೂರಿಯಾಗಿ ಮಾಡಿದರಲ್ಲದೆ ಅದಕ್ಕೆ ರಾಜಕೀಯ ಟಚ್ಚೂ ಕೊಟ್ಟರು.

'ಗಂಡುಗಲಿ ಮಂಜು' ಎಂದೇ ಚಿತ್ರರಂಗದಲ್ಲಿ ಖ್ಯಾತಿ ಪಡೆದಿರುವ ಮಂಜು ಅವರು ಅತ್ಯಂತ ದೊಡ್ಡ ನಿರ್ಮಾಪಕರು. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಅವರಿಗೆ ರಾಜಕೀಯದ ಗುಂಗು ಹತ್ತಿಕೊಂಡಿದೆ. ಗಾಂಧಿನಗರದಿಂದ ನೇರವಾಗಿ ವಿಧಾನಸೌಧಕ್ಕೆ ಹೋಗುವ ಹಂಬಲ ಅವರಲ್ಲಿ ದಿನೇದಿನೇ ಹೆಚ್ಚಾಗುತ್ತಿದೆ. ಕಳೆದ ಎರಡು ಅಸೆಂಬ್ಲಿ ಚುನಾವಣೆ ಸಂದರ್ಭಗಳಲ್ಲಿ ಅವರು ಬೆಂಗಳೂರಿನ ಚಾಮರಾಜಪೇಟೆ ಕ್ಷೇತ್ರದಿಂದ ಸ್ಪರ್ಧಿಸುವ ಅಭಿಲಾಶೆಯನ್ನು ವ್ಯಕ್ತಪಡಿಸಿದ್ದರೂ ಯಾವ ಪಕ್ಷವೂ ಅವರನ್ನು ಕರೆದು ಟಿಕೆಟ್ ಕೊಟ್ಟಿರಲಿಲ್ಲ.

ಆ ಕಾರಣಕ್ಕೋ ಏನೋ ಅವರು ಇತರೆ ಮಾಮೂಲಿ ರಾಜಕಾರಣಿಗಳಿಗಿಂತ ಮೊದಲೇ ತಮ್ಮ ಚುನಾವಣಾ ಅಖಾಡವನ್ನು ತುರುವೆಕೆರೆಯಲ್ಲಿ ಸ್ವತಃ ಸಿದ್ಧಗೊಳಿಸಿದ್ದಾರೆ. ತುರುವೆಕೆರೆಯ ಪಕ್ಕದ ಗ್ರಾಮದಲ್ಲಿ ಹುಟ್ಟಿದ ಮಂಜು ಅವರ 'ರಜನಿಕಾಂತ್' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭಕ್ಕೆ ಸಿನಿಮಾ ಹೀರೋಗಳಾದ ಸುದೀಪ್, ಉಪೇಂದ್ರ, ಗಣೇಶ್ ಮತ್ತು ರಮೇಶ್ ಅರವಿಂದ್ ಬಂದಿದ್ದರಲ್ಲದೆ ಸಚಿವ ರಾಜೂ ಗೌಡ ಕೂಡ ಹಾಜರಾಗಿದ್ದರು. ಜೊತೆಗೆ 'ರಜನಿಕಾಂತ್' ಚಿತ್ರದ ನಾಯಕ ದುನಿಯಾ ವಿಜಿ, ನಾಯಕಿ ಐಂದ್ರಿತಾ ರೈ ಮತ್ತು ಇತರೆ ಕಲಾವಿದರೂ ಬಂದಿದ್ದರು. ತುರುವೆಕೆರೆಯ ಇತಿಹಾಸದಲ್ಲೇ ಇಷ್ಟೊಂದು 'ಸ್ಟಾರ್‌ಗಳು' ಒಂದೇ ವೇದಿಕೆಯಲ್ಲಿದ್ದದ್ದು ಇದೇ ಮೊದಲೇನೋ!

ಈ ಸಮಾರಂಭದಲ್ಲಿ ಮಂಜು ಅವರು ಆ ಊರಿನ ಅನೇಕ ಗಣ್ಯರನ್ನು ಸನ್ಮಾನಿಸಿದರು. ಹೇರ್ ಕಟ್ಟಿಂಗ್ ಮಾಡುವವರಿಂದ ಹಿಡಿದು ದಂತವೈದ್ಯರ ತನಕ ಲೆಕ್ಕವಿಲ್ಲದಷ್ಟು ಜನರಿಗೆ ಅಂದು ಸನ್ಮಾನಿಸಲಾಯಿತು. ಬಹುಶಃ ಅಂದು ತುರುವೆಕೆರೆಯಲ್ಲಿ ಸನ್ಮಾನ ಮಾಡಿಸಿಕೊಳ್ಳದವರೇ ಕಡಿಮೆ ಎನ್ನಬಹುದು. ಅಷ್ಟೇ ಅಲ್ಲ ಸಮಾರಂಭದ ಕೊನೆಯಲ್ಲಿ ಮಂಜು ತುಂಬಾ ಭಾವುಕರಾದರು. ಎಷ್ಟರ ಮಟ್ಟಿಗೆ ಎಂದರೆ ಈ ಹಿಂದೆ ದಾವಣಗೆರೆಯಲ್ಲಿ ಸಚಿವ ರೇಣುಕಾಚಾರ್ಯ ಕ್ರಿಕೆಟ್ ಪಂದ್ಯಾವಳಿಯೊಂದರಲ್ಲಿ ನೃತ್ಯ ಮಾಡಿದಂತೆ ಮಂಜು ಕೂಡ ಸಖತ್ತಾಗಿ ಡ್ಯಾನ್ಸ್ ಮಾಡಿದರು.




ಈಗ ವಿಷಯಕ್ಕೆ ಬರೋಣ. ಅದೇನೆಂದರೆ ಈ ಬಾರಿ ಏನೇ ಆದರೂ ತುರುವೆಕೆರೆಯಿಂದ ವಿಧಾನಸಭೆಗೆ ಸ್ಪರ್ಧಿಸಲೇಬೇಕೆಂದು ಮಂಜು ನಿರ್ಧರಿಸಿದ್ದಾರಂತೆ. ಅದಕ್ಕಾಗಿ ಅವರು ತುಂಬಾ ಜಾಣ್ಮೆಯಿಂದ ಈ ತಾರಾಮೇಳವನ್ನು ಏರ್ಪಡಿಸಿದ್ದರು. ಇಂತಹ ಕಾರ್ಯಕ್ರಮವನ್ನು ನಡೆಸಿದರೆ ರಾಜಕೀಯ ಪಕ್ಷದವರು ತಮ್ಮನ್ನು ಕರೆದು ಟಿಕೆಟ್ ಕೊಡುತ್ತಾರೆ ಎಂದು ಮಂಜು ನಂಬಿರುವಂತಿದೆ.

ಕಳೆದ ವರ್ಷ ಜೆಡಿಎಸ್ ಪರ ಜೈ ಎನ್ನುತ್ತಿದ್ದ ಮಂಜು ಚಿತ್ತ ಈ ಬಾರಿ ಯಡಿಯೂರಪ್ಪ ನೇತೃತ್ವದ ಕೆಜೆಪಿಯತ್ತ ನೆಟ್ಟಿದೆ. ಆದರೆ ತುರುವೆಕೆರೆಯಿಂದ ಯಡಿಯೂರಪ್ಪನ ಬಲಗೈ ಬಂಟ ಎನಿಸಿಕೊಂಡಿರುವ ಎಂ.ಬಿ.ಲಕ್ಷ್ಮಿನಾರಾಯಣ್ ಸ್ಪರ್ಧಿಸುವ ಸಾಧ್ಯತೆ ಹೆಚ್ಚು ಕಾಣಿಸುತ್ತಿದೆ. ಅಂದಹಾಗೆ ಬಿಜೆಪಿಯ ಒಡ್ಡೋಲಗದ ಭಾಗವಾಗಿರುವ ಚಿತ್ರೋದ್ಯಮದ ತಾರಾ, ಜಗ್ಗೇಶ್, ಶ್ರೀನಾಥ್ ಮತ್ತು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ವಿಜಯಕುಮಾರ್ ಗೈರುಹಾಜರಾಗಿದ್ದರು.

ಬರುವ ದಿನಗಳಲ್ಲಿ ಮಂಜು ಯಾವ ಪಕ್ಷ ಸೇರುತ್ತಾರೆ ಎಂದು ಉದ್ಯಮದಲ್ಲಿ ಚರ್ಚೆ ನಡೆಯುತ್ತಿದೆ. ಒಂದಂತೂ ನಿಜ. ತುರುವೆಕೆರೆಯಲ್ಲಿ ಒಂದು ಸಿನಿಮೀಯ ಕಾರ್ಯಕ್ರಮವನ್ನು ನಡೆಸುವ ಮೂಲಕ ಯಾವ ರಾಜಕಾರಣಿಯೂ ಯೋಚಿಸಲಾಗದ ರೀತಿಯಲ್ಲಿ ಮಂಜು ಪರೋಕ್ಷವಾಗಿ ರಾಜಕೀಯಕ್ಕೆ ಕಾಲಿರಿಸಿದ್ದಾರೆ. ಮುಂದಿನದ್ದೆಲ್ಲ ಮಂಜು ಪಾಲಿಗೆ ಕ್ಲೈಮಾಕ್ಸ್ ಆಗಲಿದೆ!

• ಶ್ರೇಷ್ಠ



... 2012ರ ಸಂಚಿಕೆ) ಎರಡೂ ಕೂಡ ತುಂಬಾ ...ರ್ಥಗರ್ಭಿತವಾಗಿವೆ, ಥ್ಯಾಂಕ್ ಯು.

-ವರದರಾಜು, ಮದ್ದೂರು

'ಸುಡಿಸಿರಿ'ಯಲ್ಲಿ ಡಾ. ವಿನಯಾ ಅವರು ...ಂಡಿಸಿದ ಭಾಷಣದ ರೂಪಾಂತರವನ್ನು ಪ್ರಕಟಿಸಿದ್ದೀರಿ ...ಡಿಸೆಂಬರ್ 5, 2012ರ ಸಂಚಿಕೆ); ವಂದನೆಗಳು. ...ನೂ ಈ ವರ್ಷದ 'ಸುಡಿಸಿರಿ' ...ಲ್ಲಿ ಭಾಗವಹಿಸಿದ್ದೆ. ...ವಿನಯಾ ಅವರ 'ಕವಿ ...ಮಯ' ಇದೀ ...ಾರ್ಯಕ್ರಮದಲ್ಲಿ ಗಮನ ...ೆದುದಷ್ಟೇ ಅಲ್ಲ, ...ಭಾಷಾಂತರನ್ನು ಚಿಂತನೆಗೆ ...ಚ್ಚುವಂತೆ ಮಾಡಿದ ...ಾರ್ಯಕ್ರಮವೆಂದರೆ ತಪ್ಪಲ್ಲ. ವಿನಯಾ ಅವರ ...ಮಾತುಗಳನ್ನು ಪ್ರಕಟಿಸಿ, ಉಪಕರಿಸಿದುದಕ್ಕೆ ...ವಂದನೆಗಳು. ಅವರ ವಿಳಾಸವನ್ನು ಕೊಟ್ಟಿದ್ದರೆ ...ಶ್ರಯವಾಗುದಿತ್ತು.

-ಕೇಶವ ಪೆರಾಜೆ, ಮಡಿಕೇರಿ

... ಸಾಮಂತ್ರಿಯವರು ಬರೆದ ಲೇಖನ "ಜಗತ್ತಿನ ಅತಿ ...ಜ ಅಧ್ಯಕ್ಷ (ಡಿಸೆಂಬರ್ 5, 2012) ತುಂಬಾ ಚೆನ್ನಾಗಿತ್ತು. ... ಲೇಖನವನ್ನು ನಾನು ಕೊಂಕಣಿ ಭಾಷೆಗೆ ಅನುವಾದಿಸುವ ...ೂಲಕ ಇನ್ನೂ ಹೆಚ್ಚು ಜನರಿಗೆ ತಲುಪುವಂತೆ ...ಡುತ್ತೇನೆ. ಇಂತಹ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

-ರೋನಾಲ್ಡ್ ಮೋನಿಸ್, ಹಾಸನ

ದರ್ಶನ್ ನಟಿಸಿರುವ 'ಸಂಗೊಳ್ಳಿ ರಾಯಣ್ಣ' ಸಿನಿಮಾ ಬಗ್ಗೆ ಸದಾಶಿವ ಶೆಣೈ ಅವರು 'ಸೂಪರ್' ಎಂದು ಬರೆದಾಗ 'ರಾಜ್ ಭಜನಾಮಂಡಳಿ'ಯಂತಿರುವ ನಿಮ್ಮ ಪತ್ರಿಕೆಯ ತಂಡದಿಂದ ಇಂತಹ ವರದಿ ಪ್ರಕಟಗೊಂಡಿದ್ದನ್ನು ನೋಡಿ ನಾನು ಅಚ್ಚರಿಗೊಂಡಿದ್ದೆ. ಆಮೇಲೆ ಗೊತ್ತಾಯಿತು ನಿಮ್ಮ ಟ್ರಿಕ್ಕು. ದರ್ಶನ್ ಮಾಡಿದರೆ ಕಿರುಚಾಟ, ರಾಜ್ ಮಾಡಿದರೆ ಘರ್ಜನೆಯೋ? ರಾಯಣ್ಣ ಪಾತ್ರಕ್ಕೆ ವೀರಾವೇಶದ ಹೊರತು ಬೇರೆ ಯಾವ ಪ್ರದರ್ಶನವೂ ಬೇಕಿಲ್ಲ. ರಾಜ್‌ಕುಮಾರ್ ಅವರೊಂದಿಗೆ ದರ್ಶನ್‌ನನ್ನು ಹೋಲಿಸಿರುವುದೇ ಅಸಂಬದ್ಧ. ಒಬ್ಬ ವ್ಯಕ್ತಿಯ ಬಗ್ಗೆ ಅಸೂಯೆ, ದ್ವೇಷ ಬೆಳೆಸಿಕೊಂಡಿರುವವರಿಗೆ ಆತನ ಬಗ್ಗೆ ಒಂದೇ ಒಂದು ಒಳ್ಳೆಯ ಮಾತೂ ಸಹಿಸಲಾಗುವುದಿಲ್ಲ. ರಾಜ್ ಮತ್ತು ಅವರ ಪುತ್ರರತ್ನಗಳ ಹೊರತು ಬೇರೆಯವರ ಸಿನಿಮಾಗಳು ಯಶಸ್ವಿಯಾಗಬಾರದೇ?

ಎಲ್ಲರ ಬಗ್ಗೆಯೂ ವಸ್ತುನಿಷ್ಠವಾಗಿ ಬರೆಯುವ ನಿಮ್ಮ ಪತ್ರಿಕೆ ದರ್ಶನ್ ಬಗ್ಗೆ ಮಾತ್ರ ಯಾಕೆ ಹೀಗೆ?

-ಕೆ.ವಿ.ಚಂದ್ರಜ್ಯೋತಿ, ತುಮಕೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಕೋಟ್ಯಾಧಿಪತಿಗೆ ಪುನೀತ್ ವಾಪಸ್



'ಯಾರೇ ಕೂಗಾಡಲಿ' ಚಿತ್ರ ಸದ್ಯದಲ್ಲೇ ತೆರೆಕಾಣಲಿದೆ. ಇದರಲ್ಲಿ ನಟಿಸಿರುವ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಈ ಚಿತ್ರ ಬಿಡುಗಡೆಯಾದ ನಂತರ ಸುಮಾರು ನಾಲ್ಕು ತಿಂಗಳುಗಳ ಕಾಲ ಯಾವುದೇ ಹೊಸ ಚಿತ್ರಕ್ಕೆ ಸಹಿ ಹಾಕುವುದಿಲ್ಲವಂತೆ. ಅಂದಮಾತ್ರಕ್ಕೆ ಪುನೀತ್ ಮುಂದಿನ ನಾಲ್ಕು ತಿಂಗಳ ಕಾಲ ರಜಾ ತೆಗೆದುಕೊಂಡು ಮಜಾ ಮಾಡುತ್ತಾರೆ ಎಂದರ್ಥವಲ್ಲ. ಬದಲಾಗಿ ಬರುವ ಜನವರಿಯಿಂದ ಅವರು 'ಕನ್ನಡದ ಕೋಟ್ಯಾಧಿಪತಿ ಭಾಗ-2' ಟಿವಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅದರ ಮಧ್ಯೆಯೇ ಸಮಯ ಸಿಕ್ಕಾಗ ಹೊಸ ಚಿತ್ರದ ಸ್ಕ್ರಿಪ್ಟ್‌ಗಳನ್ನು ಅಲ್ಲಿ-ಇಲ್ಲಿ ಚರ್ಚಿಸಲಿದ್ದಾರಂತೆ.

ಒಂದು ಚಿತ್ರ ಮುಗಿದ ತಕ್ಷಣ ಮರುದಿನವೇ ಇನ್ನೊಂದು ಚಿತ್ರಕ್ಕೆ ಹಾಜರಾಗುವ ನಮ್ಮ ಅನೇಕ ನಾಯಕ-ನಾಯಕಿಯರ ನಡುವೆ ಪುನೀತ್ ತನ್ನ ಸಮಯವನ್ನು ಕುಟುಂಬಕ್ಕೆ ಮತ್ತು ಇತರ ಕಾರ್ಯಕ್ರಮಗಳಿಗೆ ವ್ಯಯಿಸಿರುವುದು ಗಮನಾರ್ಹ.

ಅಂದಹಾಗೆ, ಕಿರುತೆರೆಯಲ್ಲಿ 'ಕನ್ನಡದ ಕೋಟ್ಯಾಧಿಪತಿ' ಅತ್ಯಂತ ಹೆಚ್ಚು ರೇಟಿಂಗ್ ಪಡೆದ ಕಾರ್ಯಕ್ರಮ ಎಂಬ ಹೆಗ್ಗಳಿಕೆಯನ್ನು ಗಳಿಸಿತ್ತು. ಈಗ ಎರಡನೇ ಕಂತಿನಲ್ಲೂ ಪುನೀತ್ ತನ್ನ ಮಾತಿನ ಚಾತುರ್ಯದಿಂದ ಕೋಟ್ಯಾಂತರ ಕನ್ನಡಿಗರ ಮನಸ್ಸನ್ನು ಗೆಲ್ಲುತ್ತಾರೋ ಎಂಬುದೇ ಕೋಟಿ ರೂಪಾಯಿಯ ಪ್ರಶ್ನೆಯಾಗಿದೆ!

ರಾಜೇಶರ 'ನಗೆ ಬಾಂಬ್'



ಸಂಗೀತ ನಿರ್ದೇಶಕ ರಾಜೇಶ್ ರಾಮನಾಥನ್ ಬಹಳ ಸಮಯದ ನಂತರ ಮತ್ತೆ ಸುದ್ದಿಯಲ್ಲಿದ್ದಾರೆ. ಆದರೆ ಸಂಗೀತ ನಿರ್ದೇಶನ ಮಾಡುವ ಮುಖಾಂತರವಲ್ಲ, ಈ ಬಾರಿ ಅವರು ನಿರ್ಮಾಪಕರಾಗಿ ಗಾಂಧಿನಗರದಲ್ಲಿ ಚಲಾವಣೆಗೆ ಬರುತ್ತಿದ್ದಾರೆ.

ಬಹಳ ಹಿಂದೆ 'ಬ್ಲಾಕ್ ಅಂಡ್ ವೈಟ್' ಎಂಬ ಚಿತ್ರದಲ್ಲಿ ರಾಜೇಶ್ ನಾಯಕನಾಗಿ ನಟಿಸಿದ್ದರು. ಆದರೆ ಆ ಚಿತ್ರ ಬಾಕ್ಸ್ ಆಫೀಸಿನಲ್ಲಿ ಮುಗ್ಗರಿಸಿತ್ತು. ಆನಂತರ ರಾಜೇಶ್ ಮತ್ತೆ ನಾಯಕ ನಟನಾಗುವ ಪ್ರಯತ್ನ ಮಾಡಲೇ ಇಲ್ಲ. ಅದರ ಬದಲಿಗೆ ಇಡೀ ದಕ್ಷಿಣ ಭಾರತದಲ್ಲೇ ಅತ್ಯಂತ ಆಧುನಿಕವಾದ ವ್ಯವಸ್ಥೆಯಿರುವ ಒಂದು ರೀ ರೆಕಾರ್ಡಿಂಗ್ ಥಿಯೇಟರ್‌ನ್ನು ರಾಜೇಶ್ ಪ್ರಾರಂಭಿಸಿದರು.

ಈಗ ರೀ ರೆಕಾರ್ಡಿಂಗ್ ಸ್ಟುಡಿಯೋ ಮಾಲಿಕರಾಗಿರುವ ರಾಜೇಶ್ ಚಿತ್ರ ನಿರ್ಮಾಣ ಮಾಡುವತ್ತ ಗಮನಹರಿಸಿದ್ದಾರೆ. ಈ ಚಿತ್ರವನ್ನು ನಿರ್ದೇಶಿಸುವ ಜವಾಬ್ದಾರಿಯನ್ನು ಸಂಕಲನಕಾರರೂ ಆಗಿರುವ ನಾಗೇಂದ್ರ ಅರಸ್ ಅವರಿಗೆ ನೀಡಿದ್ದಾರೆ. ಚಿತ್ರದ ನಾಯಕ ನಟರಾಗಿ ರವಿಶಂಕರ್ ಗೌಡ ಕಾಣಿಸಿಕೊಳ್ಳಲಿ[illegible] ಅಂದಹಾಗೆ, ಚಿತ್ರಕ್ಕೆ 'ನಗೆ ಬಾಂಬ್- ಭಾಗ 1' ಎಂಬ ಹೆಸರನ್ನಿಟ್ಟಿದ್[illegible] ಇತ್ತೀಚೆಗೆ ಹಾಸ್ಯ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿರುವ ಹಿನ್ನೆಲೆಯಲ್ಲಿ ಬಹುಶಃ ರಾಜೇಶ್ ರಾಮನಾಥ್ ಕೂಡ ಜನರನ್ನು ರಂಜಿಸಲು ಹೊರಟಂತಿದೆ.



'ನಿಂಬೆ ಹುಳಿ' ಕೋಮಲಜ

ಶ್ರೀಲಂಕಾದಲ್ಲಿ ರಾಜ್ ಕಪ್

ಕಳೆದ ನಾಲ್ಕು ವರ್ಷಗಳಿಂದ ಕನ್ನಡ ಸಿನಿಮಾರಂಗ ನೃತ್ಯ ನಿರ್ದೇಶಕರ ಸಂಘವು ಯಶಸ್ವಿಯಾಗಿ ಏರ್ಪಡಿಸುತ್ತಾ ಬಂದಿರುವ 'ರಾಜ್ ಕಪ್ ಕ್ರಿಕೆಟ್ ಟೂರ್ನಮೆಂಟ್' ಈಗ ಒಂದು ಹೊಸ ಆಯಾಮವನ್ನು ಪಡೆದಿದೆ. ಈ ವರ್ಷದ ಟೂರ್ನಮೆಂಟ್ ಒಂದು ತಿಂಗಳ ಹಿಂದೆ ದೂರದ ಬಿಜಾಪುರದಲ್ಲಿ ಆರಂಭವಾಗಿ ಆನಂತರ ಬಾಗಲಕೋಟೆ ಮತ್ತು ಗುಲ್ಬರ್ಗಾದಲ್ಲೂ ನಡೆಯಿತು. ಮೊನ್ನೆ ದೊಡ್ಡಬಳ್ಳಾಪುರದಲ್ಲಿ ಈ ಟೂರ್ನಮೆಂಟ್‌ನ ಸೆಮಿಫೈನಲ್ ಕೂಡ



ಯಶಸ್ವಿಯಾಗಿ ಮುಗಿದಿದೆ. ಈಗ ರಾಜ್ ಕಪ್‌ನ ಫೈನಲ್ ಪಂದ್ಯ ನಡೆಯಲಿದೆ. ಅದೂ ಬಹು ದೂರದ ಶ್ರೀಲಂಕಾದಲ್ಲಿ! ಈ ಟೂರ್ನಮೆಂಟ್ ಆರಂಭವಾದ ನಾಲ್ಕೇ ವರ್ಷಗಳಲ್ಲಿ ಇದನ್ನು ವಿದೇಶದಲ್ಲಿ ನಡೆಸುವಷ್ಟು ಬೆಳೆಸಿದ್ದಾರೆ ನೃತ್ಯ ನಿರ್ದೇಶಕರ ಸಂಘದ ಮುಖ್ಯಸ್ಥರಾದ ರಾಜೇಶ್ ಬ್ರಹ್ಮಾವರ್ ಮತ್ತು ಚಂದ್ರಮಯೂರ್.

ಫೈನಲ್ಸ್ ಪಂದ್ಯದಲ್ಲಿ ಲೂಸ್ ಮಾದ ನಾಯಕತ್ವದ ಫೈಟರ್ಸ್ ತಂಡ ಮತ್ತು ಸಚಿವ ರಾಜೂ ಗೌಡ ನೇತೃತ್ವದ ಶಾಸಕರ ತಂಡ ಪರಸ್ಪರ ಸೆಣಸಾಡಲಿದೆ. ಶ್ರೀಲಂಕಾದಲ್ಲಿ ಡಿಸೆಂಬರ್ 16 ರಂದು ನಡೆಯಲಿರುವ ಈ ಪಂದ್ಯಕ್ಕಾಗಿ ಬೆಂಗಳೂರಿನಿಂದ ಸುಮಾರು ಇನ್ನೂರು ಜನ ಹೋಗಲಿದ್ದಾರಂತೆ.

ಅದೇನೇ ಇರಲಿ, ಕನ್ನಡ ಚಿತ್ರಗಳು ಶ್ರೀಲಂಕಾದಲ್ಲಿ ಬಿಡುಗಡೆಯಾಗದಿದ್ದರೂ ಪರವಾಗಿಲ್ಲ, ಕನ್ನಡ ಚಲನಚಿತ್ರರಂಗದ ಕಲಾವಿದರು ಶ್ರೀಲಂಕಾದಲ್ಲಿ ಆಟವಾಡಲು ಹೋಗುತ್ತಿರುವುದು ಒಂದು ವಿಶೇಷವೇ ಸರಿ.

ಬಾಲಿವುಡ್ಡಿ[illegible] ಕನ್ನಡದ ತಂತ್ರ[illegible] ಎಂ[illegible]

ಸಾಹಸ ನಿರ್ದೇಶಕ ರವಿವರ್ಮನ ಹೆಸರ[illegible] ಸಿನಿಮಾ ಪ್ರೇಕ್ಷಕರಿಗೆ ಚಿರಪರಿಚಿತ. ಏಕೆಂದರೆ ರ[illegible] ಬಹುತೇಕ ಎಲ್ಲ ನಾಯಕನಟರಿಗೂ ಸ್ಟಂಟ್ [illegible] ಮಾಡಿರುವವರು. ಸುದೀಪ್, ವಿಜಯ್, [illegible] ರಾಜ್‌ಕುಮಾರ್, ದರ್ಶನ್ ಮತ್ತು ಶಿವರಾಜ್‌ಕ[illegible] ಇವರೆಲ್ಲರಿಗೂ ರವಿವರ್ಮ ಅಚ್ಚುಮೆಚ್ಚಿನ ಸ್ಟಂಟ್ ದ[illegible] ಈ ಎಲ್ಲಾ ನಾಯಕನಟರ ಚಿತ್ರಗಳಲ್ಲಿ ರವಿವರ್ಮನಿ[illegible] ಒಂದಾದರೂ ಹೊಡೆದಾಟ ದೃಶ್ಯವನ್ನು ಚಿತ್ರೀಕರಿಸುವ [illegible] ಇದ್ದೇ ಇರುತ್ತದೆ.



ಸುದ್ದಿ ಏನೆಂದರೆ ಈ ರವಿವರ್ಮ ಈಗ ಬಾಲಿವುಡ್‌ಗೆ ಪಾ[illegible] ಮಾಡುತ್ತಿದ್ದಾರೆ. ಈ ಹಿಂದೆ ಅಕ್ಷಯ್ ಕುಮಾರ್ ನಟಿಸಿದ್ದ ಪ್ರ[illegible] ನಿರ್ದೇಶಿಸಿದ್ದ 'ರೌಡಿ ರಾಥೋಡ್' ಎಂಬ ಹಿಂದಿ ಚಿತ್ರದಲ್[illegible] ಡೈರೆಕ್ಟರ್ ಆಗಿ ಕೆಲಸ ಮಾಡುವ ಆಫರ್ ರವಿವರ್ಮ [illegible] ಬಂದಿತ್ತು. ಆದರೆ ಆಗ ಅವರು ತೆಲುಗು ಚಿತ್ರವೊ[illegible] ಬಿಜಿಯಾಗಿದ್ದರಿಂದ ಆ ಅವಕಾಶವನ್ನು ಕಳೆದುಕೊಂಡಿದ್ದರು[illegible] ಇದೀಗ ಮತ್ತೆ ಸ್ವತಃ ಪ್ರಭುದೇವ್ ತನ್ನ ಮುಂದಿನ ಹಿಂದಿ [illegible] ರವಿವರ್ಮಗೆ ಮತ್ತೊಮ್ಮೆ ಅವಕಾಶ ನೀಡಿದ್ದಾರೆ.

ಕನ್ನಡದ ನಟ ಸುದೀಪ್ ಹಿಂದಿ ಮತ್ತು ತೆಲುಗು ಚಿತ್ರ[illegible] ವಿಜೃಂಭಿಸಿದ ನಂತರ ಕನ್ನಡದ ತಂತ್ರಜ್ಞರೊಬ್ಬರು ಹಿಂದಿ ಚಿತ್ರ[illegible] ಅವಕಾಶ ಪಡೆಯುತ್ತಿರುವುದು ಎಲ್ಲರೂ ಹೆಮ್ಮೆ ಪಡಬಹುದಾದ [illegible]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone [illegible]
Fax : 26604526 [illegible]